ಒಂದು, ನಾವಿಬ್ಬರೂ ಬೇರೆಯಾದರೆ, ರಮೇಶನಿಗೆ ಪ್ರಾರಂಭದಲ್ಲಿ ಸ್ವಲ್ಪ ಬೇಸರವಾಗಬಹುದು. ನಂತರ ಅದೇ ಅಭ್ಯಾಸವಾಗಿ ಕಡೆಗೆ ಒಳ್ಳೆಯದೇ ಆಯಿತು ಎಂದು ಆರಾಮಾಗಿರುತ್ತಾನೆ. ಆವನಂತೂ ಒಂದಾಗಲು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಅವನಿಗೆ ಇಷ್ಟು ಸಲೀಸಾಗಿ ಸ್ವಾತಂತ್ರ್ಯ ಕೊಡುವುದೆ? ಮಕ್ಕಳಿಗೂ ಕಷ್ಟವಾಗುವುದಿಲ್ಲವೇ? ಆರ್ಥಿಕವಾಗಿ ಇದೇ ಮಟ್ಟದಲ್ಲಿರಲು ಅಸಾಧ್ಯ. ಮಕ್ಕಳ ಜೀವನದಲ್ಲಿ ಯಾವುದೇ ರೀತಿಯ ಏರುಪೇರು ಆಗಕೂಡದು.
ಎರಡು, ರಮೇಶನನ್ನು ದಾರಿಗೆ ತಂದೇ ತರುತ್ತೇನೆ ಎಂದು ಹೇಳುವುದಂತೂ ಅಸಾಧ್ಯ. ಏನೇ ಮಾಡಿದರೂ ಸರಿಯಾದಂತೆ ನಾಟಕವಾಡಿ ಮತ್ತೆ ಏನಾದರೂ ಮಾಡಿದರೆ? ಆದನ್ನು ಸಹಿಸುವ ಶಕ್ತಿ ನನಗಿದೆಯೆ?
ಯಾವುದೇ ದಾರಿ ತೆಗೆದುಕೊಂಡರೂ ನನಗಂತೂ ನೆಮ್ಮದಿಯಿಲ್ಲ. ಮಕ್ಕಳಿಗೆ ಯಾವುದು ಸರಿಯೋ ಅದನ್ನು ಮಾಡಬೇಕು. ಇವೆರಡರ ನಡುವಿನ ದಾರಿ ಕಂಡುಹಿಡಿಯಬೇಕು.

ಏಪ್ರಿಲ್ ೪

ಹೇಗಾದರೂ ಮಕ್ಕಳು ಕಾಲೇಜಿಗೆ ಹೋಗುವವರೆಗೂ ಒಂದಾಗಿರಬೇಕು. ನಮ್ಮ ನಡುವಿನ ತೊಂದರೆಗಳು ಮಕ್ಕಳಿಗೆ ತಿಳಿಯಬಾರದು. ರಮೇಶನನ್ನು ಆರ್ಥಿಕ ಜವಾಬ್ದಾರಿಯಿಂದ ಮುಕ್ತಗೊಳಿಸಬಾರದು. ಮಿಕ್ಕೆಲ್ಲ ಜವಾಬ್ದಾರಿಗಳನ್ನು ನಾನೇ ಹೊರಬೇಕು. ರಮೇಶನಿಂದ ಬೇರೇನನ್ನೂ ಅಪೇಕ್ಷಿಸಬಾರದು. ಹಾಗೇ ರಮೇಶನನ್ನೂ ದಾರಿಗೆ ತರುವ ಪ್ರಯತ್ನ ಮಾಡಬೇಕು. ನಾನು ಮಾತ್ರ ಎಲ್ಲಕ್ಕೂ ಸಿದ್ಧವಾಗಿರಬೇಕು. ಗ್ರೀನ್ ಕಾರ್ಡ್ ಬಂದೊಡನೆ ಕೆಲಸಕ್ಕೆ ಸೇರಬೇಕು. ಆಗ ಒಂದು ವೇಳೆ ಮತ್ತೆ ಏನಾದರೂ ಆದರೆ, ನಿಭಾಯಿಸುವ ಶಕ್ತಿ ಇರುತ್ತದೆ. ಮನೆಯಲ್ಲಿ ಕ್ರಮೇಣ ಆಧ್ಯಾತ್ಮಿಕತೆ, ಶಿಸ್ತು ಇವೆಲ್ಲವನ್ನೂ ಮಕ್ಕಳ ಮೂಲಕವೇ ತರಬೇಕು. ರಮೇಶನೊಂದಿಗೆ ಜಗಳ, ಚರ್ಚೆ ಯಾವುದೂ ಮಾಡಬಾರದು. ಅವನಿಗರಿವಿಲ್ಲದಂತೆಯೇ ಎಲ್ಲವನ್ನೂ ನನ್ನ ಹಿಡಿತಕ್ಕೆ ತೆಗೆದುಕೊಳ್ಳಬೇಕು. ಇದೆಲ್ಲ ಸುಲಭವಲ್ಲ. ಮನಸ್ಸು ಕಲ್ಲಾಗಬೇಕು. ಮಕ್ಕಳಿಗಾಗಿ ಏನನ್ನಾದರೂ ಸಹಿಸಿಕೊಳ್ಳಬೇಕು.
ನೆಮ್ಮದಿಯಾಯಿತು. ಇನ್ನು ಹೋಗಿ ಮಲಗುತ್ತೇನೆ.

ಏಪ್ರಿಲ್ ೫

ಇವತ್ತು ಮನಸ್ಸು ಎಷ್ಟೋ ಹಗುರವಾಗಿದೆ. ಆದರೂ ಒಂದು ಪ್ರಶ್ನೆ ಇತ್ತು. ಎಲ್ಲ ನಾನೆಣಿಸಿದಂತೆ ನಡೆದರೆ, ಮಕ್ಕಳು ಕಾಲೇಜಿಗೆ ಹೋದಮೇಲೆ ನನ್ನ ಜೀವನ? ಸರಿ ಆಗ ನೋಡೋಣ. ಆಶ್ಚರ್ಯವೋ ಎಂಬಂತೆ ರಮೇಶ ಬಂದು ಮಾತಾಡಿದ, ‘‘ಪ್ರಿಯ, ನಾನು ಮಾಡಿದ್ದು ತಪ್ಪು ಎಂದು ನನಗೂ ಅರಿವಾಗಿದೆ. ನಾನು ಇದೆಲ್ಲವನ್ನೂ ನಿಲ್ಲಿಸಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇನೆ.’’ ಕಿಟಕಿಯಲ್ಲಿ ಬಗ್ಗಿ ನೋಡಿದೆ, ಸೂರ್ಯ ಯಾವ ದಿಕ್ಕಿನಲ್ಲಿ ಉದಯಿಸಿದ್ದಾನೆ ಎಂದು. ರಮೇಶ ಮುಂದುವರೆಸಿದ ‘‘ಆದರೂ ನಾನೇನೂ ನಿನಗೆ ಮೋಸ ಮಾಡಬೇಕೆಂದು ಇದೆಲ್ಲ ಮಾಡಲಿಲ್ಲ. ಇದೇನೂ ಅಂತಹ ಮೋಸವೂ ಅಲ್ಲ. ಎಲ್ಲ ಗಂಡಸರೂ ಜೀವನದಲ್ಲಿ ಒಂದಲ್ಲ ಒಂದು ಸಲ ಇದೆಲ್ಲ ಮಾಡುತ್ತಾರೆ. ಹೋಗಲಿ ಬಿಡು. ನಾನು ಇನ್ನು ಮೇಲೆ ಹೀಗಾಗದಂತೆ ನೋಡಿಕೊಳ್ಳುತ್ತೇನೆ.’’
ನನಗಂತೂ ನಗಬೇಕೋ ಅಳಬೇಕೋ ತಿಳಿಯಲಿಲ್ಲ.

* * *

ಅಷ್ಟರಲ್ಲಿ ರಮೇಶ ಬರುವ ಸದ್ದು ಕೇಳಿ ಡೈರಿ ಮುಚ್ಚಿಟ್ಟು ಟೀವಿ ಕಡೆ ಗಮನ ಹರಿಸಿದೆ. ರಮೇಶ ಅಡಿಗೆ ಮನೆಗೆ ಹೋಗಿ ಮತ್ತೆ ರೂಮಿಗೆ ಹೊರಟ. ನನ್ನ ಮನಸ್ಸು ಮತ್ತೆ ಹಿಂದೆ ಓಡಿತ್ತು. ಎರಡು ವರ್ಷದಲ್ಲಿ ಗ್ರೀನ್‌ಕಾರ್ಡ್ ಬಂದಮೇಲೆ ಕೆಲಸಕ್ಕೆ ಸೇರಿದೆ. ನಾನು ಮತ್ತೆಂದೂ ರಮೇಶನ ಮೇಯ್ಲ್ ಓದಲೇ ಇಲ್ಲ. ಅವನೊಡನೆ ಯಾವ ರೀತಿಯ ಜಗಳಕ್ಕೂ ಅವಕಾಶ ಕೊಡಲಿಲ್ಲ. ಸಮಯವೂ ಇರಲಿಲ್ಲ. ಪ್ರತಿಯೊಂದನ್ನೂ ನಾನೇ ನಿಭಾಯಿಸುತ್ತಿದ್ದೆ. ಎಲ್ಲದಕ್ಕೂ ಅವನ ಕೆಲಸದ ನೆಪವೇ ಕೊಟ್ಟು ಅವನಿಂದ ಏನನ್ನೂ ಅಪೇಕ್ಷಿಸಲಿಲ್ಲ. ದೇವರ ದಯೆಯೋ ಏನೋ ಮತ್ತೆ ಅಂತಹ ಆಘಾತಗಳೇನೂ ನಡೆಯಲಿಲ್ಲ. ಕುಟುಂಬ ಒಡೆಯದೆ ಇತ್ತು. ಮನೆಯಲ್ಲೇನೋ ರಮೇಶನ ನಡವಳಿಕೆಯಲ್ಲಿ ಅಷ್ಟು ಬದಲಾವಣೆಯಾಗಲಿಲ್ಲ. ಇತ್ತಲ್ಲ ಕೆಲಸದ ನೆಪ. ತಾನಾಯಿತು ತನ್ನ ಕೆಲಸವಾಯಿತು. ಮಕ್ಕಳ ವಿಧ್ಯಾಭ್ಯಾಸದಲ್ಲಾಗಲಿ, ನಡತೆಯಲ್ಲಾಗಲಿ ಯಾವ ದೊಡ್ಡ ತೊಂದರೆಯೂ ಆಗಲಿಲ್ಲ.

ಮಗಳಿಗೆ ಸ್ಟ್ಯಾನ್‌ಫರ್ಡ್‌ನಲ್ಲಿ ಸೀಟ್ ಸಿಕ್ಕಿದಾಗ ನನಗಂತೂ ಅರ್ಧ ವಿಜಯ ಸಾಧಿಸಿದಂತಾಯ್ತು. ಇನ್ನು ಮಗ ಹೈಸ್ಕೂಲ್‌ನಲ್ಲಿದ್ದ. ಅವನೂ ಬುದ್ಧಿವಂತ. ಐದು ವರ್ಷದಲ್ಲಿ ಮಗನಿಗೂ ಸ್ಟ್ಯಾನ್‌ಫರ್ಡ್‌ನಲ್ಲಿ ಸೀಟು ಸಿಕ್ಕಿದಾಗ ನನಗೆ ನನ್ನ ಜೀವನದ ಗುರಿ ಸಾಧಿಸಿದಂತಾಯ್ತು. ಆಗಲೇ ನನಗೆ ಮುಂದೇನು ಎಂಬ ಯೋಚನೆ ಮತ್ತೆ ಬಂದಿದ್ದು. ನನಗಂತೂ ಗುರಿಯಿಲ್ಲದ ಜೀವನ ಹೇಗಿರುತ್ತದೆ ಎನ್ನುವುದೇ ಮರೆತುಹೋಗಿತ್ತು. ಮಕ್ಕಳಿಲ್ಲದ ಮನೆಯಲ್ಲಿ ಹೇಗೆ ಇರುವುದೋ ತಿಳಿಯಲಿಲ್ಲ. ಸರಿ, ಒಮ್ಮೆ ಭಾರತಕ್ಕಾದರೂ ಹೋಗಿ ಬರೋಣ ಎನ್ನಿಸಿತು. ರಮೇಶನೊಂದಿಗೆ ಹೇಳಿದಾಗ ಅವನಿಗೆ ಎಲ್ಲಿಲ್ಲದ ಆಶ್ಚರ್ಯ. ನಾನು ಹದಿಮೂರು ವರ್ಷಗಳಿಂದ ರಮೇಶನನ್ನು ಬಿಟ್ಟು ಭಾರತಕ್ಕೆ ಹೋಗಿಯೇ ಇರಲಿಲ್ಲ. ‘‘ಸರಿ.’’ ಎಂದ.

ಮೂರು ವಾರ ಭಾರತದಲ್ಲಿ ಇದ್ದು ತಿರುಗಿ ಬಂದಾಗ ಮತ್ತೆ ನನಗೊಂದು ಗುರಿ ಸಿಕ್ಕಿದಂತೆನಿಸಿತು. ಏರ್‌ಪೋರ್ಟ್‌ನಿಂದ ಬರುವಾಗಲೇ ರಮೇಶನಿಗೆ ಹೇಳಿದೆ. ‘‘ನಾನು ಕೆಲಸಕ್ಕೆ ರಾಜೀನಾಮೆ ಕೊಟ್ಟು ಆರು ತಿಂಗಳು ಭಾರತದಲ್ಲಿರಬೇಕೆಂದಿದ್ದೇನೆ.’’ ಎಂದು. ರಮೇಶನಿಗೆ ಅರ್ಥವೇ ಆಗಲಿಲ್ಲ. ‘‘ಅಪ್ಪ, ಅಮ್ಮ, ಅತ್ತೆ, ಮಾವ ಎಲ್ಲರೂ ಒಂಟಿಯಾಗಿದ್ದು ಬೇಸತ್ತಿದ್ದಾರೆ. ಹೋಗಿ ಅವರ ಜೊತೆ ಸ್ವಲ್ಪ ದಿನ ಇದ್ದರೆ ಅವರಿಗೂ ಸಂತೋಷವಾಗುತ್ತದೆ.’’ ಎಂದಾಗ ರಮೇಶನಿಗೆ ಬೇರೆ ದಾರಿಯಿರಲಿಲ್ಲ.

ಕೆಲಸಕ್ಕೆ ರಾಜೀನಾಮೆ ಕೊಟ್ಟು, ಮತ್ತೆ ಕೆಲವು ಕೆಲಸಗಳನ್ನೆಲ್ಲ

ಮುಗಿಸುವಷ್ಟರಲ್ಲಿ ಒಂದು ತಿಂಗಳಾಯಿತು. ಮತ್ತೊಮ್ಮೆ ನನ್ನ ಗುರಿಯ ಬೆನ್ನು ಹತ್ತಿ ಹೊರಟೆ. ಬೆಂಗಳೂರಿನಲ್ಲಿ ಮತ್ತೆ ಕೆಲಸಕ್ಕೆ ಸೇರಿದೆ. ರಮೇಶನಿಗೆ ಇದು ಹಿಡಿಸಲಿಲ್ಲ. ತಂದೆ, ತಾಯಿ, ಅತ್ತೆ, ಮಾವ ಎಲ್ಲರ ಬೇಕು–ಬೇಡಗಳನ್ನು ನೋಡಿಕೊಳ್ಳುತ್ತಾ ನಾಲ್ಕು ವರ್ಷಗಳು ಕಳೆದದ್ದೇ ತಿಳಿಯಲಿಲ್ಲ. ಆರಂಭದಲ್ಲಿ ಯಾವಾಗ ಹಿಂದಿರುಗಿ ಬರುತ್ತೀಯ ಎಂದು ಕೇಳುತ್ತಿದ್ದ ರಮೇಶನಿಗೆ ನನ್ನ ಉದ್ದೇಶ ಕ್ರಮೇಣ ಅರ್ಥವಾಗತೊಡಗಿತು.

ಒಂದು ದಿನ ಮಗಳೊಡನೆ ಮಾತಾಡಿದಾಗ, ತಾನು ಜೊತೆಯಲ್ಲಿ ಓದುತ್ತಿದ್ದ ಭಾರತೀಯ ಹುಡುಗನನ್ನು ಪ್ರೀತಿಸುತ್ತಿದ್ದೇನೆ, ಇಬ್ಬರೂ ಮದುವೆಯಾಗಬೇಕೆಂದಿದ್ದೇವೆ ಎಂದಳು. ಆ ಹುಡುಗನನ್ನು ಭೇಟಿ ಮಾಡಿ ಅವರ ಮದುವೆಯ ದಿನ ನಿಶ್ಚಯ ಮಾಡಿ ಮತ್ತೆ ಬೆಂಗಳೂರಿಗೆ ಹೋದೆ. ಮಗಳ ನಿರ್ಧಾರದಲ್ಲಿ ನನಗೆ ಯಾವ ಅನುಮಾನವೂ ಇರಲಿಲ್ಲ. ಇದ್ದರೂ ಏನು ಮಾಡಲು ಸಾಧ್ಯ?

ಈಗ ಮದುವೆಯೂ ಆಯಿತು, ಮಗಳು ಹೊರಟೂ ಆಯಿತು. ಮಗನ ಮದುವೆಗೆ ಇನ್ನೂ ಸಮಯವಿದೆ. ನಾಳೆ ಸಂಜೆ ನಾನು ಹೊರಡುತ್ತಿದ್ದೇನೆ. ಅದಕ್ಕೆ ಮೊದಲು ರಮೇಶನೊಡನೆ ಮಾತಾಡಬೇಕು. ರಮೇಶನೇನೋ "ಇಷ್ಟು ಬೇಗ ಯಾಕೆ ಹೋಗಬೇಕು? ಇನ್ನೂ ಸ್ವಲ್ಪ ದಿನ ಇರಬಹುದಲ್ಲ?" ಎಂದಿದ್ದ. ರಮೇಶನಿಗೇನು ಗೊತ್ತು ಮತ್ತೊಂದು ಗುರಿ ಸಾಧಿಸಲು ಹೊರಟಿದ್ದೇನೆ ಎಂದು! ಕಳೆದ ನಾಲ್ಕೈದು ವರ್ಷಗಳಲ್ಲಿ ಹಲವು ಬಾರಿ "ಯಾವಾಗ ಬರುತ್ತೀಯ? ನೀನಿಲ್ಲದೆ ಮನೆ ಖಾಲಿಯಾಗಿದೆ." ಎಂದಾಗ ಮಾತು ಬದಲಾಯಿಸಿದ್ದೆ. ಒಮ್ಮೆಯಂತೂ "ನನ್ನ ತಪ್ಪಿನ ಅರಿವಾಗಿದೆ." ಎಂದಿದ್ದ.

ರಮೇಶ ಮತ್ತೊಮ್ಮೆ ರೂಮಿನಿಂದ ಆಚೆ ಬಂದಾಗ ಹೇಳಿದೆ "ರಮೇಶ ನಿನ್ನೊಂದಿಗೆ ಸ್ವಲ್ಪ ಮಾತಾಡಬೇಕು." ಎಂದು. ರಮೇಶ ಸೋಫಾದಲ್ಲಿ ಕುಳಿತ. ಟೀವಿ ಆಫ್ ಮಾಡಿ ಆರಂಭಿಸಿದೆ. "ಭಾರತದಿಂದ ನಮ್ಮಂತ ಯುವಜನರೆಲ್ಲ ಹೊರದೇಶಕ್ಕೆ ಹೋಗಿ, ಅವರ ತಂದೆ–ತಾಯಂದಿರ ಕಷ್ಟ ನೋಡಲಾಗದು. ಯಾವ ಆಸರೆಯೂ ಇಲ್ಲದೆ ಕಡೆಗೆ ವೃದ್ಧಾಶ್ರಮ ಸೇರುತ್ತಿದ್ದಾರೆ. ಆ ವೃದ್ಧಾಶ್ರಮಗಳ ಕಥೆಯೋ ಹೇಳತೀರದು" ಎಂದೆ. ರಮೇಶ "ಡೊನೇಷನ್ಸ್ ಏನಾದರೂ ಕೊಡಬೇಕೆಂದಿದ್ದೀಯೇನು?" ಎಂದ. "ಇಲ್ಲ, ಬೆಂಗಳೂರಿನಲ್ಲಿ ನನಗೆ ತಿಳಿದಿರುವಂತೆ ಸಂಬಂಧಿಕರಲ್ಲೇ ಹದಿನೈದು ಹಿರಿಯರಿದ್ದಾರೆ. ಅವರಿಗೆಲ್ಲ ಯಾರ ಆಸರೆಯೂ ಇಲ್ಲ. ಅವರಿಗೆಲ್ಲ ಆಸರೆಯಾಗಿರುವ ನಿರ್ಧಾರ ಮಾಡಿದ್ದೇನೆ. ನಾನು ಭಾರತಕ್ಕೆ ವಾಪಸ್ ಹೋಗುತ್ತಿದ್ದೇನೆ." ಎಂದೆ. ಕಡೆಗೂ ರಮೇಶನಿಗೂ ಒಂದು ಆಘಾತ ಕಾದಿತ್ತು. "ಹಾಗೆಂದರೇನು?" ಎಂದ. "ಈಗ ನನ್ನ ಅವಶ್ಯಕತೆ ಅಲ್ಲಿ ಜಾಸ್ತಿ" ಎಂದೆ.

ರಮೇಶ "ನಿನ್ನ ಅವಶ್ಯಕತೆ ನನಗಿಲ್ಲವೆ?" ಎಂದ. "ಕುಟುಂಬಕ್ಕೆ ನಿನ್ನ ಅವಶ್ಯಕತೆ ಇದ್ದಾಗ ನೀನಿರಲೇ ಇಲ್ಲ. ಹೇಗೋ ನಡೆಯಿತು. ಈಗ ನನಗಾಗಿ ಹದಿನೈದು ಜನ ಕಾದಿದ್ದಾರೆ. ಅದರಲ್ಲಿ ನಿನ್ನ ತಂದೆ ತಾಯಿಯೂ ಇದ್ದಾರೆ." ಎಂದೆ.
ಏನೋ ಹೇಳಲು ಹೊರಟ ರಮೇಶ ಅಷ್ಟರಲ್ಲಿ ಮಗ ಬಂದಿದ್ದರಿಂದ ಸುಮ್ಮನಾದ. ನಾನು ಸಹಜವಾಗಿ ಮಾತಾಡಿದೆ.

ಮಾರನೆ ದಿನ ಬೆಳಿಗ್ಗೆ ಮಗ ಹೊರಟಾಯ್ತು. ನಾನೂ ನನ್ನ ಸಾಮಾನುಗಳನ್ನೆಲ್ಲ ಪ್ಯಾಕ್ ಮಾಡಿದೆ. ರಮೇಶ ಅಂದು ಮನೆಯಲ್ಲೆ ಕೆಲಸ ಮಾಡುತ್ತಿದ್ದ. ಬೆಳಿಗ್ಗೆಯೇ ಅಡಿಗೆಯಾಗಿದ್ದರಿಂದ ಏಳು ಘಂಟೆ ಹೊತ್ತಿಗೆ ಎಲ್ಲ ಬಿಸಿ ಮಾಡಿ ಟೇಬಲ್ ಮೇಲಿಟ್ಟೆ. ನಾನು ಕರೆಯುವ ಮೊದಲೇ ರಮೇಶ ಟೇಬಲ್ ಬಳಿ ಬಂದು ಕೂತ. ನನಗಂತೂ ಆಶ್ಚರ್ಯ. ಕರೆದೊಡನೆ ಯಾವತ್ತೂ ಊಟಕ್ಕೆ ಬರುತ್ತಿರಲಿಲ್ಲ. "ಬಂದೆ. . . ಬಂದೆ" ಎಂದು ನನ್ನ ಊಟ ಆದ ಮೇಲೆ ಬರುತ್ತಿದ್ದ.

ಸಹಜವಾಗಿ ಏನೋ ಮಾತಾಡುತ್ತ ಊಟ ಮಾಡುತ್ತಿದ್ದೆ. ರಮೇಶ ನನ್ನನ್ನು ತಡೆದು "ಪ್ರಿಯ, ನಿನಗೆ ಇದನ್ನು ಹೇಳಲೇಬೇಕು, ನೀನಿಲ್ಲದೆ ಮನೆ ಶೂನ್ಯವಾಗಿದೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಾನು ಮಾಡಿದ ತಪ್ಪಿನ ಅರಿವಾಗಿದೆ. ನಿನಗೆ ಹೋಗಬೇಡ ಇಲ್ಲೇ ಇರು ಎಂದು ಹೇಳುವ ಅರ್ಹತೆಯೂ ಇಲ್ಲ ನನಗೆ. ನಿನ್ನ ಗುರಿಯಲ್ಲಿ ನಿನಗೆ ಸಂತೋಷ ಸಿಗಲಿ." ಎಂದ. ಅಷ್ಟರಲ್ಲಿ ನನ್ನ ಊಟ ಮುಗಿದಿತ್ತು. ಕೈತೊಳೆಯುತ್ತ, "ನನ್ನನ್ನು ನೋಡಿದಾಗ ಅವರಿಗಾಗುವ ಸಂತೋಷ ನೋಡಿದರೆ ಜೀವನ ಸಾರ್ಥಕವಾಯಿತು ಎನಿಸುತ್ತದೆ." ಎಂದೆ.

ರಮೇಶ "ಒಂದು ಜೀವನದಲ್ಲಿ ಒಂದು ಬಾರಿ ಸಾರ್ಥಕತೆ ಸಿಗುವುದೇ ಕಷ್ಟ. ನೀನು, ಮೂರು ಜೀವನಕ್ಕಾಗುವಷ್ಟು ಸಾರ್ಥಕತೆ ಪಡೆದಿದ್ದೀಯ. ಐ ರಿಯಲಿ ಅಡ್ಮೈರ್ ಯು." ಎಂದು ಹೇಳಿ ಎದ್ದು ಹೋದ. ಆಗ ನನಗನ್ನಿಸಿತು "ನನ್ನ ಸಾರ್ಥಕತೆಯಲ್ಲಿ ನಿನಗೂ ಪಾಲಿದೆ. ನಿನ್ನಿಂದ ತಾನೆ ನನಗೆ ಜೀವನದಲ್ಲಿ ಒಂದು ಗುರಿ ಸಿಕ್ಕಿದ್ದು. ಇಲ್ಲದಿದ್ದರೆ ನಾನು ಎಷ್ಟೋ ಮಹಿಳೆಯರಂತೆ, ಅವರಿಗಿಂತ ದೊಡ್ಡ ಮನೆ, ಇವರಿಗಿಂತ ದೊಡ್ಡ ವಜ್ರದ ಉಂಗುರ, ಮತ್ತೊಬ್ಬರಿಗಿಂತ ಒಳ್ಳೆಯ ಕಾರ್ ಎಂದು ಓಡುತ್ತಿದ್ದೆ." ಆದರೆ ರಮೇಶ ಎದ್ದು ರೂಮಿಗೆ ಹೋಗಿ ಆಗಿತ್ತು.

ಲಗ್ಗೇಜ್ ಎಲ್ಲ ಚೆಕ್‌ಇನ್ ಮಾಡಿ ಒಳಹೋಗುವಾಗ ರಮೇಶನ ಕಣ್ಣಲ್ಲಿ ನೀರಾಡಿದ್ದಂತೂ ನಿಜ. ಅದನ್ನು ತಡೆ ಹಿಡಿದದ್ದೂ ನಿಜ. "ರಮೇಶ, ಯೂ ಮಿಸ್ಸ್ಡ್ ದಿ ಫ್ಲೈಟ್." ಎಂದುಕೊಂಡು ಒಳಗೆ ಹೋದೆ.

***

. . . ಆರೋಪ (ಪುಟ 106ರಿಂದ)

ಧೋರಣೆಯನ್ನು ತಳೆಯಬಹುದು ಎಂದನಿಸಿತು. ಅದುವರೆಗಿನ ಕೋಮಲಳ ಆಲೋಚನಾ ಧಾಟಿ ಮತ್ತು ಅವಳ ನಿಲುವುಗಳನ್ನು ಸಮಗ್ರವಾಗಿ ಪರಿಶೀಲಿಸಿದಾಗ, ಅವಳು ತನ್ನ ಮತ್ತು ಪಾಲಕರ ಸಂಬಂಧವನ್ನು ಕೇವಲ ವ್ಯಾವಹಾರಿಕವಾಗಿ ನೋಡುತ್ತಿದ್ದುದು ಸ್ಪಷ್ಟವಾಗುತ್ತಿತ್ತು. ಮಕ್ಕಳ ಮತ್ತು ಪಾಲಕರ ಸಂಬಂಧವನ್ನು ಭಾವನಾತ್ಮಕವಾಗಿ ಮತ್ತು ಪ್ರೀತಿಪೂರ್ವಕವಾಗಿ ನೋಡುವುದನ್ನು ಕಲಿಯದ ಹೊರತು, ಮಕ್ಕಳಿಗೆ ತಂದೆ–ತಾಯಿಯರ ತ್ಯಾಗ ಅರ್ಥವಾಗುವುದಿಲ್ಲ ಎಂಬುದೇ ಅವರ ಆತಂಕಕ್ಕೆ ಕಾರಣವಾಗಿತ್ತು. ತಮ್ಮ ಸ್ವಂತಿಕೆಯ ಅಭಿಪ್ರಾಯಗಳನ್ನು ಎಂದೂ ವ್ಯಕ್ತಪಡಿಸದಿದ್ದ ಅವರು, ಆಂದೂ ಸಹ ಏನನ್ನೂ ಹೇಳದೆ ತಮ್ಮ ಹೆಂಡತಿಯ ಸಲಹೆಗೆ ಒಪ್ಪಿಗೆಯಿತ್ತರು.

ಹಾಗಾದರೆ ಮಕ್ಕಳ ಮತ್ತು ಪಾಲಕರ ನಡುವಿನ ಸಂಬಂಧ ವ್ಯಾವಹಾರಿಕವೋ ಅಥವಾ ಭಾವನಾತ್ಮಕವೋ?

***

. . . ಪುನರಪಿ ಜನನಂ (ಪುಟ 90ರಿಂದ)

ಅವನು ಇದುವರೆವಿಗೂ ತಡೆಹಿಡಿದಿದ್ದ ಮನೋವೇದನೆಯೆಲ್ಲವೂ ಕಣ್ಣೀರಿನ ಕೋಡಿಯಾಗಿ ಹರಿಯಲು ಶುರುವಾಯಿತು. ಜಯಳಲ್ಲಿ ತೋಡಿಕೊಳ್ಳದೆ, ಹಂಚಿಕೊಳ್ಳಲಾಗದೆ, ಬಿಗಿದಿಟ್ಟುಕೊಂಡಿದ್ದ ದುಃಖ, ದುಮ್ಮಾನಗಳು ಪ್ರವಾಹದಂತೆ ನುಗ್ಗಿಬಂತು. ಅವನ ಮನೋವ್ಯಥೆಯ ಆಳವನ್ನರಿತ ಜಯ ಅನುಕಂಪದಿಂದ ಕರಗಿಹೋದಳು. ಬಹಳ ಹೊತ್ತು, ಅವರ ಮನಗಳ ಮಾತಿಗೆ ಅವಕಾಶ ಕೊಟ್ಟು, ಅಲ್ಲಿ ಮೌನ ಆವರಿಸಿತು.

ಕಡೆಗೆ ಜಯ ಅವನಿಗೆ ಮುತ್ತಿಟ್ಟು “ನೋಡು, ನಾನೆಲ್ಲೂ ಹೋಗೊಲ್ಲಾ. ಇನ್ನೂ ತುಂಬಾ ದಿವಸ ನಿನ್ನ ಕಾಡಲು ಖಂಡಿತ ಬದುಕಿರುತ್ತೇನೆ. ಅದಕ್ಕೆ ನೋಡು, ಈಗ ಮನಸ್ಸು ಬದಲಾಯಿಸಿ ಕೀಮೋಥೆರಪಿಗೆ ಒಪ್ಪುತ್ತಿದ್ದೇನೆ.” ಎಂದು ಅವನ ಕಣ್ಣೀರೊರೆಸಿದಳು. ರಮೇಶ ತಲೆಯೆತ್ತಿ ಇದು ನಿಜವೇ? ಎಂಬಂತೆ ನೋಡಿದ. “ಸತ್ಯವಾಗಲೂ ಕಣೋ. ನನ್ನ ಕೊನೆ ಉಸಿರು ಇರೋವರೆಗೂ ನಾನು ಈ ಖಾಯಿಲೆ ಜಯಶಾಲಿಯಾಗಲು ಬಿಡುವುದಿಲ್ಲ. ಅದರ ಮೇಲೆ ನನಗೆ ದೊರೆಯುವ ಅಸ್ತ್ರಗಳನ್ನೆಲ್ಲಾ ಪ್ರಯೋಗ ಮಾಡಿಯೇ ಬಿಡುತ್ತೇನೆ. ನಮ್ಮಮ್ಮ ನನಗೆ ಜಯ ಅಂತ ಹೆಸರಿಟ್ಟಿದ್ದರಲ್ಲಿ ಇದೇ ಅರ್ಥ ಇರಬೇಕು. ಆದರೆ ಈಗ ಮೊದಲು ನಿನಗೆ ಹೇಳಬೇಕಾದ್ದು ಒಂದಿದೆ.” ರಮೇಶನ ಮುಖದೆಡೆಗೆ ಬಾಗಿ ಪಿಸುಗುಟ್ಟಿದಳು “ಐ ಲವ್ ಯೂ!” “ಐ ಲವ್ ಯೂ ಟೂ ಚಿನ್ನ!” ಎಂದು ಬರಸೆಳೆದ ಅವನ ಹಿತವಾದ ಆಲಿಂಗನದಲ್ಲಿ ಸಿಲುಕುತ್ತಾ ಜಯ ಅಂದುಕೊಂಡಳು, “ನಾನಿನ್ನೂ ಬಹಳ ಬದುಕುವುದಿದೆ, ಸಾವೇ ನೀ ನಾಳೆ ಬಾ.”

***

ಸ್ಯಾನ್ ಫ್ರಾನ್ಸಿಸ್ಕೋ ಕೊಲ್ಲಿ ಪ್ರದೇಶದ ಮೌಂಟ್ ಡಿಯಾಬ್ಲೋ ಬೆಟ್ಟದ ಮೇಲಿಂದ (೩೮೪೯ ಅಡಿ), ಸುಮಾರು ಇನ್ನೂರು ಮೈಲಿಗಳವರೆಗೆ ಯಾವುದೇ ರೀತಿಯ ತಡೆಯಿಲ್ಲದ ನೋಟವಿದೆ. ಸ್ಪಷ್ಟವಾದ ದಿನದಂದು ಉತ್ತರಕ್ಕೆ ಮೌಂಟ್ ಲ್ಯಾಸ್ಸೆನ್ ಹಾಗೂ ಪೂರ್ವಕ್ಕೆ ಯೋಸಿಮಿಟಿಯ ಹಾಲ್ಫ್ ಡೋಮ್‌ಗಳನ್ನು ದೂರದರ್ಶಕದ ಮೂಲಕ ಕಾಣಬಹುದಂತೆ.


***

***Sudha Bariatrics,***

“A comprehensive Medical weight loss program”
with emphasis on lifestyle change & weight maintenance.



*Manjul Patwardhan, MD*
Board certified Bariatrics & Family Medicine.
(Overweight and Obesity control)
10353 Torre ave , Cupertino, CA 95014
(408)725-1777,
www.myfamilyphysician.com




Serving you for the last 15 years at our Sunnyvale location
Largest selection in the Bay Area than any other store
Check out our price and quality before you shop elsewhere

ಕ ಥೆ

೨೦೦೭ರ ಯುಗಾದಿ ಕಥಾಸ್ಪರ್ಧೆಗೆ ಸಲ್ಲಿಸಿದ ಕಥೆ.

ರಶ್ಮೀ ರಾಜನ್
ಕ್ಯಾಲಿಫೋರ್ನಿಯ

# ಅಪರಾಧಿ

ಎಷ್ಟು ಹೊತ್ತಿನಿಂದ ನಿದ್ದೆ ಮಾಡಿಬಿಟ್ಟಿದ್ದೆನೋ ಗೊತ್ತೇ ಆಗಿಲ್ಲ. ಜೀವನದಲ್ಲಿ ಇದೇ ಮೊದಲು ಔಷಧಿಯ ಸಹಾಯದಿಂದ ನಿದ್ದೆ ಮಾಡಬೇಕಾಗಿದ್ದ ಪರಿಸ್ಥಿತಿ. ಎದೆಯಲ್ಲಿ ಛುಳ್ಳೆಂದು ನೋವು ಇದ್ದೇ ಇದೆ! ಬಲಗೈಗೆ ಡ್ರಿಪ್ಸ್ ಹಾಕಿಬಿಟ್ಟಿದ್ರಿಂದ, ಎಡಗೈಲಿ ಗಡ್ಡ ಮುಟ್ಟಿಕೊಂಡ್ರೆ, ಮೂರು ದಿನದಿಂದ ಕ್ಷೌರವಾಗಿಲ್ಲದ ಮುಖ, ಹೇಗೆ ಕಾಣ್ತಿದ್ದೀನೋ ಅನಿಸ್ತಿದೆ. ಎಂತಹ ಜ್ವರ ಬಂದಾಗಲೂ ಮುಖಕ್ಷೌರವಿಲ್ಲದೆ ಇದ್ದೇ ಇಲ್ಲ. ಅನಾರೋಗ್ಯದಿಂದ ಯಾರು ನರಳುತ್ತಿದ್ದರೂ, "ಕ್ಷೌರ ತಪ್ಪಿಸಬೇಡಿ, ಅರ್ಧ ಖಾಯಿಲೆ ಸರಿಹೋಗುತ್ತೆ." ಅಂತ ನಾನು ಉಪದೇಶ ಮಾಡುತ್ತಿದ್ದೆ. ಈಗ ನನಗೇ ಯಾವುದೂ ಬೇಕಿಲ್ಲ.. ಮಂಚದ ಕಾಲಿನ ಹತ್ತಿರ ಕೂತಿದ್ದ ಹೆಂಡತಿ 'ವಿಷ್ಣು ಸಹಸ್ರನಾಮ'ದ ಪುಸ್ತಕ ಹಿಡಿದು ಕಣ್ಣು ಮುಚ್ಚುತ್ತಾ ಬಿಡುತ್ತಾ, ಪುಸ್ತಕ ಓದುತ್ತಾ ಆಗಾಗ ಬರುತ್ತಿದ್ದ ಕಣ್ಣೀರನ್ನು ಸೆರಗಿನಿಂದ ಒರೆಸಿಕೊಳ್ತಾ ಭಕ್ತಿ ಪರವಶಳಾಗಿ ನನ್ನ ಆರೋಗ್ಯ ಸರಿಹೋಗಲು ಬೇಡಿಕೊಳ್ತಿದ್ದಾಳೆ!


ಮನಸ್ಸು ಮತ್ತೆ ಕಲುಕಿದಂತಾಗ್ತಿದೆ.. ಇವಳ ಪೂಜೆಗೆ ನಾನು ಖಂಡಿತ ಅರ್ಹನಲ್ಲ.. ಅವಳಿಗೆ ಹೇಗೆ ಹೇಳಲಿ? ಅಯ್ಯೋ! ಮುಗ್ಧ ಹೆಂಗಸೇ.. ಒಂದು ಕ್ಷಣದಲ್ಲಿ ಇಪ್ಪತ್ತೈದು ವರ್ಷಗಳ ಹಿಂದೆ ಇವಳೊಂದಿಗೆ ಆದ ನನ್ನ ಮದುವೆ.. ಜೊತೆಯಾಗಿ ಕಟ್ಟಿದ್ದ ಕನಸುಗಳು... ನಾವೇ ಕಟ್ಟಿದ್ದ ಮೊದಲ 'ನಮ್ಮ ಮನೆ'.. ಅದರ ಜೊತೆಗಾದ ಸಾಲ ಸೋಲಗಳು.. ಪರಾಪೇಕ್ಷೆ ಇಲ್ಲದೆ ಅವಳು ಮಾಡಿದ್ದ ತ್ಯಾಗಗಳು.. ನಮ್ಮ ಮೊದಲ ಹೆಣ್ಣು ಮಗು.. ಓಹ್.. ಎದೆ ಭಾರ ತಡೆಯಕ್ಕಾಗ್ತಿಲ್ಲ .. ನನ್ನ ಮುದ್ದು ಮಗಳು.. ಮಹಾರಾಣಿಯಾಗಿ.. ಸುಂದರವಾಗಿ.. ಬುದ್ಧಿವಂತಳಾಗಿ.. ಓದು, ಸಂಗೀತ, ಸಾಹಿತ್ಯ ಎಲ್ಲಾದರಲ್ಲೂ ಮೊದಳಿಗಳಾಗಿ ಇಪ್ಪತ್ತೆರಡು ವರ್ಷಗಳ ಪ್ರೌಢ ಮಗಳಾಗಿಬಿಟ್ಟಿದ್ದಳು. ಅಯ್ಯೊ! ಅವಳಿಗೂ ಮೋಸ ಮಾಡಿಬಿಟ್ಟೆ.. ಅವಳನ್ನು ಧೈರ್ಯವಾಗಿ ನೋಡಲಿಕ್ಕೆ ಆಗಲ್ಲ.. ಓಹ್ ನನ್ನ ಜೀವನವೇ .. ಅವಳ ಮದುವೆಯ ಕನಸು ಅವಳು ಇಪ್ಪತ್ತು ವರ್ಷದವಳಾದಾಗಿನಿಂದ ಶುರುವಾಗಿಬಿಟ್ಟಿತ್ತು.. ಅವಳದೇ ನೆನಪು.. ಇವತ್ತು ಅವಳ ಕೊನೆಯ ಪರೀಕ್ಷೆ.. ಹೇಗೆ ಮಾಡಿದ್ದಾಳೋ ನನ್ನ ಯೋಚನೆಯಲ್ಲಿ..
ತಕ್ಷಣ ನನ್ನ 'ಗೆಳೆಯರು' ಕೇಕೆ ಹಾಕುತ್ತಾ .. ನಗುತ್ತಾ ಹೇಳಿದ ಮಾತು.. ಮರೆಯಕ್ಕೇ ಆಗ್ತಿಲ್ಲ.. "ನೀವೂ ಮದುವೆಯಾಗಿ ದೊಡ್ಡ ಹೆಣ್ಣು ಮಗಳಿರುವ ಗಂಡಸೇ ರಾಯರೇ.. ಹ್ಹ ಹ್ಹ ಹ್ಹಾ.. ". ಆಗಲೇ ಮೊದಲು ಕಾಣಿಸಿಕೊಂಡಿದ್ದ ಎದೆ ನೋವು. ಆ ನಗು ಕಿವಿಗಡಚಿಕ್ಕುವಂತೆ ಆ ಮಾತುಗಳು ನೇರವಾಗಿ ಎದೆ ಸೀಳಿದಂತೆ ತಟ್ಟಿಬಿಟ್ಟಿದೆ.

ಯಾವಾಗ ಜಾರಿದೆ? ಏತಕ್ಕಾಗಿ? ಇಂಥ ಸ್ನೇಹಿತರು ನನ್ನಂಥವನಿಗೆ ಹೇಗೆ ಗಂಟು ಬಿದ್ದರು? ಸ್ನೇಹಿತರಾ ಇವರು? ತಪ್ಪು ದಾರಿ ಹಿಡಿಯುವವನನ್ನು ಎಳೆದು, ಸರಿ ದಾರಿ ತೋರಿಸುವವರಲ್ಲವೇ ಸ್ನೇಹಿತರು? ಇವರ ಪ್ರೋತ್ಸಾಹದಿಂದಲೇ ಹೆಂಡತಿಗೆ ಮೋಸ ಮಾಡಿಬಿಟ್ಟಿದ್ದೆನಲ್ಲಾ.. ಛೆ! ಅವರನ್ನು ಏಕೆ ಅನ್ನಬೇಕು? ನನ್ನ ಮನಸ್ಸು, ದೇಹದಾಸೆಗಳ ಮೇಲೆ ನನಗೆ ನಿಯಂತ್ರಣ ಇಲ್ಲದಿದ್ದಾಗ ನಡೆದು ಹೋದ ಒಂದು ಘಟನೆ.. "ರಾಯರೇ.. ಗಂಡಸ್ರು ಅಂದ್ರೆ ಹಾಗೇ ಇರಬೇಕು ಕಣ್ರೀ.. ನೀವು ಮಾಡಿದ್ದು ತಪ್ಪೇ ಅಲ್ಲ.. ", ಕಟ್ಟೆಯ ಮೇಲೆ ಕೂತು ಎಲ್ಲರೂ ನಕ್ಕುಬಿಟ್ಟಿದ್ರು.

ಆ ಸ್ನೇಹಿತನ ತಮ್ಮ .. ಅವನ .. ಆ ಮನೆಹಾಳನ ಹೆಸರೇ ನೆನಪಿಗೆ ಬರ್ತಿಲ್ಲ.. ಅವನೂ ಆ ಮಾತುಗಳಿಗೆ ತಾಳ ಹಾಕುತ್ತಿದ್ದ.. ಹೌದು.. ಆ ದಿನ ಯಾವುದೂ ತಪ್ಪು ಅನಿಸಲೇ ಇಲ್ಲವಲ್ಲ.. ಆ ಹುಡುಗ ನಮ್ಮ ಜೊತೆ ಕಟ್ಟೆಗೆ ಯಾಕೆ ಬರುತ್ತಿದ್ದ? ಅವನ ವಯಸ್ಸೇನು, ನಮ್ಮ ವಯಸ್ಸೇನು. ಅವನ ಅಣ್ಣನ ತಪ್ಪು. ಎಂತಹ ಮನೆತನ? ಹುಂ, ಅವರ ಮನೆತನವನ್ನು ಯಾಕೆ ಹೀಯಾಳಿಸಬೇಕು ನಾನು, ಒಳ್ಳೆಯ ಮನೆತನದಿಂದ ಬಂದು, ನಾನು ಮಾಡಿದ್ದಾದರೂ ಎಂತಹ ಕೆಲಸ.. ಹುಷಾರಿಲ್ಲದ ತಾಯಿಯನ್ನು ನೋಡಿಕೊಳ್ಳಲಿಕ್ಕೆ ಹೋಗಿದ್ದ ನನ್ನ ಹೆಂಡತಿಗೆ ಮೋಸ ಮಾಡಿಬಿಟ್ಟೆ. ಚಿಕ್ಕ ವಯಸ್ಸಿನಲ್ಲಿ ಸ್ನೇಹಿತರ ಜೊತೆ ಪಂದ್ಯ ಕಟ್ಟಿ ಹಣ್ಣು ಕದ್ದು ತಿನ್ನುತ್ತಿದ್ದ ಹಾಗೆ, ಈ ಸ್ನೇಹಿತರ ಪ್ರೋತ್ಸಾಹದಿಂದ ಈ ವಯಸ್ಸಿನಲ್ಲಿ ಇಂತಹ ಕೆಟ್ಟ ಕೆಲಸ ನನ್ನಿಂದ ನಡೆದುಹೋಯ್ತೆ? ಕೈ ಕಾಲೆಲ್ಲಾ ಸೂಜಿ ಚುಚ್ಚಿದ ಹಾಗಾಗುತ್ತಿದೆ... ಗಂಟಲು ಒಣಗಿ ಹೋಗುತ್ತಿದೆ. ಇವಳ ಹೆಸರು ಹಿಡಿದು ಹೇಗೆ ಕರೆಯಲಿ?

ಆ ತಮ್ಮನ ಮದುವೆ, ಅದರ ವರಪೂಜೆ ದಿನ ನನ್ನ ಮಗಳ ಸಂಗೀತ ಕಛೇರಿ.. ಅಬ್ಬಾ, ನನ್ನ ಪಾಲಿಗೆ ಅವಳ ಸುಶ್ರಾವ್ಯ ಗಾನ ಅವಳನ್ನು ತಲೆ ಮೇಲೆ ಕೂರಿಸಿ ಮೆರವಣಿಗೆ ಮಾಡಿಸುವ ಹಾಗನಿಸಿತು.. ಆದ್ರೂ, ಮದುವೆ ಹುಡುಗ ಅವಳನ್ನು ಸ್ವಲ್ಪ ದುರುಗುಟ್ಟಿಕೊಂಡು ನೋಡಿದ್ದು ಇರಿಸು ಮುರುಸಾಗಿದ್ದ ನೆನಪು.. ಅಥವ ಈಗ ಆ ನೋಟಕ್ಕೆ ಹೆಚ್ಚು ಅರ್ಥ ಕೊಡುವಂತಾಗಿದೆಯೋ ಏನೋ.. ಛೆ! ಎಂಥವರ ಜೊತೆ ಸಹವಾಸವಾಗಿಹೋಯ್ತು..

ಓಹ್.. ಎದೆಯಲ್ಲಿ ಯಾರೋ ಒಂದು ನರವನ್ನು ಜೋರಾಗಿ ಎಳೆದು ಬಿಟ್ಟಂತಾಯಿತು. ಮುಖವೆಲ್ಲಾ ಹಿಂಡುತ್ತಾ ಕೈಯನ್ನು



ಎದೆಗೆ ಒತ್ತಿಕೊಳ್ಳುವ ಹಾಗಾಗ್ತಿದೆ.. ಕಹಿ ನೆನಪುಗಳು.. ನೋವಿನಲ್ಲಿ ದೇವರನ್ನು ಪ್ರಾರ್ಥಿಸಿಕೊಳ್ಳಕ್ಕೂ ಅರ್ಹನಲ್ಲದೆ ಮೈಲಿಗೆಯಲ್ಲಿರುವಂತೆ ಅಪರಾಧಿಪ್ರಜ್ಞೆ ಕೊಲ್ಲುತ್ತಿದೆ.

ನನ್ನವಳು ಆಸ್ಪತ್ರೆ ಕೋಣೆಯ ದೂರವಾಣಿಯಲ್ಲಿ ಮಾತಾಡ್ತಿದ್ದಾಳೆ.. ನನ್ನ ಹತ್ತಿರ ಬಂದು ಏನೋ ಹೇಳ್ತಿದ್ದಾಳೆ.. ಬಹುಶಃ ನನ್ನ ಮಗಳು ಬರ್ತಿದ್ದಾಳೆ ಅನಿಸುತ್ತೆ.. "ಪರೀಕ್ಷೆ ಹೇಗೆ ಮಾಡಿದ್ದಾಳಂತೆ?".. ಬಾಯಿ ತೆಗೆಯುತ್ತಿದ್ದೀನಿ, ಧ್ವನಿ ಗಂಟಲಲ್ಲೇ ಉಳಿದುಕೊಳ್ತಿದೆ.. ಅಸಹಾಯಕತೆ, ಮಾತೇ ಬರ್ತಿಲ್ಲ, ಪ್ರಯತ್ನಿಸಿದಷ್ಟೂ ಕಣ್ಣಲ್ಲಿ ನೀರಿನ ರಾಶಿ ಸುರಿಯುತ್ತಿದೆ ಅಷ್ಟೆ.

ಮೂರು ದಿನದಿಂದ ನನ್ನ ಮಗಳನ್ನು ನೋಡಿರ್ಲಿಲ್ಲ, ಹೃದಯಾಘಾತದಿಂದ ಆಸ್ಪತ್ರೆಗೆ ಸೇರಿದಾಗಿನಿಂದ, ಅವಳಿಗೆ ದಿನವೂ ಪರೀಕ್ಷೆ ಇದ್ದು, ಆಸ್ಪತ್ರೆಗೆ ಬರದಂತೆ, ಓದಿಗೆ ಯಾವುದೂ ಅಡ್ಡಿ ಬರದಂತೆ ನೋಡಿಕೊಂಡಿದ್ದಳು ನನ್ನ ಧರ್ಮಪತ್ನಿ. ನನಗಾಗಲೀ, ನಮ್ಮ ಪುಟ್ಟ ಸಂಸಾರಕ್ಕಾಗಲೀ, ನಮ್ಮ ಮನೆಯವರಿಗಾಗಲೀ, ಯಾರಿಗೂ ಏನೂ ತೊಂದರೆಯಾಗದಂತೆ ನಿಭಾಯಿಸುತ್ತಿದ್ದಳು.. ಅವಳಿಗೇ ಮೋಸಮಾಡಿಬಿಟ್ಟಿದ್ದೆ..

ಹೇಳಲಿಕ್ಕಾಗದ ನೋವು! ಕಣ್ಣು ಬಿಟ್ಟರೆ ಎಲ್ಲವೂ ಮಬ್ಬು ಮಬ್ಬು.. ಕಣ್ಣೀರು ತುಂಬಿರಬೇಕು. ಎಡಗೈಯಿಂದ ಒರೆಸಿಕೊಂಡು ನೋಡಿದರೆ, ಉಹುಂ! ಸರಿಯಾಗಿ ಕಾಣದು.. ಓಹ್, ನನ್ನ ಮಗು ಬಂದಿತು.. ನನ್ನ ಪಕ್ಕ ನಿಂತಿದ್ದಾಳೆ.. ಮುಗ್ಧ ಕಳೆ.. ಇವಳನ್ನು, ಓಹ್ ದೇವರೇ! ಆ ಸ್ನೇಹಿತನ ತಮ್ಮ ಆಸೆ ಪಟ್ಟುಬಿಟ್ಟಿದ್ದ. ನೀಚ! ಅವನ ಮದುವೆಯಲ್ಲಿ ಹಾಡಿದ್ದಾಗಲೇ ಕಣ್ಣು ಹಾಕಿಬಿಟ್ಟಿದ್ದನಂತೆ.

"ರಾಯರೇ, ನನ್ನ ತಮ್ಮ ನಿಮ್ಮ ಮಗಳ ಮೇಲೆ ಆಸೆ ಇಟ್ಟುಕೊಂಡುಬಿಟ್ಟಿದ್ದಾನೆ.. ಒಂದು ಸರ್ತಿ ಅವಳನ್ನು ಅವನ ಹತ್ತಿರ ನೀವು ಕಳಿಸಲು ಮನಸ್ಸು ಮಾಡಬೇಕು.. " ಅವನ ಮಾತು ಕಿವಿಗಪ್ಪಳಿಸಿತ್ತು! "ನಿಮ್ಮ ತಮ್ಮನೇ?" ಎದೆಯ ಬಡಿತ ತಲೆಗೆ ಬಂದು ಹೊಡೆದಂತಾಯಿತು. "ಮದುವೆಯಾಗಿ, ಒಂದು ವರ್ಷದ ಮಗುವಿರುವ ತಮ್ಮನೇ?" ನನ್ನ ಗೊಂದಲ.
ಮಿಕ್ಕ ಮೂವರೂ ಗೊಳ್ಳೆಂದು ನಗುತ್ತಾ.. "ಅವನೇ.. ನೀವೂ ಮದುವೆಯಾಗಿ ದೊಡ್ಡ ಹೆಣ್ಣು ಮಗಳಿರುವ ಗಂಡಸೇ ರಾಯರೇ.. ಹ್ಹಾ ಹ್ಹಾ.. ನೋಡ್ರೋ.. ಅವರು ಆಸೆ ಪಡಬಹುದು, ನನ್ನ ತಮ್ಮ ಪಡಬಾರ್ದೇ.. ಹ್ಹಾ ಹ್ಹಾ.." ಜೋರಾಗಿ ನಗುತ್ತಿದ್ದಾರೆ. ನನ್ನ ಮುಖ ಕೋಪದಿಂದ, ಅಸಹಾಯಕತೆಯಿಂದ, ನಾಚಿಕೆಯಿಂದ, ಅವಮಾನದಿಂದ

ಯಾರಿಗೂ ಹೇಳಿಕೊಳ್ಳಲಾರದ ನೋವಿನಿಂದ ಯಾವ ಬಣ್ಣವಾಯಿತೋ, ಯಾವ ಆಕಾರವಾಯಿತೋ ಏನೋ, ಕೇಕೆ ಹಾಕಿ ನಗುತ್ತಿದ್ದ ಅವರಿಂದ ದೂರವಾಗಿ ಬಿಡಬೇಕೆಂದು, ಎದೆ ಹಿಡಿದುಕೊಂಡು ಮನೆಗೆ ಬಂದಿದ್ದೇ ಗೊತ್ತು, ಎಚ್ಚರವಾಗಿದ್ದು ಆಸ್ಪತ್ರೆಯ ಈ ಮಂಚದ ಮೇಲೇ. ನನ್ನ ಮುದ್ದು ಮಗಳನ್ನು ನೋಡಿ ಏನೂ ಹೇಳಲಾರದೆ ಇನ್ನೊಂದು ದಿಕ್ಕಿಗೆ ಮುಖ ಮಾಡಿ ಕಣ್ಣು ಮುಚ್ಚಿದರೆ ಕಿವಿಯಲ್ಲಿ ಬರೀ ನನ್ನನ್ನು ಮೂದಲಿಸಿ ನಗುತ್ತಿರುವ ಶಬ್ದ..

ಆ ಮೂವರೂ ಸ್ನೇಹಿತರು, ನನ್ನ ಹೆಂಡತಿ, ನನ್ನ ಮಗಳು.. ನಾನು ಎಡವಿ ಸಹವಾಸ ಮಾಡಿದ್ದ ಹೆಂಗಸು.. ಇಡೀ ಪ್ರಪಂಚ ನನ್ನನ್ನು ನೋಡಿ, ಬೆರಳು ಮಾಡಿ ತೋರಿಸುತ್ತಾ ಹ್ಹಾ ಹ್ಹಾ ಹ್ಹಾ ಎಂದು ಜೋರಾಗಿ ಕೇಕೆ ಹಾಕಿಕೊಂಡು ನಕ್ಕಿದ್ದಾರೆ.. ಕೇಳಕ್ಕೇ ಸಾಧ್ಯವಿಲ್ಲ... ಅಯ್ಯೋ, ಪ್ರಪಂಚದಲ್ಲಿ ಯಾವ ಗಂಡಸೂ ಇಂಥ ತಪ್ಪು ಮಾಡಬಾರ್ದು, ಅಪರಾಧಿಪ್ರಜ್ಞೆ ಕೊಂದುಹಾಕುತ್ತಿದೆ.. ಕಿವಿಯಲ್ಲಿ ಇನ್ನೂ ಅಪ್ಪಳಿಸುತ್ತಿರುವ ಕೇಕೆ ನಗು.. ಪಕ್ಕದಲ್ಲಿ ನಿಂತಿದ್ದ ನನ್ನ ಮಗಳು ಕೈ ಮುಟ್ಟಿದಂತಾಯಿತು, ತಿರುಗಿದರೆ, ಹೆಂಡತಿಯ ಮುಖ, ನನ್ನ ಮುದ್ದು ಮಗಳ ಮುಖ ಇನ್ನೂ ಮಬ್ಬಾಗುತ್ತಿದೆ.. ಕಿವಿಯಲ್ಲಿ ಮಾತ್ರ ಇವರೆಲ್ಲರ ಮೂದಲಿಕೆಯ ನಗು.. ಕಿವಿ ಮುಚ್ಚಿಕೊಂಡು ಎಲ್ಲಾದರೂ ಓಡಿ ಹೋಗಬೇಕು.. ಓ ದೇವರೆ.. ಎದೆಯಲ್ಲಿ ಜೋರಾದ ಸೆಳೆತ.. ಹೊಟ್ಟೆಯಲ್ಲಿ ತಡೆಯಲಾರದ ಸಂಕಟ..ಕಣ್ಣು ಬಿಡಲಾಗುತ್ತಿಲ್ಲ.. ಕಿವಿಯಲ್ಲಿ ಸಾವಿರಾರು ದುಂಬಿಗಳು ಗುಂಯ್‌ಗುಟ್ಟುವಂತಾಗುತ್ತಿದೆ.. ತಲೆ ಸಾವಿರ ಹೋಳಾಗುವಂತ ನೋವು.. ಸಂಕಟ.. ಪ್ರಾಣ ಸಂಕಟ... ಅವರಿಗೆ "ತಪ್ಪಾಯಿತು, ಕ್ಷಮಿಸಿ" ಎರಡೂ ಕೈ ಜೋಡಿಸಲಿಕ್ಕೂ ಆಗುತ್ತಿಲ್ಲ.. ಅಯ್ಯೋ! ಇನ್ನು ಆ ನಗು ಕೇಳಕ್ಕಾಗಲ್ಲಾ..

ತಟ್ಟನೆ ಕಿವಿಯಲ್ಲಿ ಯಾವ ಮಾತೂ ಇಲ್ಲ, ಯಾವ ನಗುವೂ ಇಲ್ಲ.. ಎಲ್ಲ ನಿಶ್ಶಬ್ದ.

***

## ತಿಳಿ – ನೀರು

(ಶಶಿಕಲಾ ನಿಂಬಾಳ)

ಧರೆಗಿಳಿದ ವಾರಿಧಿಯ ತೀರದಲಿ ನಿಂತು
ಮೀನ ಹೆಜ್ಜೆಗಳೆಣಿಸಲು ಹೆಣಗುತಿರುವೆ
ತಳದ ಹವಳ-ಹರಳಿಗಾಗಿ ಹವಣಿಸುತಿರುವೆ
ಅಂಬರದ ಚಂದಿರನ ಬಿಂಬವನರಸುತಿರುವೆ

ನೀರೊಳಗಿದ್ದು ನೀರನೇ ಮರೆತು
ನೀರಿಗಾಗಿ ಬಾಯಾರಿ ಬಳಲುತಿರುವೆ
ಹರಿಹರರು ಸಕಲದಲಿ ಸಹಜದಲಿರುತಿರೆ
ಪರಿಸರದ ಇತರದಲಿ ಸಿಲುಕಿ ಸೊರಗುತಿರುವೆ.

***


Bay Zone Realtors

Venkat



Home buying and selling is so much more than a transaction. It is your home, your investment and it needs to be handled professionally and effectively.

For your Real Estate Buying and Selling needs, please contact Venkat 408.315.3622



V.R. Venkataramana
Realtor/Broker/Owner & Loan Consultant
Direct 408.315.3622
vvenkataramana@yahoo.com

13941 Shadow Oaks Way, Saratoga, CA 95070 Direct: 408.315.3622 Fax: 408.872.0607

ಬೀ. ಕೆ. ಸೀತಾಲಕ್ಷ್ಮಿ
ಬೆಂಗಳೂರು

# ಜಾಂಟಿ ಮತ್ತೊಮ್ಮೆ ಹುಟ್ಟಿ ಬಾ



ನಮ್ಮ ಮನೆಯಲ್ಲಿ ಒಂದು ನಾಯಿ ಮರಿ ಇತ್ತು
ಅದಕೆ ಜಾಂಟಿ ಎಂದು ಹೆಸರಿಟ್ಟಿದ್ದೆವು.
ನಮ್ಮ ಮಕ್ಕಳಲ್ಲಿ ಒಂದಾಗಿದ್ದ ಅದು
ಒಂದು ದಿನ ಕಾಣೆಯಾಯಿತು.

ಹುಡುಕಿದೆವು ಹುಡುಕಿದೆವು
ಎಲ್ಲೂ ಕಾಣಲಿಲ್ಲ. ನೋಡಲಿಲ್ಲ.
ಜಾಂಟಿ ಎಂದರೆ ಓಗೊಡಲಿಲ್ಲ.
ದುಃಖವಾಯಿತು ನಮಗೆಲ್ಲ.

ಯಜಮಾನ ಬಂದರೆ ಬಾಲ ಅಲ್ಲಾಡಿಸುವನಿಲ್ಲ
ಅಜ್ಜಿಗಾದರೆ ಊಟಕ್ಕೆ
ನಾಲಿಗೆ ನೀಡುವವನಿಲ್ಲ.

ಬೇಸರವಾಯಿತು ನಮಗೆ
ನೆನಪಾಗುತ್ತಿತ್ತು ಘಳಿಗೆ ಘಳಿಗೆ
ಕನಸಿನಲಿ ಬಂದಿತು ಒಂದು ರಾತ್ರಿ
ಮಾತನಾಡಿತು ನನ್ನ ಜತೆ.

ಜಾಂಟಿ, ನನ್ನ ಪ್ರೀತಿಯ ಜಾಂಟಿ
ನಮ್ಮನ್ನು ಬಿಟ್ಟು ಎಲ್ಲಿ ಹೋದೆ?
ನಿನ್ನ ಒಂದು ಕಣ್ಣು ಸರಿಯಾಯಿತೆ?
ನಿನಗೆ ಅಂಟಿದ ಉಣ್ಣೆ ಬಿಟ್ಟಿತೆ?

ನನಗೆ ನಾವು ಬೇಡವಾದೆವೆ?
ಅದಕೆ ಹೇಳಿತು.

ನಿಮ್ಮ ಪ್ರೀತಿಯ ಮರೆತೆನೆ?
ಹಾಕುತ್ತಿದ್ದ ಊಟ ಮರೆತೆನೆ?
ಬೆಚ್ಚಗೆ ಮಾಡಿಸುತ್ತಿದ್ದ ಸ್ನಾನ
ನೇವರಿಸುತ್ತಿದ್ದ ಸ್ಪರ್ಶ
ಹೇಗೆ ಮರೆಯಲಿ?


ಪಟಾಕಿಗೆ ಹೆದರುತ್ತಿದ್ದ ನನ್ನನ್ನು
ಒಳಗೆ ಕರೆದು ಮಲಗಿಸುತ್ತಿದ್ದುದ್ದನ್ನು
ಹೇಗೆ ಮರೆಯಲಿ?

ನನಗಾಯಿತು ಹದಿನಾಲ್ಕು ವರುಷ
ನನ್ನ ಆರೋಗ್ಯ ಕೆಟ್ಟಿತು
ಇದ್ದರೆ ಇನ್ನೊಂದು ವರುಷ
ಅಷ್ಟೆ ನನ್ನ ಆಯುಷ್ಯ

ನನ್ನ ಆರೋಗ್ಯ ಹದಗೆಟ್ಟಿದೆ
ನಿಮಗೆಷ್ಟು ತೊಂದರೆ
ಆಗ ನೀವು ಪಡುವ ಬವಣೆ
ಅದು ಬೇಡ ಎನಗೆ

ನಗು ನಗುತ ನೀವು ಇದ್ದಾಗ
ನಾನು ಹೋಗಿ ಬರುವೆ ಎಂದಾಗ
ಬರುವೆಯ ಮತ್ತೆ ನಮ್ಮ ಪ್ರೀತಿಯ ಜಾಂಟಿ?
ನಿಮ್ಮ ಋಣ ಇದ್ದರೆ
ಯಾಕಾಗಬಾರದು ಎಂದಿತು.
ಕಣ್ಣು ಬಿಟ್ಟೆ 'ಕನಸು!'
ನನಸಾಗ ಬಾರದೆ?

ನಮ್ಮ ಪ್ರೀತಿಯ ಜಾಂಟಿ
ಮತ್ತೆ ನೀ ಎಂದು ಬರುವೆ?
***



'ಅಕ್ಷರಶಹ – ೧೦೧'ಕ್ಕೆ (ಪುಟ 186) ಉತ್ತರ
೧. ಹೊ ಳ ಲು ಹೊ ಹೊ ಗ ಳು
೨. **ದಿ** ಗ ಲು ದಿ **ದಿ** ಣ್ಣೆ
೩. **ರ** ಗ ಳೆ ರ **ರ** ಸ ಹೀ ನ
೪. **ಚಂ** ದ ನ ಚಂ **ಚಂ** ದಿ ರ
೫. ಕೋ **ಸ** ಲೆ ಸ ವಿ ರ **ಸ**

ಹೊ ಸ ಚಂ ದಿ ರ

ಕ
ಥೆ

೨೦೦೭ರ ಯುಗಾದಿ ಕಥಾಸ್ಪರ್ಧೆಗೆ ಸಲ್ಲಿಸಿದ ಕಥೆ.

ರವೀಂದ್ರ ವಿಶ್ವನಾಥ್
ಕ್ಯಾಲಿಫೋರ್ನಿಯ

# ರಾಷ್ಟ್ರನಿಧಿ

"ಸುಮಾರು ಮೂರು ಸಾವಿರ ವರ್ಷಗಳಿಂದ ಕ್ರಿಸ್ತಶಕ ಹದಿನಾರನೇ ಶತಮಾನದವರೆಗೂ ಭಾರತವೇ ವಿಶ್ವದ ಅತ್ಯಂತ ಸಿರಿವಂತ ದೇಶವಾಗಿತ್ತು. ಒಂಬತ್ತನೇ ಶತಮಾನದಿಂದ ಮಧ್ಯ-ಏಶಿಯಾದಿಂದ ಬಂದ ಆಕ್ರಮಣಕಾರರು ಪದೇ-ಪದೇ ನಮ್ಮ ದೇಶವನ್ನು ಕೊಳ್ಳೆಹೊಡೆದು ಸಂಪತ್ತನ್ನು ಹೊರದೇಶಗಳಿಗೆ ಸಾಗಿಸಿದ್ದರೂ, ಅವರ ಕೈಗೆ ಸಿಕ್ಕಿದ್ದು ಈ ದೇಶದಲ್ಲಿದ್ದ ಸಂಪತ್ತಿನ ಕೇವಲ ಒಂದು ಸಣ್ಣ ಭಾಗ ಮಾತ್ರ. ಹದಿನಾರನೇ ಶತಮಾನದಲ್ಲಿಯೂ ವಿಜಯನಗರ ಸಾಮ್ರಾಜ್ಯದಲ್ಲಿ ಈ ಅಪಾರ ಸಂಪತ್ತಿನ ವೈಭವವನ್ನು ಕಾಣಬಹುದು" ಭಾಸ್ಕರ ಹೇಳುತ್ತಿದ್ದ.

ಭಾಸ್ಕರ ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಪ್ರೊಫೆಸರ್. ಅವನ ಸ್ಪೆಶಲೈಸೇಶನ್ ದಕ್ಷಿಣ ಭಾರತದ ಸಾಮ್ರಾಜ್ಯಗಳು. 'ಹಂಪೆ-ಉತ್ಸವ'ದ ಅಂಗವಾಗಿ ಬೆಂಗಳೂರಿನ ಬಸವನಗುಡಿಯಲ್ಲಿರುವ ಭಾರತೀಯ ವಿಶ್ವ ಸಂಸ್ಕೃತಿ ಸಂಸ್ಥೆಯಲ್ಲಿ ವಿಜಯನಗರ ಸಾಮ್ರಾಜ್ಯದ ಬಗ್ಗೆ ಉಪನ್ಯಾಸ ಮಾಡುತ್ತಿದ್ದ.

"ಈ ಸಂಪತ್ತು ರಾತ್ರೋ-ರಾತ್ರಿ ಹುಟ್ಟಿಕೊಂಡದ್ದಲ್ಲ. ಇದು ಸಾವಿರಾರು ವರ್ಷಗಳಿಂದ ಶೇಖರಿಸಿಕೊಂಡು ಬಂದಂತಹ ಐಶ್ವರ್ಯ. ಇದರ ಬೀಜ ಬಹುಶಃ ಮೌರ್ಯವಂಶದ ಸಾಮ್ರಾಟ್ ಅಶೋಕನ ಕಾಲದಲ್ಲಿ ಬಿತ್ತಿದ್ದಿರಬಹುದು. ನಂತರ ಸುಮಾರು ಕ್ರಿಸ್ತಶಕ ನಾಲ್ಕನೆಯ ಶತಮಾನದವರೆಗೂ ಶಾತವಾಹನರು ಇದನ್ನು ನಿಭಾಯಿಸಿಕೊಂಡು ಬಂದರು. ಶಾತವಾಹನರ ನಂತರ ಈ ನಿಧಿಯು ಮಯೂರಶರ್ಮನೆಂಬ ಬ್ರಾಹ್ಮಣನ ಕೈ ಹತ್ತಿದಾಗ ಅವನು ಪಲ್ಲವರ ವಿರುದ್ಧ ದಂಗೆಯೆದ್ದು ವೈಜಯಂತೀನಗರಿ, ಇಂದಿನ ಬನವಾಸಿಯಲ್ಲಿ ಕದಂಬ ಸಾಮ್ರಾಜ್ಯವನ್ನು ಸ್ಥಾಪಿಸಿದ. ಅದೇ ಸಮಯದಲ್ಲಿ ಈ ನಿಧಿಯು ದ್ವಿಗುಣವಾಯಿತೆಂದು ತೋರುತ್ತದೆ. ಸುಮಾರು ಇನ್ನೂರು ವರ್ಷಗಳ ಕಾಲ ಕದಂಬರು ಇದನ್ನು ಉಣಿಸುತ್ತ ಕಾಪಾಡಿದರು. ಮುಂದೆ, ಐದನೇ ಶತಮಾನದ ಮಧ್ಯಭಾಗದಲ್ಲಿ ಕದಂಬರ ಸಾಮಂತನಾಗಿದ್ದ ಪುಲಿಕೇಶಿ ಇದನ್ನು ಅಪಹರಿಸಿ ವಾತಾಪಿ, ಇಂದಿನ ಬಾದಾಮಿಯಲ್ಲಿ ಚಾಳುಕ್ಯವಂಶವನ್ನು ಸ್ಥಾಪಿಸಿದ. ಚಾಳುಕ್ಯ ಅರಸ ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಈ ಬೊಕ್ಕಸಕ್ಕೆ ಮಧ್ಯಭಾರತದ ಸಂಪತ್ತು ಸೇರಿಕೊಂಡು ಇದು ನೂರುಪಟ್ಟು ಹೆಚ್ಚಿತು. ಚಾಳುಕ್ಯರ ನಂತರ ಏಳನೇ ಶತಮಾನದಲ್ಲಿ ಈ ನಿಧಿಯನ್ನು ರಾಷ್ಟ್ರಕೂಟರು ವಶಪಡಿಸಿಕೊಂಡರು. ರಾಷ್ಟ್ರಕೂಟರ ಕೆಳಗೆ ಈ ನಿಧಿಯು ಕೌತುಕ ಬೆಳವಣಿಗೆ ಕಾಣದಿದ್ದರೂ ಕ್ರಮೇಣ ಬೆಳೆಯುತ್ತಲೇ ಇತ್ತು. ರಾಷ್ಟ್ರಕೂಟರ ನಂತರ ಹೊಯ್ಸಳರ ಕೆಳಗೆ ಹನ್ನೊಂದನೇ ಶತಮಾನದಿಂದ ಹದಿನಾಲ್ಕನೇ ಶತಮಾನದ ಮಧ್ಯಭಾಗದವರೆಗೂ ಪುನಃ ಅಧಿಕವಾಗಿಯೇ ವರ್ಧಿಸಿತು. ಕ್ರಿಸ್ತಶಕ ೧೩೩೬ರಲ್ಲಿ ಈ ನಿಧಿಯು ಹರಿಹರ-ಬುಕ್ಕರ ಕೈಸೇರಿ ಅವರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ವಿಜಯನಗರದ ಅರಸರ ಕೆಳಗೆ ಮತ್ತೆ ಅತಿಯಾದ ಅಭಿವೃದ್ಧಿ ಕಂಡ ಈ ಬೊಕ್ಕಸ ಕ್ರಿಸ್ತಶಕ ೧೫೬೫ರಲ್ಲಿ ನಡೆದ ತಾಳೀಕೋಟೆ ಯುದ್ಧದ ನಂತರ ಸಂಪೂರ್ಣವಾಗಿ ಮಾಯವಾಯಿತು. ಅಂದಿನಿಂದ ಇಂದಿನವರೆಗೂ ಇದನ್ನು ಯಾರೂ ಕಂಡಿಲ್ಲ, ಇದರ ಬಗ್ಗೆ ಕೇಳಿಲ್ಲ." ಎನ್ನುತ್ತ ಭಾಸ್ಕರ ವೇದಿಕೆಯ ಮೇಲೆ ಇಟ್ಟಿದ್ದ ಮಿನರಲ್-ವಾಟರ್ ಲೋಟಕ್ಕೆ ಬಗ್ಗಿಸಿಕೊಂಡು ಕುಡಿಯುತ್ತ ತಾನು ಹೇಳಿದ ಮಾತುಗಳನ್ನು ಶ್ರೋತೃಗಳು ಅರಗಿಸಿಕೊಳ್ಳಲು ಕೊಂಚ ಸಮಯ ಕೊಟ್ಟ.

ಎರಡು ನಿಮಿಷಗಳ ಸಂಪೂರ್ಣ ಮೌನದ ನಂತರ ಸಭಿಕರು ಚೇತರಿಸಿಕೊಂಡು, ಅವರಲ್ಲೊಬ್ಬ ಕೈಯೆತ್ತಿದ. ಭಾಸ್ಕರ ಅವನ ಕಡೆ ಬೆರಳು ಮಾಡಿ ತೋರಿಸಿದಾಗ ಆತ ಎದ್ದು, "ಪ್ರೊಫೆಸರ್, ವಿಜಯನಗರವನ್ನು ಆಕ್ರಮಿಸಿದ ಬಹಮನಿ ಸುಲ್ತಾನರು ಆರು ತಿಂಗಳ ಕಾಲ ಹಂಪೆಯನ್ನು ಕೊಳ್ಳೆಹೊಡೆದು ಅಲ್ಲಿದ್ದ ಸಂಪತ್ತನ್ನು ಲೂಟಿ ಮಾಡಿದರಲ್ಲವೇ? ಈ ನಿಧಿಯನ್ನೇ ದೋಚಿರಬೇಕು." ಎಂದ.

"ಆಹಾ! ಅಲ್ಲೇ ಇರೋದು ವಿಚಿತ್ರ!" ಭಾಸ್ಕರ ಉದ್ವಿಗ್ನನಾಗಿ ಹೇಳಿದ. "ಆ ವಿಚಾರಕ್ಕೆ ಹಿಂತಿರುಗುವೆ. ಏತನ್ಮಧ್ಯೆ ಯೋಚಿಸಿ, ಘಝ್ನಿಯ, ಘೌರಿಯ ಮಹಮ್ಮದ್, ಪರ್ಶಿಯಾದ ನಾದಿರ್‌ಶಾಹ್, ಸೇರಿದಂತೆ ಅಲೆಕ್ಸಾಂಡರ್‌ನಿಂದ ಹಿಡಿದು ಬ್ರಿಟಿಷ್ ಈಸ್ಟ್-ಇಂಡಿಯಾ ಕಂಪನಿಯವರೆಗೂ ಅನೇಕ ಲೂಟಿಗಾರರು ಎಲ್ಲರೂ ಭಾರತಕ್ಕೇ ಏಕೆ ಧಾಳಿ ಇಡುತ್ತಿದ್ದರು? ಚೈನಾಗೆ, ರಶಿಯಾಗೆ ಏಕೆ ಹೋಗುತ್ತಿರಲಿಲ್ಲ." ಪುನಃ ಮೌನ, ನಂತರ "ಈ ಅದ್ಭುತ ನಿಧಿಯ ವಿಚಾರ ಎಲ್ಲೆಲ್ಲೂ ಪ್ರಚಲಿತವಾಗಿತ್ತು. ಎಲ್ಲರೂ ಬರುತ್ತಿದ್ದದ್ದು ಈ ಅಪಾರ ನಿಧಿಯನ್ನು ಪಡೆಯಲೆಂದೇ."

ನಂತರ ಸೌಮ್ಯ ಧ್ವನಿಯಲ್ಲಿ ಮುಂದುವರಿಸಿದ, "ಘಝ್ನಿಯ ಮಾಹ್ಮೂದ್ ಭಾರತವನ್ನು ಲೂಟಿ ಮಾಡಲು ಹದಿನೇಳು ಬಾರಿ ಏಕೆ ಬರಬೇಕಿತ್ತು? ವಿಚಿತ್ರವೆನಿಸುವುದಿಲ್ಲವೇ? ಒಂದೇ ಬಾರಿ

ಬಂದು ಎಲ್ಲವನ್ನೂ ದೋಚಲಾಗುತ್ತಿರಲಿಲ್ಲವೇ? ಒಮ್ಮೆ ಲೂಟಿ ಮಾಡಿದ ನಂತರ ಮರುವರ್ಷವೇ ಪುನಃ ದೋಚಲು ಭಾರೀ ಸಂಪತ್ತು ಹೇಗೆ ಬಂದಿರುತ್ತಿತ್ತು.''

ಸಭಿಕರ ಮುಖಗಳಲ್ಲಿ ಕುತೂಹಲವನ್ನು ಕಂಡು, ''ಎಲ್ಲವೂ ಆ ಗುಪ್ತ ನಿಧಿಯ ಪರಿಣಾಮ! ಇಂದಿನ ಕಾಲದಲ್ಲಿ ನಮ್ಮ ಪರ್ಸ್ ಯಾರಾದರೂ ಹೊಡೆದರೆ ಬ್ಯಾಂಕಿಗೆ ಹೋಗಿ ಮತ್ತಷ್ಟು ಹಣ ಡ್ರಾ ಮಾಡುವುದಿಲ್ಲವೇ? ಅದೇ ರೀತಿ ಅತ್ತ ಮಾಹ್ಮೂದ್ ಲೂಟಿ ಮಾಡುತ್ತಿದ್ದ, ಅವನು ತನ್ನ ತಾಣಕ್ಕೆ ಹಿಂತಿರುಗಿದ ನಂತರ ಸಾಗರದಿಂದ ಉದ್ಧರಣೆ ನೀರು ತೆಗೆದಂತೆ ಪುನಃ ಚಲಾವಣೆಗೆ ಬೇಕಾಗುವಷ್ಟು ಸಂಪತ್ತನ್ನು ನಿಧಿಯಿಂದ ಹೊರತೆಗೆದು ಬಳಸಿಕೊಳ್ಳುತ್ತಿದ್ದರು.'' ಎಂದ ಭಾಸ್ಕರ.

ಮತ್ತೊಬ್ಬ ವಯಸ್ಸಾದ ವ್ಯಕ್ತಿ ಕೈಯೆತ್ತಿದರು, ''ಹಾಗಾದರೆ ಆ ನಿಧಿಯನ್ನೇ ಏಕೆ ಮಹಮ್ಮದ್ ಅಪಹರಿಸಲಿಲ್ಲ?''

''ಪ್ರತಿ ಬಾರಿ ಹೊರತೆಗೆದ 'ಚಲಾವಣೆ ಸಂಪತ್ತು' ತ್ಯಾಗ ಮಾಡುವುದು ಒಂದು ರೀತಿಯಲ್ಲಿ ಲೂಟಿದಾರರನ್ನು ತಡೆಹಿಡಿಯುವ ಸಾಧನೆಯಾಗಿತ್ತು– 'ಡೆಟರ್‍ರೆಂಟ್ ಅಗೈನ್ಸ್ಟ್ ರಾಬರಿ'. ಆ ಗುಪ್ತ–ನಿಧಿಯ ಒಟ್ಟು ಮೊತ್ತ ಬಿಗಿಯಾಗಿ ಕಾಪಾಡಿಕೊಂಡು ಬಂದ ರಹಸ್ಯವಾಗಿತ್ತು. ಮಾಹ್ಮೂದ್‌ಗೆ ತಿಳಿದಿದ್ದು ನಿಧಿ ಇದೆಯೆಂದು. ಭಾರತಕ್ಕೆ ಬರುತ್ತಿದ್ದ, ದೋಚುತ್ತಿದ್ದ; ತಾನು ದೋಚಿದ್ದು ಆ ನಿಧಿಯೆಂದೇ ಭಾವಿಸುತ್ತಿದ್ದ. ಮಾಹ್ಮೂದ್ ಪ್ರತಿ ಬಾರಿ ಲೂಟಿ ಮಾಡುತ್ತಿದ್ದದ್ದು ಬೃಹತ್ತಾದ ಮೊತ್ತವಾದರೂ ಈ ನಿಧಿಯ ಪಾಲಿಗೆ ತೃಣಮಾತ್ರವಾಗಿತ್ತು. ಅವನನ್ನು ತಡೆಹಿಡಿಯಲು, ನಿಧಿಯನ್ನು ಕಾಪಾಡಲು ಆ ತೃಣವನ್ನು ಬಿಟ್ಟುಕೊಡಲು ನಿಧಿಯ ಉತ್ತರಾಧಿಕಾರಿಗಳು ಸಿದ್ಧವಾಗಿದ್ದರು.''

ಪುನಃ ಮೌನ ತಾಳಿತು. ಭಾಸ್ಕರ ತನ್ನ ವಾದವನ್ನು ಒತ್ತಿ ಹೇಳಲು ಮೊದಲು ಪ್ರಶ್ನೆ ಕೇಳಿದವನ ಕಡೆ ಬೆರಳು ಮಾಡಿ, ''ಬಹಮನಿ ಸುಲ್ತಾನರ ಸೈನ್ಯ ವಿಜಯನಗರದ ರಾಜಧಾನಿಯನ್ನು ಆರು ತಿಂಗಳ ಕಾಲ ಏಕೆ ದೋಚಬೇಕಿತ್ತು? ಆ ಗಾತ್ರದ ಊರನ್ನು ದೋಚಲು ದೊಡ್ಡ ಸೈನ್ಯವೊಂದಕ್ಕೆ ಆರು ತಿಂಗಳು ಬೇಕೇ? ಅದೇನು ಬೆಂಗಳೂರಿನಷ್ಟು ದೊಡ್ಡದಲ್ಲ.'' ನೆರೆದಿದ್ದ ಜನ ಕಿರುನಗೆ ನಕ್ಕರು. ''ಇಲ್ಲ! ಬಹಮನಿ ಸುಲ್ತಾನರೂ ಆ ಅಪಾರ ರಹಸ್ಯ–ನಿಧಿಯ ವಿಚಾರವನ್ನು ಕೇಳಿದ್ದರು. ಆರು ತಿಂಗಳ ಕಾಲ ಅದನ್ನೇ ಹುಡುಕುತ್ತಿದ್ದರು. ಅವರಿಗೆ ಯಾವುದೋ ಒಂದು ಸಣ್ಣ ಗಂಟು ಸಿಕ್ಕಿ, ಅದೇ ಆ ನಿಧಿಯೆಂದು ಭಾವಿಸಿಯೋ ಅಥವ ನಿಧಿಯೇ ಸುಳ್ಳೆಂದು ನಿರ್ಧರಿಸಿಯೋ ವಿಜಯನಗರವನ್ನು ಬಿಟ್ಟು ಹೊರಟುಹೋದರು. ಒಟ್ಟಿನಲ್ಲಿ ಆ ನಿಧಿ ಅವರ ಕೈಹತ್ತಿದಂತೆ ಕಾಣುವುದಿಲ್ಲ. ಅವರ ಕೈಗೆ ಹತ್ತಿದ್ದು ಬಹುಶಃ ವಿಜಯನಗರದಲ್ಲಿ ಚಲಾವಣೆಗೆ ಹೊರತೆಗೆದಿದ್ದ ಸಂಪತ್ತು ಮಾತ್ರ. ಮೂಲ ನಿಧಿ ಹಾಗೆಯೇ ಉಳಿಯಿತು.''

ಈ ಬಾರಿ ಮಹಿಳೆಯೊಬ್ಬಾಕೆ ಕೈ ಎತ್ತಿದಳು. ಭಾಸ್ಕರ ಅವಳ ಕಡೆ ಕೈಮಾಡಿ ತೋರಿಸಿದಾಗ, ''ಹಾಗಾದರೆ ನೀವು ಹೇಳುತ್ತಿರುವ ನಿಧಿಯ ಒಟ್ಟು ಮೊತ್ತ ಎಷ್ಟಿರಬಹುದು?'' ಎಂದಳು. ಉಳಿದವರು ಗೊಣಗ ತೊಡಗಿದರು.

''ಒಳ್ಳೆ ಪ್ರಶ್ನೆ!'' ಭಾಸ್ಕರ ನಿಗೂಢವಾಗಿ ಹೇಳಿದ, ''ಯಾರಿಗೂ ತಿಳಿಯದು. ಯಾರೂ ಬಹುಶಃ ಈ ನಿಧಿಯನ್ನು ಇಡಿಯಾಗಿ ಕಂಡಿಲ್ಲ; ಕಂಡಿದ್ದರೆ ಎಲ್ಲೂ ವಿವರಿಸಿಲ್ಲ. ವಿವರಿಸುವುದೇನು, ಎಲ್ಲಿಯೂ, ಯಾರೂ ಇದರ ಉಲ್ಲೇಖವನ್ನೂ ಮಾಡಿಲ್ಲ. ಆದರೆ ಇದರ ಉಪಸ್ಥಿತಿಯ ಪ್ರಭಾವಗಳು ಇತಿಹಾಸದಲ್ಲಿ ಎಲ್ಲೆಲ್ಲೂ ಕಂಡು ಬರುತ್ತವೆ. ರಾಜ ವಂಶಗಳ ಉದಯ–ಅಸ್ತಗಳನ್ನು ವಿಧಿಸುವಂತಹ ನಿಧಿ ಇದು! ದೇಶ–ಸಾಮ್ರಾಜ್ಯಗಳ ಅರಳು–ಉರುಳುಗಳನ್ನು ನಿಯಂತ್ರಿಸುತ್ತಿದ್ದ ನಿಧಿ ಇದು! ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಆ ಜನರ ವೈಭವವಂತೂ ಹೇಳಿಯೇ ಮುಗಿಯದು! ಎಲ್ಲೆಲ್ಲೂ ಚಿನ್ನ, ಬೆಳ್ಳಿ, ವಜ್ರ, ವೈಢೂರ್ಯಗಳ ವಿವರಣೆಗಳನ್ನು ಪೋರ್ಚುಗೀಸ್ ಪ್ರಯಾಣಿಕರಾದ ಡೊಮಿಂಗೋಸ್ ಪಯಸ್ ಮತ್ತು ಫ್ಲಾನೋ ನೂನ್ಯೆಜ್ ಕೊಟ್ಟಿದ್ದಾರೆ. ಬೀದಿ–ಬೀದಿಗಳಲ್ಲಿ ಈ ಅತ್ಯಮೂಲ್ಯ ವಸ್ತುಗಳ ವ್ಯಾಪಾರ ನಡೆಯುತ್ತಿದ್ದ ವಿವರಗಳನ್ನು ಬರೆದಿದ್ದಾರೆ. ಪ್ರತಿ ವರ್ಷ ಹತ್ತಾರು ಕೋಟಿ ಚಿನ್ನದ ವರಾಹಗಳ ಕಾಣಿಕೆ ವಿಜಯನಗರದ ರಾಯನಿಗೆ ಸಾಮಂತರು ತಂದುಕೊಡುತ್ತಿದ್ದ ಬಗ್ಗೆ ವಿವರಣೆಗಳನ್ನು ಕೊಟ್ಟಿದ್ದಾರೆ. ಒಂದೊಂದು ವರಾಹವೂ ಕನಿಷ್ಠ ಮೂರರಿಂದ ನಾಲ್ಕು ಗ್ರಾಂ ಎಂದು ಭಾವಿಸಿದರೆ ನೀವೇ ಲೆಕ್ಕ ಹಾಕಿ.'' ಎಂದು ಹೇಳಿ ಯೋಚಿಸಲು ಸಮಯ ಕೊಟ್ಟ.

''ಹದಿಮೂರನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ವಲ್ಪ ಮುಂಚೆ ಕ್ರಿಸ್ತಶಕ ೧೩೧೦ರಲ್ಲಿ ಆಗಿನ ದೆಹಲಿ ಸುಲ್ತಾನನಾದ ಅಲ್ಲಾ ಉದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕ್ ಕಫೂರ್ ಡಖನ್ ಪ್ರದೇಶವನ್ನು ಆಕ್ರಮಿಸಿದ. ಮಲಬಾರ್ ತೀರದುದ್ದಕ್ಕೂ ಎಲ್ಲಾ ದೇವಾಲಯಗಳನ್ನು ಲೂಟಿ ಮಾಡಿದ್ದಲ್ಲದೆ ಇಂದಿನ ಕರ್ನಾಟಕವಿರುವ ಪ್ರದೇಶವನ್ನು ಸಂಪೂರ್ಣವಾಗಿ ಕೊಳ್ಳೆಹೊಡೆದ. ಮುಸಲ್ಮಾನ ಸಾಹಿತಿ ಫಿರಿಷ್ತಾ ಪ್ರಕಾರ ಅವನು ಸುಲ್ತಾನನಿಗೆ ಕೊಟ್ಟ ಕಾಣಿಕೆ ೩೧೨ ಆನೆ, ೨೦೦೦೦ ಕುದುರೆ, ೯೬೦೦೦ ಮಣ ಬಂಗಾರ ಹಾಗು ಮುತ್ತು, ರತ್ನ, ಪಚ್ಚೆ, ವಜ್ರ–ವೈಢೂರ್ಯಗಳಿಂದ ತುಂಬಿದ ನೂರಾರು ಪೆಟಾರಿಗಳು. ಅಂದಿನ ಲೆಕ್ಕದಲ್ಲಿ ಮದ್ರಾಸಿನ ಮಣವೆಂದರೆ ೨೫ ಪೌಂಡು, ಮುಂಬೈ ಮಣ ೨೮ ಪೌಂಡು, ಹಾಕಿನ್ಸ್ ಒಂದು ಮಣಕ್ಕೆ ೫೫ ಪೌಂಡು ಎಂದರೆ, ಮಿಡ್ಲ್‌ಟನ್ ೩೩ ಪೌಂಡು ಎನ್ನುತ್ತಾನೆ. ಮಿತವಾಗಿ ಮದ್ರಾಸ್ ಮಣವೆಂದುಕೊಂಡರೂ ಈ ಬಂಗಾರ ಸುಮಾರು ೨,೪೦೦,೦೦೦ ಪೌಂಡು ಅಂದರೆ ಸುಮಾರು ಒಂದುನೂರ ಎಂಟು ಕೋಟಿಗಿಂತ ಹೆಚ್ಚು ಗ್ರಾಂ ಬಂಗಾರ. ಇದರಿಂದ ಎಷ್ಟು ನೆಕ್‌ಲೇಸ್ ಮಾಡಿಸಿಕೊಳ್ಳಬಹುದು ಎಣಿಸಿಕೊಳ್ಳಿ.'' ಎಂದು ಭಾಸ್ಕರ ಹೇಳಿದಾಗ ಎಲ್ಲರೂ ನಕ್ಕರು.

“ಮಲ್ಲಿಕ್ ಕಫ್ಗೂರ್ ಸುಲ್ತಾನನಿಗೆ ಸಲ್ಲಿಸಿದ್ದು ತಾನು ಲೂಟಿ ಮಾಡಿದ ಬಂಗಾರದ ಶೇಕಡ 50%ರಷ್ಟು ಎಂದು ಭಾವಿಸಿದರೂ ಅವನು ಲೂಟಿ ಮಾಡಿದ ಬಂಗಾರದ ಒಟ್ಟು ಮೊತ್ತ ಇವತ್ತಿನ ಲೆಕ್ಕದಲ್ಲಿ ಕನಿಷ್ಠ ಎರಡು ಲಕ್ಷ ಕೋಟಿ ರೂಪಾಯಿ ಅಂದರೆ ಐದು ಬಿಲಿಯನ್ ಅಮೇರಿಕನ್ ಡಾಲರ್ (*ಸಂ: ಡಾಲರಿಗೆ ೪೦ರೂನಂತೆ ಐವತ್ತು ಬಿಲಿಯನ್ ಡಾಲರ್*); ಹಾಕಿನ್ಸ್‌ನ ಮಣ ತೆಗೆದುಕೊಂಡರೆ ಇದು ದ್ವಿಗುಣವಾದೀತು. ಇದಲ್ಲದೆ ಮುತ್ತು–ರತ್ನ– ವಜ್ರ–ವೈಢೂರ್ಯಗಳು ತುಂಬಿದ ಹಲವಾರು ಪೆಟಾರಿಗಳು. ಪಯಸ್ ಮತ್ತು ನೂನ್ಯೆಜ್ ಕೋಳಿಮೊಟ್ಟೆಗಾತ್ರದ ವಜ್ರಗಳ ಬಗ್ಗೆ ಬರೆದಿದ್ದಾರೆ. ೩೦–೪೦ ಕ್ಯಾರಟ್ ಭಾರವಿರುವ ವಜ್ರಗಳು ಸಾಮಾನ್ಯವಾಗಿ ಗಣಿಗಳಲ್ಲಿ ದೊರಕುತ್ತಿದ್ದವೆಂದು ಹೇಳಿದ್ದಾರೆ. ವಿಶ್ವವಿಖ್ಯಾತ ಕೋಹಿನೂರ್ ವಜ್ರ ಕೂಡ ಈ ಬೊಕ್ಕಸದಿಂದಲೇ ಬಂದಿರಬಹುದು. ತಾಳೀಕೋಟೆ ಯುದ್ಧದ ನಂತರ ವಿಜಯನಗರ ನಾಶವಾದ ಮೇಲೂ ಸಮೀಪವಿರುವ ಚಂದ್ರಗಿರಿಯ ರಾಜನ ಬಳಿ ಮೂರು ದೊಡ್ಡ ಪೆಟಾರಿ ಭರ್ತಿ ವಜ್ರಗಳಿದ್ದವೆಂದು ಮತ್ತೊಬ್ಬ ಪೋರ್ಚುಗೀಸ್, ಮಾನುವಲ್ ಬರ್‍ರಡಸ್ ಬರೆದಿದ್ದಾನೆ. ಅಷ್ಟಾಗಿ ಇದು ಕೇವಲ ಖರ್ಚಿಗೆ ಹೊರತೆಗೆದಿದ್ದ ‘ಪಾಕೆಟ್ ಚೇಂಜ್’. ಹೋಗಲಿ ಕಾಲ ಕ್ರಮೇಣ ಒಟ್ಟು ಶೇಕಡ ೨೫%ರಷ್ಟು ಖಾಲಿಯಾಗಿದೆಯೆಂದುಕೊಂಡರೂ ಆ ನಿಧಿಯ ಒಟ್ಟು ಮೊತ್ತ ಎಷ್ಟಿರಬಹುದು ಎಂದು ಕಲ್ಪಿಸಿಕೊಳ್ಳುವುದೂ ಕಷ್ಟವೇ, ಅಲ್ಲ ಅಸಾಧ್ಯ.”

ಉಪನ್ಯಾಸ ಮುಗಿದ ನಂತರ ಭಾಸ್ಕರ ತನ್ನ ಹೋಟಲ್‌ಗೆ ಹಿಂತಿರುಗಲು ಹೊರ ಹೋಗುತ್ತಿದ್ದಾಗ ಸುಮಾರು ೩೦–೩೫ ವಯಸ್ಸಿನ ದೇಹದಾರ್ಢ್ಯವುಳ್ಳ ವ್ಯಕ್ತಿಯೊಬ್ಬ ಅವನ ಎದುರಾಗಿ, “ಗುಡ್ ಲೆಕ್ಚರ್, ಪ್ರೊಫೆಸರ್. ನಿಮ್ಮನ್ನು ಇನ್ನೂ ಕೆಲವು ಪ್ರಶ್ನೆಗಳು ಕೇಳಬೇಕು, ಇಂದು ಸಮಯವಾಗಲಿಲ್ಲ. ನಿಮ್ಮನ್ನು ಎಲ್ಲಿ ಭೇಟಿ ಮಾಡಬಹುದು?” ಎಂದ.

ಜೇಬಿನಿಂದ ತನ್ನ ಬಿಸಿನೆಸ್ ಕಾರ್ಡ್ ಹೊರತೆಗೆದು ಅವನ ಕೈಗೆ ಕೊಡುತ್ತ, “ಇಗೋ, ನನ್ನ ಕಾರ್ಡ್. ನೀವು..?” ಎಂದ ಭಾಸ್ಕರ.

“ಓಹ್–ಸಾರಿ! ರಾಜೇಶ್ ನಾಗೇಶನ್. ಹಿಸ್ಟರಿ ನನ್ನ ಹಾಬಿ.” ಎನ್ನುತ್ತ ಕೈ ಕುಲುಕಿ ತನ್ನ ಕಾರ್ಡ್ ಭಾಸ್ಕರನ ಕೈಗಿಟ್ಟ.

“ರಾಜೇಶ್ ನಾಗೇಶನ್, ನಾಗೇಶನ್ಸ್ ಆಂಟೀಕ್ ಆರ್ಟ್ಸ್, ಎಂ. ಜಿ. ರಸ್ತೆ, ಬೆಂಗಳೂರು.” ಓದಿಕೊಂಡ ಭಾಸ್ಕರ.

“ಸೋ...ನಿಮ್ಮನ್ನು ಬಂದು ಕಾಣಲು ಅಪಾಯಿಂಟ್ಮೆಂಟ್ ಮಾಡಿಕೊಳ್ಳಬೇಕೇ?” ರಾಜೇಶ್ ಕೇಳಿದಾಗ ಭಾಸ್ಕರ ಪಕ್ಕ ತಿರುಗಿ “ಉಜ್ವಲಾ?” ಎಂದ.

ಮುಂದೆ ಬಂದ ಯುವತಿಯನ್ನು ತೋರಿಸಿ, “ಉಜ್ವಲಾ ನನ್ನ ರಿಸರ್ಚ್ ಅಸಿಸ್ಟೆಂಟ್. ಉಜ್ವಲಾ, ರಾಜೇಶ್ ನಾಗೇಶನ್.” ಎಂದು ಪರಿಚಯ ಮಾಡಿಸಿದ. “ಇವರು ನನ್ನೊಡನೆ ಕನ್ಸಲ್ಟ್ ಮಾಡಲು ಯಾವಾಗ ಸಮಯವಿದೆ ಎಂದು ನನ್ನ ಕ್ಯಾಲೆಂಡರ್ ನೋಡಿ ಹೇಳುವೆಯಾ?”

ಉಜ್ವಲಾ ತನ್ನ ಬಳಿ ಇದ್ದ ಡೈರಿಯೊಂದನ್ನು ತಿರುಗಿಸಿ, “ನಾಳೆ ಮಧ್ಯಾಹ್ನ ಫ್ರೀ ಇದ್ದೀರ, ಪ್ರೊಫೆಸರ್.” ಎಂದಳು.

“ನಾಳೆ ಮಧ್ಯಾಹ್ನ, ಸೇ ತ್ರೀ–ಓ–ಕ್ಲಾಕ್? ನಾನು ಹೋಟೆಲ್ ಚಾಳುಕ್ಯದಲ್ಲಿ ಇಳಿದುಕೊಂಡಿದ್ದೀನಿ.” ಭಾಸ್ಕರ ನಾಗೇಶನ್ ಕಡೆ ತಿರುಗಿ ಹೇಳಿದ.

“ಶೂರ್, ಪ್ರೊಫೆಸರ್! ಸಿ ಯು ಟುಮಾರೋ.”

*****

“ಸೋ, ‘ಬ್ಯಾಟಲ್ ಆಫ್ ತಾಳೀಕೋಟೆ’ಯ ಅನಂತರ ಆ ನಿಧಿಗೆ ಏನಾಯಿತು?” ಮರುದಿನ ಮಧ್ಯಾಹ್ನ ಭಾಸ್ಕರನ ಹೋಟಲ್ ರೆಸ್ಟೊರಾಂಟ್‌ನಲ್ಲಿ ಕುಳಿತು ಕಾಫಿ ಕುಡಿಯುತ್ತ ಮಾತನಾಡುತ್ತಿದ್ದಾಗ ನಾಗೇಶನ್ ಕೇಳಿದ.

“ಸಂಪೂರ್ಣವಾಗಿ ಮಾಯವಾಯಿತು. ಅದನ್ನು ಬಹಮನಿ ಸುಲ್ತಾನರ ಸೈನ್ಯ ದೋಚಿತೆಂದೇ ಹಲವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ನಾನು ಹೇಳಿದಂತೆ ಹಾಗಾಗಿರಲು ಸಾಧ್ಯವಿಲ್ಲ.” ಭಾಸ್ಕರ ಹೇಳಿದ.

“ಏನೂ ಸುಳಿವಿಲ್ಲವೇ? ಯಾರಾದರೂ ಕಕ್ಕಿದಾರರು? ಎನಿಥಿಂಗ್?”

“ಉಹೂಂ. ಆದರೂ... ಆಗಿನ ಮೈಸೂರು ಅರಸ ಇಮ್ಮಡಿ ತಿಮ್ಮರಾಜ, ವಿಜಯನಗರದ ಸಾಮಂತನಾಗಿದ್ದ. ಅವನ ಸೇನಾಧಿಪತಿಯಾಗಿದ್ದ ನರಸಪ್ಪನಾಯಕ ತಾಳೀಕೋಟೆ ಯುದ್ಧಕ್ಕೆ ತಿಮ್ಮರಾಜನ ಪ್ರತಿನಿಧಿಯಾಗಿ ಹೋಗಿದ್ದ. ಯುದ್ಧದಲ್ಲಿ ಗಾಯಗೊಂಡಿದ್ದ ನರಸಪ್ಪ ವಿಜಯನಗರದ ಸೋಲಿನ ನಂತರ ವಿಜಯನಗರದ ವರಾಹ, ರಾಜ್ಯ ಲಾಂಛನದೊಂದಿಗೆ ತಿಮ್ಮರಾಜನಿಗೆ ಸಂದೇಶವನ್ನು ಹೊತ್ತು ಮೈಸೂರಿಗೆ ರವಾನೆಯಾದ. ಮೈಸೂರು ತಲುಪುವ ಹೊತ್ತಿಗೆ ತನ್ನ ಕೊನೆ ಉಸಿರೆಳೆಯುತ್ತಿದ್ದ ನರಸಪ್ಪನಾಯಕ ಸಂದೇಶವನ್ನು ಹೇಳುವ ಮುನ್ನವೇ ಹತನಾದ. ಮೈಸೂರು ರಾಜ್ಯವೇ ವಿಜಯನಗರಕ್ಕೆ ಸ್ವಾಭಾವಿಕ ಉತ್ತರಾಧಿಕಾರಿಯೆಂದು ಲಾಂಛನದ ಜೊತೆ ಆ ನಿಧಿಯ ಗುಟ್ಟು ನರಸಪ್ಪನೊಡನೆ ಹೋಗಿದ್ದಿರಬಹುದೆಂದು ನನ್ನ ರಿಸರ್ಚ್ ತೋರುತ್ತದೆ.” ಭಾಸ್ಕರ ಹೇಳಿದ

“ನರಸಪ್ಪನಾಯಕ ಒಯ್ದ ಆ ಲಾಂಛನದಲ್ಲಿ ಈ ನಿಧಿಯನ್ನು ಕುರಿತು ಏನು ಮಾಹಿತಿ ಇದ್ದಿರಬಹುದು? ನಿಧಿ ಎಲ್ಲಿದೆಯೆಂದು ಹೇಳಲು ಒಂದು ಮ್ಯಾಪ್? ಅಥವ ಸ್ಥಳ ವಿವರಿಸಲು ಒಂದು ಪತ್ರ? ಏನಿರಬಹುದು, ಪ್ರೊಫೆಸರ್?”

“ಏನಾದರೂ ಮಾಹಿತಿ ಇರಬಹುದು ಎನ್ನುವುದೇ ಊಹೆ. ಇದ್ದರೆ ಅದು ಎಂತಹ ಸ್ವರೂಪದಲ್ಲಿರಬಹುದು ಎನ್ನುವುದಂತು ತೆರೆದ ಪ್ರಶ್ನೆ. ಬಹುಶಃ ಆ ಲಾಂಛನವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಸ್ಪಷ್ಟವಾಗಬಹುದು, ಬಟ್ ಅದರ್‌ವೈಸ್, ಇಮ್‌ಪಾಸಿಬಲ್ ಟು ಸೇ” ಎಂದ ಭಾಸ್ಕರ.

“ಹೋಗಲಿ ನಿಮ್ಮ ಅನಿಸಿಕೆಯಲ್ಲಿ ಆ ನಿಧಿ ಎಲ್ಲಿರಬಹುದು? ಮೈಸೂರಿನಲ್ಲೇ? ಹಂಪೆಯಲ್ಲೇ? ಅಥವ ಬೇರೆ ಇನ್ನೆಲ್ಲೋ?” ನಾಗೇಶನ್ ನಿಧಿಯ ಮಾಹಿತಿಗಾಗಿ ಕೆದಕುತ್ತಿದ್ದ.

“ಅಗೇನ್ ಇಂಪಾಸಿಬಲ್ ಟು ಸೇ. ಆ ನಿಧಿ ಕೈಯಿಂದ ಕೈಗೆ ಬದಲಾಯಿಸಿದಾಗ ಅದರ ನೆಲೆಯನ್ನು ಬದಲಾಯಿಸುತ್ತಿದ್ದರೇ, ಇಲ್ಲವೇ ಅದು ಒಂದೇ ಕಡೆ ಭದ್ರವಾಗಿ ನೆಲೆಸಿತ್ತೇ ತಿಳಿಯದು. ಹಳೆಯ ಕಾಲದ ರಾಜಧಾನಿಗಳು, ಬನವಾಸಿ, ಬಾದಾಮಿ, ಮಣ್ಯಖೇತ, ಹಳೇಬೀಡು, ಹಂಪೆ ಕೂಡ ಸಂಭವನೀಯ ನೆಲೆಗಳು. ಬಟ್ ದೆನ್ ಅಗೇನ್, ಇಲ್ಲೇ ಬೆಂಗಳೂರಿನಲ್ಲೂ ಇರಬಹುದು, ಇಲ್ಲವೇ ಯಾವುದೋ ಕಾಡಿನ ಮಧ್ಯೆ ಇರಬಹುದು.” ಭಾಸ್ಕರ ಉದ್ರಿಕ್ತ ಧ್ವನಿಯಲ್ಲಿ ಹೇಳಿದ.

ಕೊಂಚ ಮೌನ ತಾಳಿ ನಂತರ “ಆ ನಿಧಿಯನ್ನು ನೀವು ಹುಡುಕುತ್ತಿದ್ದೀರ, ಪ್ರೊಫೆಸರ್? ಹಿಂದೆ ಪತ್ತೆ ಹಚ್ಚುವ ಪ್ರಯತ್ನ ಮಾಡಿದ್ದೀರ, ಇಲ್ಲವೇ ಮುಂದೆ ಮಾಡಲಿದ್ದೀರ? ನಿಮಗೆ ಅದನ್ನು ಹುಡುಕುವ ಇಚ್ಛೆ ಇದೆಯೇ?” ಕೇಳಿದ ನಾಗೇಶನ್.

“ದೇ...” ಏನೋ ಹೇಳಲು ಹೊರಟು ಸುಮ್ಮನಾದ ಭಾಸ್ಕರ ಮತ್ತೆ ಮುಂದುವರೆಸಿದ “ನರಸಪ್ಪನಾಯಕ ತಂದ ವಿಜಯನಗರದ ರಾಜ್ಯ ಲಾಂಛನ ಇಂದಿಗೂ ಮೈಸೂರಿನ ಅರಮನೆಯ ಒಂದು ಗುಪ್ತ ಕೋಣೆಯಲ್ಲಿದೆಯೆಂದು ನನಗೆ ತಿಳಿದುಬಂದಿದೆ. ಅದನ್ನು ಪರೀಕ್ಷಿಸಲು ಪ್ಯಾಲೆಸ್ ಟ್ರಸ್ಟಿನವರನ್ನು ಆರು ತಿಂಗಳಿಂದ ಪರ್ಮಿಶನ್ ಕೇಳುತ್ತಿದ್ದೇನೆ. ಆದರೆ ಸಿಗುತ್ತಿಲ್ಲ. ಅದು ಸಿಕ್ಕರೆ ನಿಧಿಯ ಮುಂದಿನ ಕ್ಲೂ ಸಿಗಬಹುದು.”

“ಹಮ್‌ಮ್‌ಮ್..” ಎಂದು ಕೊಂಚ ಯೋಚಿಸಿ “ನಿಮಗೊಂದು ಬಿಜಿನೆಸ್ ಪ್ರಪೋಸಲ್ ಹೇಳಲೇ, ಪ್ರೊಫೆಸರ್? ಮೈಸೂರಿನ ಅರಮನೆಯಲ್ಲಿರುವ ಆ ಎಂಬ್ಲಮ್ ಪರೀಕ್ಷಿಸುವ ಅವಕಾಶ ಮಾಡಿಕೊಟ್ಟರೆ ನಿಮ್ಮ ಹುಡುಕಾಟ ಮುಂದುವರೆಸುತ್ತೀರ? ನನ್ನನ್ನೂ ಜೊತೆಗೆ ಸೇರಿಸಿಕೊಳ್ಳುತ್ತೀರ?” ನಾಗೇಶನ್ ಕೇಳಿದ.

“ಅದು...ಹೇಗೆ ಸಾಧ್ಯ? ನಾನು ಪ್ರಯತ್ನ ಮಾಡುತ್ತಲೇ ಇದ್ದೀನಿ.”

“ನಿಮ್ಮ ದಾರಿ ಹಿಡಿದರೆ ಅದನ್ನು ಜನ್ಮದಲ್ಲಿ ನೀವು ಪರೀಕ್ಷಿಸಲಾಗದು. ಅದನ್ನು ಪರೀಕ್ಷಿಸಲು, ಪಡೆಯಲು ಬೇರೆ ಸಾಧನಗಳೂ ಇವೆ, ಪ್ರೊಫೆಸರ್. ಬೈ ಹುಕ್ ಆರ್ ಕ್ರುಕ್ ಅದನ್ನು ನಿಮ್ಮ ಮುಂದಿಟ್ಟರೆ?” ನಾಗೇಶನ್ ಖಳನಂತೆ ಹಲ್ಲುಕಿರಿದು ಕೇಳಿದ.

“ಅಂದರೆ...? ನೋ! ನಾನು ಗೈರು-ಕಾನೂನಿ ಕೆಲಸ ಮಾಡಲಾರೆ, ಒಪ್ಪಲಾರೆ.” ಸದಾಚಾರದ ಕೋಪ ತುಂಬಿದ ಧ್ವನಿಯಲ್ಲಿ ಹೇಳಿದ ಭಾಸ್ಕರ.

“ನಿಮಗೆ ಆ ಲಾಂಛನ ಪರೀಕ್ಷಿಸಿ ನಿಧಿಯನ್ನು ಹುಡುಕುವುದು ಮುಖ್ಯವೋ? ಇಲ್ಲ...? ನನ್ನನ್ನು ನಿಮ್ಮ ಟ್ರೆಶರ್ ಹಂಟ್ ನಲ್ಲಿ ಪಾರ್ಟ್ನರ್ ಮಾಡಿಕೊಂಡರೆ ನಾನು ಆ ಲಾಂಛನವೊಂದೇ ಅಲ್ಲ ಫೈನಾನ್ಸಿಂಗ್ ಕೂಡ ನೋಡಿಕೊಳ್ಳುತ್ತೇನೆ.”

“ಮಿಸ್ಟರ್ ನಾಗೇಶನ್, ನಾನು ಹಣಕ್ಕಾಗಿ ಈ ಖಜಾನೆಯನ್ನು ಹುಡುಕುತ್ತಿಲ್ಲ. ನನ್ನ ಧ್ಯೇಯಗಳೇ ಬೇರೆ. ನಮ್ಮ ಚರ್ಚೆ ಮುಗಿದಿದೆಯೆಂದು ಭಾವಿಸುತ್ತೇನೆ, ಗುಡ್-ಬೈ.” ಭಾಸ್ಕರ ನಿಲ್ಲುತ್ತ ಕಿರುಗಣ್ಣು ಮಾಡಿಕೊಂಡು ಕಟುವಾಗಿ ಹೇಳಿದ.

“ಓ.ಕೇ. ಪ್ರೊಫೆಸರ್. ನೀವು ಇನ್‌ಡಿಸ್ಪೆನ್‌ಸಿಬಲ್ ಅಲ್ಲ. ನಾನೇ ಮುಂದಿನ ದಾರಿ ನೋಡಿಕೊಳ್ಳುತ್ತೇನೆ. ಗುಡ್-ಬೈ.” ಎನ್ನುತ್ತ ನಾಗೇಶನ್ ಹೊರಟುಹೋದ.

“ಗುಡ್ ರಿಡೆನ್ಸ್.” ಎಂದು ಗೊಣಗುತ್ತ, “ಉಜ್ವಲಾ? ಕೇಳಿದೆಯಾ..?” ಅಲ್ಲೇ ಇದ್ದ ಉಜ್ವಲಾಳನ್ನು ಕುರಿತು ಹೇಳಿದ ಭಾಸ್ಕರ.

“ಯಸ್ ಪ್ರೊಫೆಸರ್. ನಾಗೇಶನ್ ಕೈಗೆ ಆ ಲಾಂಛನ ಅಥವ ನಿಧಿ ಸಿಕ್ಕರೆ ಒಳ್ಳೆಯದಾಗಲಾರದು.” ನಿಧಾನವಾಗಿ ಉಸುರಿದಳು ಉಜ್ವಲಾ.

“ಆ ಲಾಂಛನ ನಾಗೇಶನ್ ಕೈಸೇರುವ ಮುಂಚೆ ನಾವೇ ಅದನ್ನು ಹೇಗಾದರು ಪರೀಕ್ಷಿಸಬೇಕು. ಅದು ಅವನ ಕೈಸೇರಿದರೆ ಅನಾಹುತವಾದೀತು!” ಎಂದ ಭಾಸ್ಕರ.

*****




ಚಿತ್ರ: ಸೌಜನ್ಯ ಕೇಣಿ

ತುರ್ತಾಗಿ ಭಾಸ್ಕರ, ಉಜ್ವಲ ಮೈಸೂರಿಗೆ ರವಾನೆಯಾಗಿ, ಅರಮನೆ ರಕ್ಷಣಾ ಅಧಿಕಾರಿಯಾದ ಇನ್ಸ್‌ಪೆಕ್ಟರ್ ಮಹೇಶ್ವರ ಜೊತೆಗೆ ಭೇಟಿ ಮಾಡಿದರು.

"ಹಲೋ ಇನ್ಸ್‌ಪೆಕ್ಟರ್. ನಾನು ಪ್ರೊಫೆಸರ್ ಭಾಸ್ಕರ, ಹಂಪೆ ಕನ್ನಡ ಯೂನಿವರ್ಸಿಟಿ, ಹಿಸ್ಟರಿ–ಡಿಪಾರ್ಟ್‌ಮೆಂಟ್." ಭಾಸ್ಕರ ಇನ್ಸ್‌ಪೆಕ್ಟರ್ ಕೈಕುಲುಕುತ್ತ ಹೇಳಿದ.

"ನಮಸ್ಕಾರ ಪ್ರೊಫೆಸರ್. ನಿಮಗೆ ನಾನೇನು ಸೇವೆ ಮಾಡಬಲ್ಲೆ?" ಇನ್ಸ್‌ಪೆಕ್ಟರ್ ವಿಚಾರಿಸಿದ.

"ಸುತ್ತಿ ಬಳಸಿ ಮಾತನಾಡೋದಿಲ್ಲ, ನೇರವಾಗಿ ಹೇಳುತ್ತೇನೆ. ಯಾರೋ ಅರಮನೆಯನ್ನು ದರೋಡೆ ಮಾಡುವವರಿದ್ದಾರೆ." ಭಾಸ್ಕರ ಪೀಠಿಕೆಯಿಲ್ಲದೆ ಹೇಳಿದ.

ಇನ್ಸ್‌ಪೆಕ್ಟರ್ ಮುಖದಲ್ಲಿ ಕಿರುನಗೆ ಕಾಣಿಸುತ್ತಿತ್ತು, "ಪ್ರೊಫೆಸರ್, ಅದು ಸಾಧ್ಯವಿಲ್ಲ. ಹಗಲಲ್ಲಿ ಗಾರ್ಡ್‌ಗಳು ಸುತ್ತಲೂ ಇರುತ್ತಾರೆ, ರಾತ್ರಿಯಿಡೀ ಪ್ಯಾಟ್ರೋಲ್ ಮಾಡುತ್ತೇವೆ. ಅರಮನೆ ಸುರಕ್ಷಿತವಾಗಿದೆಯೆಂದು ನಿಮಗೆ ಆಶ್ವಾಸನೆ ಕೊಡುತ್ತೇನೆ."

ಭಾಸ್ಕರನ ಮುಖ ಗಂಭೀರವಾಗಿತ್ತು, "ನನಗದರಲ್ಲಿ ವಿಶ್ವಾಸವಿಲ್ಲ, ಆದರೆ ಅರಮನೆಯಲ್ಲಿರುವ ಒಂದು... ವಸ್ತುವನ್ನು ಪರೀಕ್ಷಿಸುವ ಅವಕಾಶ ಮಾಡಿಕೊಟ್ಟರೆ, ದರೋಡೆಯ ಸಾಧ್ಯತೆ ಇದೆಯೇ, ಇಲ್ಲವೇ ಹೇಳಬಲ್ಲೆ."

"ಆ 'ವಸ್ತು'ವಿನಲ್ಲಿ ಏನಿದೆಯೆನ್ನುವುದು ನಿಮ್ಮ ಅನಿಸಿಕೆ, ಪ್ರೊಫೆಸರ್?"

"ನಿಖರವಾಗಿ ಹೇಳಲಾಗುವುದಿಲ್ಲ, ಇನ್ಸ್‌ಪೆಕ್ಟರ್. ಆದರೆ ಇಡೀ ವಿಶ್ವವನ್ನೇ ಅಲುಗಾಡಿಸುವ ಮಾಹಿತಿ ಇರಬಹುದು."

"ವಿಶ್ವವನ್ನಲುಗಾಡಿಸುವ ಮಾಹಿತಿಯುಳ್ಳ ಅನಾಮಧೇಯ ವಸ್ತುವಿನ ಕಾರಣ ಅರಮನೆಯಲ್ಲಿ ದರೋಡೆಯಾಗಲಿದೆ, ಹೌದಾ?" ಇನ್ಸ್‌ಪೆಕ್ಟರ್ ಮುಖದಲ್ಲಿ ಅಪನಂಬಿಕೆಯಿತ್ತು. "ಆದರೆ ನಿಮಗೆ ಆ ವಸ್ತುವನ್ನು ಪರೀಕ್ಷಿಸುವ ಅವಕಾಶ ಕೊಡಲು ನನಗೆ ಅಧಿಕಾರವಿಲ್ಲ. ಅದಕ್ಕೆ ಪ್ಯಾಲೆಸ್ ಟ್ರಸ್ಟೊಂದಿಗೆ..."

"ಥ್ಯಾಂಕ್ಸ್, ಇನ್ಸ್‌ಪೆಕ್ಟರ್. ನಾವಿನ್ನು ಬರುತ್ತೇವೆ, ನಮಸ್ಕಾರ." ಎನ್ನುತ್ತ ಭಾಸ್ಕರ ಎದ್ದು ಹೊರಟ.

*****

ಭಾಸ್ಕರ, ಉಜ್ವಲಾ ಪ್ರವೇಶ ಟಿಕೆಟ್ ಖರೀದಿಸಿ ಅರಮನೆಯ ಸಂಚಾರ ಮಾಡುತ್ತಾ 'ಗೊಂಬೆ ತೊಟ್ಟಿ'ಯನ್ನು ಹಾಯ್ದು ಗಂಡಭೇರುಂಡದ ಚಿಹ್ನೆಯನ್ನು ಹೊಂದಿದ್ದ 'ಆನೆ ದ್ವಾರದ' ಮುಂದೆ ಬಂದು ನಿಂತರು. ಬಾಗಿಲೊಳಗಿದ್ದ ಪ್ರಾಕಾರವನ್ನು ಸುತ್ತಿ ಅಷ್ಟಕೋನಾಕಾರದ ಕಲ್ಯಾಣ ಮಂಟಪಕ್ಕೆ ಹೋದರು. ಕಲ್ಯಾಣ ಮಂಟಪದಿಂದ ಮೆಟ್ಟಿಲುಗಳನ್ನೇರಿ ಆನೆ ದಂತದ ಅಲಂಕಾರವನ್ನು ಕೆತ್ತಿ ಕೂರಿಸಿದ್ದ ಬೀಟೆ ಮರದ ಬಾಗಿಲನ್ನು ಹಾಯ್ದು ಅಂಬಾವಿಲಾಸಕ್ಕೆ ಬಂದರು. ನಂತರ ವಿಶಾಲವಾದ ದಿವಾನ್–ಏ–ಆಮ್ ದರ್ಬಾರ್ ದಾಟಿ ಪುನಃ ಮೆಟ್ಟಿಲನ್ನೇರಿ ಆಯುಧ ಶಾಲೆಯನ್ನು ತಲುಪಿದರು. ಉದ್ದಕ್ಕೂ ಒಂದೇ ಸಮನೆ ವರ್ಣನೆ ಒದರುತ್ತಿದ್ದ ಗೈಡ್ ಒಬ್ಬ ಹೇಳುತ್ತಿದ್ದ, "ಈ ಆಯುಧಶಾಲೆ ವಿಶಿಷ್ಟವಾದದ್ದು. ಇಲ್ಲಿ ಹದಿನಾಲ್ಕನೇ ಶತಮಾನದಿಂದ ಉಪಯೋಗಿಸಲ್ಪಟ್ಟ ಶಸ್ತ್ರಾಸ್ತ್ರ–ಕವಚಗಳನ್ನು ಕಾಣಬಹುದು. ಇಗೋ ಇದು ನೋಡಿ ವ್ಯಾಘ್ರಾಂಖ, ಇದು ವಜ್ರಮುಷ್ಠಿ– ಕಂಠೀರವ ನರಸರಾಜ ಒಡೆಯರು ಉಪಯೋಗಿಸಿದ ಕತ್ತಿ. ಒಟ್ಟು ೭೨೫ ಆಕ್ರಮಣ–ಆತ್ಮರಕ್ಷಣೆಯ ಆಯುಧಗಳಿವೆ. ಹಳೆಯ ಕಾಲದ ಮುದ್ಗರ, ಸುರಾಗಿ, ಜಾಂಬಿಯ, ಭರ್ಜಿಗಳನ್ನೂ. .."

ಭಾಸ್ಕರ ದೂರ ಸರಿದು ಬೀಗ ಹಾಕಿದ್ದ ಕೋಣೆಯೊಂದರ ಬಾಗಿಲಿಗೆ ಹೋಗಿ, ಚಿಂತಾಮಗ್ನನಾಗಿ ನಿಂತಿದ್ದ. "ದಸರಾ–ಮೆರವಣಿಗೆಯಲ್ಲಿ ಬಳಸುವ ಬಂಗಾರದ ರಾಜ ಸಿಂಹಾಸನ ಈ ಕೋಣೆಯಲ್ಲಿ ಇರುತ್ತದೆ." ಭಾಸ್ಕರ ನಿಂತ ಬಾಗಿಲನ್ನು ತೋರಿಸುತ್ತ ಗೈಡ್ ಹೇಳಿದ. "ಮೈಸೂರಿನ ರಾಜ್ಯ–ಲಾಂಛನ, ಇತರ ಪತಾಕೆಗಳನ್ನೂ ಇಲ್ಲಿಯೇ ಇರಿಸಿರುತ್ತಾರೆ. ಮುಂದೆ ದೇವಾಲಯಗಳಿಗೆ ಹೋಗೋಣ." ಜನರೆಲ್ಲರೂ ಅವನ ಹಿಂದೆ ಹೊರಟರು. ಭಾಸ್ಕರ, ಉಜ್ವಲಾ ಹಿಂದುಳಿದರು.

ಮುಚ್ಚಿದ್ದ ಬಾಗಿಲನ್ನು ನೋಡಿ, ನಂತರ ಉಜ್ವಲಾಳನ್ನು ನೋಡಿ ಹೌದೆಂದು ಭಾಸ್ಕರ ಕತ್ತು ಕುಲುಕಿದ. ಉಜ್ವಲಾ ಕಣ್ಣಿನಲ್ಲೇ ತನಗೆ ಅರ್ಥವಾಗಿರುವುದೆಂದು ತೋರಿಸಿದಳು. ಭಾಸ್ಕರ ಬೆರಳುಮಾಡಿ ಆಚೆ ತೋರಿಸಿದಾಗ ಇಬ್ಬರೂ ಅರಮನೆಯಿಂದ ಹೊರಬಿದ್ದರು. ಕೂಡಲೇ ಉಜ್ವಲಾ ತಲೆ ಬಗ್ಗಿಸಿಕೊಂಡು ಭಾಸ್ಕರನ ಕೈ ಹಿಡಿದು ಎಳೆದುಕೊಂಡು ಸರ–ಸರನೆ ಓಡತೊಡಗಿದಳು.

"ಯಾ..ಏ...??" ಭಾಸ್ಕರ ಎನ್ನುವಷ್ಟರಲ್ಲಿ ಅರಮನೆಯ ಪ್ರವೇಶ ದ್ವಾರದ ಹೊರಗಿದ್ದರು.

"ನಾಗೇಶನ್! ಒಳಗೆ!" ಉಜ್ವಲಾ ಹೇಳಿದಾಗ ಭಾಸ್ಕರನಿಗೆ ಗಾಬರಿಯಾಯಿತು.

"ಹಾಗಾದರೆ ಅವನು ಇವತ್ತೇ...?"

“ಹೌದು ಪ್ರೊಫೆಸರ್...” ಉಜ್ವಲಾ ಹೇಳಿದಳು

“ಉಳಿದಿರುವುದೊಂದೇ ದಾರಿ. ಹೇಗಾದರೂ ಆಯುಧ ಶಾಲೆಗೆ ಹೋಗಿ ಆ ಕೋಣೆಯ ಬಾಗಿಲಿನ ಬೀಗ ತೆಗೆದು ಒಳಗೆ ನೋಡಬೇಕು.” ಭಾಸ್ಕರ ಧೃಡವಾಗಿ ನಿರ್ಧರಿಸಿದ.

*****

ಅಂದು ಭಾನುವಾರವಾದ್ದರಿಂದ ಆ ಸಂಜೆ ೭:೦೦ರಿಂದ ೮:೦೦ ಘಂಟೆಯುವರೆಗು ಅರಮನೆಯನ್ನು ವಿದ್ಯುತ್ ದೀಪಗಳಿಂದ ಪ್ರಕಾಶಿಸಲಾಗಿತ್ತು. ಭಾಸ್ಕರ, ಉಜ್ವಲಾ ಮುಖ್ಯದ್ವಾರವನ್ನು ಪ್ರವೇಶಿಸಿ ಆ ಸುಂದರ ದೃಶ್ಯವನ್ನು ನೋಡುತ್ತ ಅರಮನೆಯ ಅಂಗಳದಲ್ಲಿ ಕುಳಿತರು.

“ಆ ಲಾಂಛನ ಈ ಹೊಸ ಅರಮನೆಗೆ ಹೇಗೆ ಬಂದಿರಬಹುದು? ಇದು ಇತ್ತೀಚೆಗೆ ಕಟ್ಟಿದ ಅರಮನೆಯಲ್ಲವೆ?” ಉಜ್ವಲಾ ಕೇಳಿದಳು.

“ಹೌದು. ಹಳೆಯ ಅರಮನೆ ೧೮೯೭ರಲ್ಲಿ ಸುಟ್ಟು ಭಸ್ಮವಾಯಿತು. ಅದೇ ಸ್ಥಳದಲ್ಲಿ ಈ ಹೊಸ ಅರಮನೆಯನ್ನು ೧೯೧೨ರಲ್ಲಿ ಕಟ್ಟಲಾಯಿತು. ಹಳೆ ಅರಮನೆಯಲ್ಲಿದ್ದ ರಾಜ ಸಿಂಹಾಸನ, ರಾಜ್ಯ ಲಾಂಛನ, ಪತಾಕೆಗಳನ್ನು ಇದ್ದಂತೆಯೇ ಹೊಸ ಅರಮನೆಗೆ ಸಾಗಿಸಲಾಯಿತು. ಒಂದು ರೀತಿ ಮೂಢನಂಬಿಕೆಯೆಂದುಕೋ, ಮೊದಲಿದ್ದಂತೆಯೇ ಕಾಪಾಡಿಕೊಂಡು ಬಂದರೆ ಅದೃಷ್ಟ ದೇವಿ ಜೊತೆಗೇ ಬರುವಳೆಂದು. ಆ ಸಮಯದಲ್ಲಿ ವಿಜಯನಗರದ ವರಾಹ ಲಾಂಛನವೂ ಉಳಿದ ಪತಾಕೆಗಳೊಂದಿಗೆ ಬಂದಿರಲೇಬೇಕು. ಒಡೆಯರ ವಂಶದ ಅರಸರು ವರಾಹ ಸ್ವಾಮಿಯ ಭಕ್ತರು. ಹಾಗಾಗಿ ಆ ವರಾಹ ಲಾಂಛನವನ್ನು ಬಿಸಾಡಿರಲಾರರು. ಮೇಲಾಗಿ ಮೈಸೂರಿನ ಪಾರಂಪರಿಕ ಪತಾಕೆಗಳಲ್ಲಿ ಒಂದು ವರಾಹ ಲಾಂಛನವೂ ಇದೆಯೆಂದು ಮೂಲ ಸೂತ್ರಗಳಿಂದ ನನಗೆ ತಿಳಿದು ಬಂದಿದೆ. ಮೈಸೂರಿನ ಲಾಂಛನ ಗಂಡಭೇರುಂಡ, ಹಾಗಾಗಿ ವರಾಹ ಲಾಂಛನವೆಂದರೆ ನರಸಪ್ಪನಾಯಕ ತಂದ ವಿಜಯನಗರದ ಲಾಂಛನವೇ ಆಗಿರಬೇಕು.” ಭಾಸ್ಕರ ವಿವರಿಸಿದ. “ರಾಜ ಸಿಂಹಾಸನ, ಪತಾಕೆಗಳು ಆ ಕೋಣೆಯಲ್ಲಿದ್ದರೆ ನಮಗೆ ಬೇಕಾಗಿರುವ ವಸ್ತುವೂ ಅಲ್ಲೇ ಇರಬೇಕು.”

ನೋಡುತ್ತಿದ್ದಂತೆ ಘಂಟೆ ೮:೦೦ ಆಯಿತು. ಅಂಗಳದಲ್ಲಿ ಕುಳಿತು ನೋಡುತ್ತಿದ್ದ ಜನ ಒಬ್ಬೊಬ್ಬರಾಗಿ ಹೊರಗೆ ಹೋದರು. ಭಾಸ್ಕರ ಹಾಗು ಉಜ್ವಲಾ ಬಳಿಯಿದ್ದ ಬೆಂಚುಗಳ ಕೆಳಗೆ ಅವಿತು ಕುಳಿತಿದ್ದರು. ೯:೦೦ ಘಂಟೆ ಹೊಡೆದ ನಂತರ ಅರಮನೆ ಸೆಕ್ಯೂರಿಟಿ ಗಾರ್ಡ್ಸ್ ಬಂದು ಅರಮನೆಯ ಅಂಗಳದಲ್ಲಿ ಕಾಟಾಚಾರಕ್ಕೊಮ್ಮೆ ಪಹರೆ ನಡೆಸಿ ಹೊರಟುಹೋದರು. 10:00 ಘಂಟೆಗೆ ಪೋಲೀಸ್ ಸಿಬ್ಬಂದಿಗಳು ಬಂದು ಪಹರೆ ಕೊಟ್ಟು ಹೋದರು. ಅವಿತುಕೊಂಡಿದ್ದ ಭಾಸ್ಕರ, ಉಜ್ವಲಾರನ್ನು ಯಾರೂ ಗಮನಿಸಲಿಲ್ಲ. ೧೧:೦೦ ಘಂಟೆಗೆ ಎಲ್ಲವೂ ಶಾಂತವಾಗಿತ್ತು. ಭಾಸ್ಕರ ಇನ್ನೂ ಸ್ವಲ್ಪ ಹೊತ್ತು ಅಲುಗಾಡಲಿಲ್ಲ. ಕೊನೆಗೆ ಇಬ್ಬರೂ ಹೊರಗೆ ಬಂದರು. ಭಾಸ್ಕರ, “ಯೋಚಿಸದೆ ನಾನು ನಿನ್ನನ್ನು ಈ ಪಿತೂರಿಗೆ ಎಳೆದಿದ್ದೀನಿ. ಆದರೆ ನೋ ಮೋರ್. ನೀನು ಹೊರಗೇ ಇರು, ನಾನು ಒಳಗೆ ಹೋಗಿ ಹುಡುಕುವೆ. ನಾನೇನಾದರೂ ಸಿಕ್ಕಿಹಾಕಿಕೊಂಡರೆ ನೀನು ಅರಮನೆ ನೋಡಲು ಬಂದು ನಿದ್ದೆ ಮಾಡಿಬಿಟ್ಟಿದ್ದೆ ಎಂದು ಹೇಳಿ ತಪ್ಪಿಸಿಕೊ. ಉದ್ದಕ್ಕೂ ಸೆಲ್ ಫೋನ್ ಮೇಲೆ ಕಾಂಟ್ಯಾಕ್ಟ್‌ನಲ್ಲಿರೋಣ.” ಎಂದು ಹೇಳಿ ಅರಮನೆಯೊಳಗೆ ಹೊರಟ.

‘ಗೊಂಬೆ ತೊಟ್ಟಿ’ಯನ್ನು ಹಾಯ್ದು ‘ಆನೆ ದ್ವಾರ’ಕ್ಕೆ ಬಂದು ನಿಂತ. ಮುಖ್ಯ ದ್ವಾರದ ಪಕ್ಕದಲ್ಲಿದ್ದ ಒಂದು ಸಣ್ಣ ಬಾಗಿಲಿಗೆ ಬೀಗಗಳಿರಲಿಲ್ಲ. ಬಾಗಿಲನ್ನು ನಿಧಾನವಾಗಿ ತೆಗೆದು ಅರಮನೆಯೊಳಗೆ ಹೊಕ್ಕ. ಸುತ್ತಲು ನರಪಿಳ್ಳೆಯೂ ಇಲ್ಲದಿರುವುದು ವಿಚಿತ್ರವೆನಿಸಿತು. ಬೆಳಗ್ಗೆ ಹೋಗಿದ್ದ ದಾರಿಯನ್ನೇ ಹಿಡಿದು ಕಲ್ಯಾಣ ಮಂಟಪವನ್ನು ದಾಟಿ ಮೆಟ್ಟಿಲುಗಳನ್ನೇರಿ ಅಂಬಾವಿಲಾಸ ಹಾಗು ದಿವಾನ್-ಎ-ಆಮ್ ದರ್ಬಾರುಗಳನ್ನು ಹಾಯ್ದು ಪುನಃ ಮೆಟ್ಟಿಲನ್ನೇರಿ ಆಯುಧಶಾಲೆಯನ್ನು ಪ್ರವೇಶಿಸಿ, ಬೀಗ ಹಾಕಿದ್ದ ಕೋಣೆಯ ಮುಂದೆ ಬಂದು ನಿಂತ.

“ಓ.ಕೆ. ಲಾಕ್ಡ್ ರೂಂ ಮುಂದೆ ಬಂದಿದ್ದೇನೆ. ಈಗ ಬೀಗ ತೆಗೆಯುವುದು ಹೇಗೆಂದು ನೋಡಬೇಕು.” ಕಿವಿಗೆ ಸಿಕ್ಕಿಸಿಕೊಂಡಿದ್ದ ತನ್ನ ಮೊಬೈಲಿನ ಹ್ಯಾಂಡ್ಸ್-ಫ್ರೀ ಮೈಕ್ರೋಫೋನಿನೊಳಕ್ಕೆ ಹೇಳಿದ.

“ಗಾಟ್ ಇಟ್, ಪ್ರೊಫೆಸರ್.” ಹೊರಗಿದ್ದ ಉಜ್ವಲಾಳ ಧ್ವನಿ ಭಾಸ್ಕರನ ಕಿವಿಯಲ್ಲಿ ಮೊಳಗಿತು.

ಭಾಸ್ಕರ ಬೀಗವನ್ನು ಒಡೆಯಲು ಯಾವುದಾದರೂ ಆಯುಧವನ್ನು ಹುಡುಕತೊಡಗಿದ. “ಆಯುಧಶಾಲೆಯಲ್ಲಿ ಒಂದು ಬೀಗ ಒಡೆಯಲು ಆಯುಧಗಳು ಸಿಗುವುದಿಲ್ಲ!” ಎಂದು ಗೊಣಗಿಕೊಂಡ.

ಕೆಲ ನಿಮಿಷಗಳು ಮೌನದಲ್ಲಿಯೇ ಕಳೆದವು. ಭಾಸ್ಕರ ತೆಳ್ಳನೆಯ ತಂತಿಯೊಂದನ್ನು ಇನ್ನೂ ಹುಡುಕುತ್ತಲೇ ಇದ್ದ. ಉಜ್ವಲಾಳ ಕಾತರದ ಧ್ವನಿ ಕಿವಿಯಲ್ಲಿ ಕೇಳಿ ಬಂತು “ಪ್ರೊಫೆಸರ್, ಯಾರೋ ಬಾಗಿಲ ಒಳಗೆ ಬರುತಿದ್ದಾರೆ. ಪೋಲೀಸರ ಹಾಗೆ ಕಾಣಿಸುತ್ತಿಲ್ಲ. ಬಹುಶಃ ನಾಗೇಶನ್ ಕಡೆಯವರಿರಬಹುದು.”

ಅನಿರ್ದಿಷ್ಟ ಶಬ್ದ ಮಾಡುತ್ತ, ಭಾಸ್ಕರ ಸುತ್ತ ನೋಡಿದಾಗ ಅವನ ಕಣ್ಣು ಬಿದ್ದದ್ದು ಗದೆಯೊಂದರಮೇಲೆ. ಭಾರವಾಗಿದ್ದ ಗದೆಯನ್ನು ಕೈಗೆತ್ತಿಕೊಂಡು ಹೋಗಿ ಆ ಬಾಗಿಲ ಮೇಲೆ

ಬಲವಾಗಿ ಪ್ರಹಾರ ಮಾಡಿದ. ಎರಡು ಏಟುಗಳಿಗೆ ಬಾಗಿಲು ಮುರಿಯಿತು.

ಗುಪ್ತ ಕೋಣೆಯಳಹೊಕ್ಕ ಭಾಸ್ಕರನ ದೃಷ್ಟಿ ಮೊದಲು ಬಿದ್ದದ್ದು ಗೋಡೆಗೆ ಒರಗಿಸಿಟ್ಟ ಪತಾಕೆಗಳ ಮೇಲೆ. ಕೋಣೆಯಲ್ಲಿದ್ದ ಏಕೈಕ ವರಾಹ ಲಾಂಛನ ಮೂಲೆಯಲ್ಲಿತ್ತು. ಎರಡು ಅಡಿ ಅಡ್ಡಳತೆಯಿದ್ದ ವೃತ್ತಾಕಾರದಲ್ಲಿದ್ದ ಅದರ ಬಲಭಾಗದಲ್ಲೊಂದು ವರಾಹವಿತ್ತು. ವರಾಹದ ತಲೆಯ ಮೇಲೊಂದು ಅರ್ಧ ಚಂದ್ರ, ಎಡಭಾಗಲ್ಲಿ ಒಂದು ಕತ್ತಿ, ಅದರ ಪಕ್ಕದಲ್ಲೊಂದು ಸಣ್ಣ ಗುಂಡಿ. ಭಾಸ್ಕರ ಲಾಂಛನವನ್ನು ಕೈಗೆತ್ತಿಕೊಂಡು ಅದರ ಮೇಲಿನ ಧೂಳನ್ನು ಒರೆಸುತ್ತಿದ್ದಾಗ ಅವನ ಕೈಬೆರಳು ಲಾಂಛನದಮೇಲಿದ್ದ ಗುಂಡಿಯನ್ನು ಒತ್ತಿತು. ಒಮ್ಮೆಲೆ ಕತ್ತಿ ಜಾರಿ ಕೆಳಕ್ಕೆ ಬಿತ್ತು. ಕತ್ತಿ ಖಾಲಿ ಮಾಡಿದ್ದ ಕಂದರದೊಳಗೆ ರಥವೊಂದರ ಚಿತ್ರ ಕಾಣಿಸಿತು. ದಿಟ್ಟಿಸಿ ನೋಡಿದಾಗ ಇದು ಹಂಪೆಯ ಕಲ್ಲಿನ ರಥದ ಚಿತ್ರವೆಂದು ಅರ್ಥವಾಯಿತು.

"ಪ್ರೊಫೆಸರ್, ಪಹರೆ ಕೊಡುತ್ತಿದ್ದ ಗಾರ್ಡ್‌ಗಳು ಎಚ್ಚೆತ್ತುಕೊಂಡಿದ್ದಾರೆ, ಅವರೂ ಅರಮನೆಯೊಳಕ್ಕೆ ನುಗ್ಗುತ್ತಿದ್ದಾರೆ." ಪುನಃ ಆತಂಕದಿಂದ ಕೂಡಿದ ಉಜ್ವಲಾಳ ಧ್ವನಿ ಭಾಸ್ಕರನ ಕಿವಿಯಲ್ಲಿ ಕೂಗಿತು. ಅದೇ ಸಮಯಕ್ಕೆ ಸರಿಯಾಗಿ ನಾಲ್ಕೈದು ಜನರು ಓಡುತ್ತಿದ್ದ ಶಬ್ದವೂ ಕೇಳಿಸಿತು. ನೆಲಕ್ಕೆ ಬಿದ್ದಿದ್ದ ಕತ್ತಿಯನ್ನೂ ಎತ್ತಿಕೊಂಡು ತನ್ನ ಕೋಟ್ ಜೇಬಿನಲ್ಲಿರಿಸಿಕೊಂಡು, ಭಾಸ್ಕರ ಅಲ್ಲಿನಿಂದ ಓಡ ತೊಡಗಿದ. ಕೆಳಗೆ ಕಲ್ಯಾಣ ಮಂಟಪದಲ್ಲಿ ಗಾರ್ಡ್‌ಗಳು ನಾಗೇಶನ್‌ನ ಗೂಂಡಾಗಳೊಡನೆ ವ್ಯಸ್ತರಾಗಿದ್ದರು. ಭಾಸ್ಕರ 'ಆನೆ ದ್ವಾರ'ವನ್ನು ದಾಟಿ ಓಡುತ್ತಿದ್ದಾಗ ಇನ್ಸ್‌ಪೆಕ್ಟರ್ ಮಹೇಶ್ವರ ಎದುರಿನಿಂದ ಬಂದ.

"ಪ್ರೊಫೆಸರ್..?!"

ಭಾಸ್ಕರ ನಿಷ್ಕ್ರಿಯನಾಗಿ ನಿಂತ. ಇನ್ಸ್‌ಪೆಕ್ಟರ್ ಒಳಗಿನಿಂದ ಬರುತ್ತಿದ್ದ ಕಾಳಗದ ಶಬ್ದವನ್ನು ತಪಾಸಣೆ ಮಾಡುವುದೋ, ಭಾಸ್ಕರನನ್ನು ಹಿಡಿಯುವುದೋ ನಿರ್ಧರಿಸಲಾಗದೆ ಹಿಂದುಮುಂದೆ ನೋಡುತ್ತ ನಿಂತ. ಒಳಗಿನಿಂದ ಗುಂಡು ಹಾರಿಸಿದ ಶಬ್ದ ಬಂದಿತು. ಬರಿಗೈ ಭಾಸ್ಕರನ ಮೇಲೆ ಒಳಗಿನ ಯುದ್ಧ ಗೆದ್ದಿತು. ಇನ್ಸ್‌ಪೆಕ್ಟರ್ ಏನು ನಡೆಯುತ್ತಿದೆ ನೋಡಲು ಒಳಗೆ ಹೋದ. ಅವಕಾಶವನ್ನು ಉಪಯೋಗಿಸಿಕೊಂಡು ಭಾಸ್ಕರ ಉಜ್ವಲಾಳ ಜೊತೆಗೂಡಿ ಇಬ್ಬರೂ ಅರಮನೆಯ ಆವರಣವನ್ನು ಬಿಟ್ಟು ಪರಾರಿಯಾದರು.

*****

ಭಾಸ್ಕರ ಮತ್ತು ಉಜ್ವಲಾ ಹೋಟಲ್‌ಗೆ ಹಿಂತಿರುಗುವ ಹೊತ್ತಿಗೆ ಸುಮಾರು ೩:೦೦ ಘಂಟೆಯಾಗಿತ್ತು. ತಮ್ಮ ಸಾಮಾನು ಎತ್ತಿಕೊಂಡು ಹೋಟಲ್ ಖಾಲಿ ಮಾಡಿದಾಗ ೫:೦೦ ಘಂಟೆ ಹೊಡೆದಿತ್ತು. ಹೋಟಲ್ ಕೋಣೆಯಿಂದಲೇ ಫೋನ್ ಮಾಡಿ ಭಾಸ್ಕರ ಟ್ಯಾಕ್ಸಿ ಗೊತ್ತು ಮಾಡಿಕೊಂಡಿದ್ದ. ಬೆಳಕುಹರಿಯುತ್ತಿದ್ದಂತೆ ಇಬ್ಬರೂ ಟ್ಯಾಕ್ಸಿ ಹತ್ತಿ ಪ್ರಯಾಣವನ್ನು ಆರಂಭಿಸಿದರು.

ಸುಮಾರು ಹೊತ್ತಿನ ಮೌನದ ಬಳಿಕ ಉಜ್ವಲಾಳ ತಾಳ್ಮೆ ಮೀರಿತ್ತು. "ಎಲ್ಲಿಗೆ ಹೊರಟಿದ್ದೇವೆ, ಪ್ರೊಫೆಸರ್? ಅರಮನೆಯಿಂದ ಬಂದಾಗಿನಿಂದ ನೀವು ಒಂದೂ ಮಾತನಾಡಿಲ್ಲ."

"ಸಾರಿ! ಯೋಚನೆ ಮಾಡುತ್ತಿದ್ದೆ. ಈ ಚಿತ್ರಬಂಧದ ಅನೇಕ ತುಣುಕುಗಳನ್ನು ಜೋಡಿಸಿ ನೋಡುತ್ತಿದ್ದೆ. ನಾವೀಗ ಮನೆಗೆ ಹಿಂತಿರುಗುತ್ತಿದ್ದೇವೆ." ಭಾಸ್ಕರ ದೂರದಲ್ಲೆಲ್ಲೋ ದೃಷ್ಟಿ ತೇಲಿಸಿ ಮೆಲ್ಲಗೆ ಮಾತನಾಡುತ್ತಿದ್ದ.

"ಮನೆಗೆ? ಅಂದರೆ...?"

"ಹಂಪೆಗೆ. ನಾನು ಯೋಚಿಸುತ್ತಿರುವುದು ನಿಜವೇ ಆಗಿದ್ದರೆ, ಈ ಚಿತ್ರದ ಉಳಿದ ಭಾಗ ಹಂಪೆಯಲ್ಲೇ ಇದೆ"

"ಅರಮನೆಯಲ್ಲಿ ಏನಾಯಿತು? ಅದು ತಿಳಿಯದೆ ನಿಮ್ಮ ಈ ಚಿತ್ರ ನನಗೆ ಕಾಣಿಸುತ್ತಲೇ ಇಲ್ಲ."

"ಓಹ್! ಅರಮನೆಯ ಆ ಕೋಣೆಯಲ್ಲಿ ಸ್ವಲ್ಪ ಹುಡುಕಿದ ನಂತರ ಒಂದು ವರಾಹ ಎಂಬ್ಲಮ್ ಸಿಕ್ಕಿತು. ಅಲಿದ್ದದ್ದು ಒಂದೇ ಅಂತಹ ಲಾಂಛನ. ಅದರ ಕಾರ್ಯಕೌಶಲ್ಯ ನೋಡಿದರೆ ೧೪–೧೫ನೇ ಶತಮಾನದಲ್ಲಿ ತಯಾರಿಸಿದ್ದೆಂದು ತೋರುತ್ತಿತ್ತು. ಹಾಗಾಗಿ ನರಸಪ್ಪನಾಯಕ ತಂದ ಲಾಂಛನ ಅದೇ ಆಗಿರಬೇಕು. ಜಸ್ಟ್ ಬೈ ಪ್ಲೇನ್ ಲಕ್ ನಾನು ಧೂಳು ಒರೆಸುತ್ತಿದ್ದಾಗ ನನ್ನ ಕೈ ಲಾಂಛನದ ಮೇಲಿದ್ದ ಒಂದು ಗುಂಡಿಯನ್ನು ತಾಕಿತು. ಆಗ ಲಾಂಛನದಿಂದ ಕತ್ತಿಯೊಂದು ಕಳಚಿ ಕೆಳಗೆ ಬಿತ್ತು. ಆ ಕತ್ತಿಯ ಹಿಂದೆ ಕಲ್ಲಿನ ರಥದ ಒಂದು ಚಿತ್ರವಿತ್ತು. ಆಗಿನ ಕಾಲದ ರೂಢಿಯಾನುಸಾರವಾಗಿ ಅದರ ಅರ್ಥ ಕಲ್ಲಿನ ರಥವೇ ಬೀಗ, ಈ ಕತ್ತಿಯೇ ಅದರ ಬೀಗದಕೈ ಎಂದು." ಎನ್ನುತ್ತ ತಾನು ಅರಮನೆಯಿಂದ ತಂದ ಕತ್ತಿಯನ್ನು ಕರ್ಚೀಫಿನಲ್ಲಿ ಸುತ್ತಿದಂತೆ ತನ್ನ ಕೋಟ್ ಜೇಬಿನಿಂದ ಹೊರತೆಗೆದ.

"ವಾವ್!" ಉಜ್ವಲಾ ಕತ್ತಿಯನ್ನು ಕೈಗೆತ್ತಿಕೊಂಡು ನಾಜೂಕಾಗಿ ಪರೀಕ್ಷಿಸಿದಳು.

"ಈ ಬೀಗದ ಕೈನಿಂದ ಆ ಬೀಗವನ್ನು ಹೇಗೆ ತೆಗೆಯುವುದು ಅಲ್ಲಿ ಹೋಗಿಯೇ ನೋಡಬೇಕು. ಅದಕ್ಕೆ ಅಲ್ಲಿಗೆ ಹೊರಟಿದ್ದೇವೆ." ಸ್ವಲ್ಪ ಮೌನದ ನಂತರ "ಉಜ್ವಲಾ, ನೀನು ನನ್ನ ಜೊತೆ ಬರುವ ಅಗತ್ಯವಿಲ್ಲ. ಪರಿಸ್ಥಿತಿ ಬಹಳ

ಅಪಾಯಕಾರಿಯಾಗುತ್ತಿದೆ.'' ಭಾಸ್ಕರ ತನ್ನ ಕಳವಳ ಹೇಳಿಕೊಂಡ.

''ಪ್ರೊಫೆಸರ್, ಐ ವುಡ್ ನಾಟ್ ಮಿಸ್ ಇಟ್ ಫಾರ್ ಎನಿಥಿಂಗ್. ಈ ದಾರಿ ಹಿಡಿದು ಹೊರಟಿದ್ದೀವಿ. ಎಲ್ಲಿ ಮುಗಿಯುತ್ತದೆಯೋ ನೋಡಿಯೇ ಬಿಡೋಣ.''

*****

ಮಧ್ಯಾಹ್ನ ೧:೦೦ ಘಂಟೆಗೇ ಹಂಪೆಯನ್ನು ತಲುಪಿದರೂ, ಪ್ರವಾಸಿಗಳಿರುವ ಸಮಯದಲ್ಲಿ ಏನೂ ಮಾಡುವಂತಿರಲಿಲ್ಲ. ಭಾಸ್ಕರ ಹಾಗು ಉಜ್ವಲಾ ಸೂರ್ಯ ಬಾನಿನಿಂದ ಇಳಿದ ಮೇಲೆ 'ವಿಜಯ ವಿಠ್ಠಲ'ನ ದೇವಾಲಯದ ಆವರಣಕ್ಕೆ ಹೋಗಿ ಪ್ರಾಕಾರದಲ್ಲಿ 'ಕಲ್ಲಿನ ರಥ'ವನ್ನು ನೋಡುತ್ತ ಕುಳಿತರು.

ಹಂಪೆಯ 'ಕಲ್ಲಿನ ರಥ'ದ ವೈಭವ ಹೇಳಿಯೇ ತೀರದು! ಸುತ್ತಲೂ ಹಚ್ಚಿದ್ದ ಇಲೆಕ್ಟ್ರಿಕ್ ದೀಪಗಳು ರಥವನ್ನು ಬೆಳಗುತ್ತಿದ್ದವು. ದೇವಾಲಯದ ರಥದ ಕಲ್ಲಿನ ಅಚಲ ಸ್ವರೂಪ, ಸುಮಾರು ೨೨ ಅಡಿ ಎತ್ತರವಿತ್ತು. ಕೆಳಗಿನ ಭಾಗದಲ್ಲಿ ಕಲ್ಲಿನ ಇರಚಿಗೆ ಸಿಕ್ಕಿಸಿದ್ದ ನಾಲ್ಕು ಸುಂದರ ಕೆತ್ತನೆಗಳುಳ್ಳ ಕಲ್ಲಿನ ಚಕ್ರಗಳು. ಮಧ್ಯ ಭಾಗದಲ್ಲಿ ಗರುಡನ ಗುಡಿ. ಅದರ ಮೇಲೆ ಛಾವಣಿ. ರಥವನ್ನು ಎಳೆಯುತ್ತಿರುವಾಗಲೇ ಸ್ತಬ್ಧವಾದಂತೆ ನಿಂತ ಕಲ್ಲಿನ ಆನೆಗಳು. ಮೇಲಿನಿಂದ ಕೆಳಗಿನವರೆಗು ಸೂಕ್ಷ್ಮ ಕೆತ್ತನೆಗಳು. ಕತ್ತಿ-ಬೀಗದಕೈಗೆ ಬೀಗವನ್ನು ಅಡಗಿಸಲು ಅತಿಯೋಗ್ಯ ಸ್ಮಾರಕ.

ರಾತ್ರಿ ೧೧:೦೦ ಘಂಟೆಯ ಹೊತ್ತಿಗೆ ಕಲ್ಲಿನ ರಥದ ಸುತ್ತಲು ಇದ್ದ ದೀಪಗಳನ್ನು ಆರಿಸಲಾಗಿತ್ತು. 'ವಿಜಯ ವಿಠ್ಠಲ' ದೇವಾಲಯ ನರಪಿಳ್ಳೆಯೂ ಇಲ್ಲದ ನಿರ್ಜನ ಪ್ರದೇಶವಾಗಿತ್ತು. ''ಲೆಟ್ಸ್ ಗೋ'' ಎನ್ನುತ್ತ ಉಜ್ವಲಾ ಎದ್ದಾಗ ತನ್ನ ಲೋಕದಲ್ಲಿಯೇ ಮುಳುಗಿ ಹೋಗಿದ್ದ ಭಾಸ್ಕರ ಎಚ್ಚೆತ್ತುಕೊಂಡ.

ಇಬ್ಬರೂ ಶಕ್ತಿಶಾಲಿ ಟಾರ್ಚ್‌ಗಳನ್ನು ತಂದಿದ್ದರು. ''ರೈಟ್!'' ಎನ್ನುತ್ತ ಭಾಸ್ಕರ ಎದ್ದು ತನ್ನ ಟಾರ್ಚ್ ಹತ್ತಿಸಿದ. ಇಬ್ಬರೂ 'ಕಲ್ಲಿನರಥ'ದ ಬಳಿ ಹೋದರು. ''ನಾವು ಹುಡುಕುತ್ತಿರುವುದು ಆ ಕತ್ತಿಯನ್ನು ಕೂರಿಸಲಾಗುವಂತಹ ಗುಳಿಯನ್ನು. ಅಡ್ಡಕ್ಕಿರಬಹುದು, ಉದ್ದಕ್ಕಿರಬಹುದು ಇಲ್ಲವೇ ತಿವಿಯುವಂತಹ ತೂತಿರಬಹುದು. ಜಾಗರೂಕವಾಗಿ ಪ್ರತಿಯೊಂದು ಇಂಚನ್ನೂ ಪರೀಕ್ಷೆ ಮಾಡಿನೋಡು. ಯಾವ ಸಣ್ಣ ರಂಧ್ರವನ್ನೂ ಬಿಡಬೇಡ. ನೀನು ಕೆಳಗಿನ ಭಾಗವನ್ನು ನೋಡು, ನಾನು ಮೇಲಿನ ಭಾಗವನ್ನು ನೋಡುತ್ತೇನೆ.'' ಭಾಸ್ಕರ ಆಜ್ಞೆ ಮಾಡಿ ರಥದ ಮೇಲುಪಾಯವನ್ನು ಹತ್ತಿದ.

ಇಬ್ಬರೂ ಹುಡುಕತೊಡಗಿದರು. ಟಾರ್ಚ್ ಜೊತೆಗೆ ತಿವಿದು ನೋಡಲು ಸಣ್ಣ ಸ್ಕ್ರೂ ಡ್ರೈವರ್, ಕೆರೆಯಲು ಬ್ರಶ್‌ಗಳು, ಕುಟ್ಟಲು ಪುಟಾಣಿ ಸುತ್ತಿಗೆಗಳು ಹಿಡಿದು ಬಂದಿದ್ದರು. ಕೆಲನಿಮಿಷಗಳು ಕುಟ್ಟುವ, ಉಜ್ಜುವ, ಸಪ್ಪಳ ಬಿಟ್ಟರೆ ಬೇರೇನೂ ಶಬ್ದ ಬರುತ್ತಿರಲಿಲ್ಲ. ನಂತರ ಉಜ್ವಲಾ ಕೂಗಿದಳು ''ಇದನ್ನು ನೋಡಿ, ಪ್ರೊಫೆಸರ್. ಇದೇನಾದರೂ ಇರಬಹುದೇ?''

ಭಾಸ್ಕರ ಕೆಳಗಿಳಿದು ಬಂದ. ಕಲ್ಲಿನಲ್ಲಿ ಬಿರುಕು ಬಿಟ್ಟಂತೆ ಸಣ್ಣ ರಂಧ್ರವೊಂದು ಕಾಣಿಸುತ್ತಿತ್ತು. ಭಾಸ್ಕರ ತನ್ನ ಸ್ಕ್ರೂ ಡ್ರೈವರ್ ಅದರೊಳಗೆ ತಿವಿದ. ಅದು ಎರಡು-ಮೂರು ಇಂಚ್ ಒಳಗೆ ಹೋಗಿ ನಿಂತಿತು. ತಲೆಯಾಡಿಸುತ್ತ ಕತ್ತಿಯನ್ನು ತೆಗೆದು ಅದರೊಳಗೆ ಹಾಕಲು ಯತ್ನಿಸಿದ. ಕತ್ತಿ ತುದಿಯಲ್ಲಿಯೇ ಕಚ್ಚಿಕೊಂಡು ಒಳಗೆ ಹೋಗಲೇ ಇಲ್ಲ. ''ಓಹ್, ವೆಲ್'' ಎಂದುಕೊಂಡು ಪುನಃ ಮೇಲೆ ಹತ್ತಿದ. ಉಜ್ವಲಾ ಕೆಳಗೆ ಹುಡುಕಾಟ ಮುಂದುವರೆಸಿದಳು.

ಇದೇ ರೀತಿ ಎರಡು... ಮೂರು... ನಾಲ್ಕು ಘಂಟೆಗಳು ಕಳೆದವು. ಆಗಾಗ ಬೀಗದಕೈ ಸಿಕ್ಕಿಸಬಹುದಾದಂತಹ ರಂಧ್ರಗಳು ಸಿಗುತ್ತಿದ್ದವು, ಆದರೆ ಯಾವುದೂ ಸಫಲವಾಗಲಿಲ್ಲ. ಕೊನೆಗೆ ಕಂಗೆಟ್ಟು ಬೇಸರದಿಂದ ಕೆಲಸ ನಿಲ್ಲಿಸಿದರು.

''ಬಹುಶಃ ನಾನು ಅರ್ಥಮಾಡಿಕೊಂಡಿದ್ದೇ ತಪ್ಪು, ಆ ಕತ್ತಿಗೂ, ಈ ರಥಕ್ಕೂ ಯಾವ ಸಂಬಂಧವೂ ಇಲ್ಲದಿರಬಹುದು. ಅಷ್ಟಾಗಿ ಇದೆಲ್ಲ ಬರೀ ಊಹೆಗಳ ಮೇಲೆ ಕಟ್ಟಿದ ಕಟ್ಟಡ! ನಿಧಿ ಇದ್ದರೆ, ಅದರ ಕ್ಲೂ ನರಸಪ್ಪನಾಯಕ ತೆಗೆದುಕೊಂಡು ಹೋಗಿದ್ದರೆ, ಆ ಸುಳಿವು ನನಗೆ ಸಿಕ್ಕ ಲಾಂಛನವೇ ಆಗಿದ್ದರೆ, ಅದರಿಂದ ಬಿದ್ದ ಕತ್ತಿ ಬೀಗದಕೈ ಆಗಿದ್ದರೆ, ಕಲ್ಲಿನ ರಥವೇ ಬೀಗವಾಗಿದ್ದರೆ. ಛೆ-ಛೆ! ಯಾರಾದರೂ ಕೇಳಿಸಿಕೊಂಡರೆ ನಕ್ಕಾರು,'' ಎದೆಗುಂದಿದ ಭಾಸ್ಕರ ಹೇಳಿದ.

ಉಜ್ವಲಾ ಮಾತನಾಡಲಿಲ್ಲ, ಅವನನ್ನು ಹುರಿದುಂಬಿಸಲೂ ಇಲ್ಲ. ಸುಸ್ತಾಗಿ ರಥವನ್ನು ಎಳೆಯುತ್ತಿದ್ದ ಕಲ್ಲಿನ ಆನೆಯನ್ನು ಒರಗಿ ಕುಳಿತಳು. ಅವಳನ್ನು ನೋಡಿದ ಭಾಸ್ಕರ ಒಮ್ಮೆಲೆ ಚೇತರಿಸಿಕೊಂಡ.

''ಅರೆರೆ... ಅಷ್ಟು ಸರಳವಾಗಿರಬಹುದೇ? ಉಹೂಂ...ಆದರೂ...''

''ಪ್ರೊಫೆಸರ್, ಏನು ಮಾತನಾಡುತ್ತಿದ್ದೀರಿ?''

''ಆ ಆನೆ! ಮೊದಲು ಆನೆಗಳ ಬದಲಿಗೆ ಕಲ್ಲಿನ ಕುದುರೆಗಳಿದ್ದವು. ನಂತರ ರಾತ್ರೋರಾತ್ರಿ ಆ ಕುದುರೆಗಳನ್ನು ಬದಲಾಯಿಸಿ ಅದೇ ಸ್ಥಳದಲ್ಲಿ ಆನೆಗಳನ್ನು ಕೆತ್ತಲಾಯಿತು. ಈ ಬೀಗದಕೈ ಕಿಂಡಿ ಅಡಗಿಸುವುದೇ ಆ ಬದಲಾವಣೆಗೆ ಕಾರಣವಿರಬಹುದೇ?'' ಎನ್ನುತ್ತಾ ಭಾಸ್ಕರ ಆನೆಯೊಂದರ ಮುಂದೆ ಮಂಡಿಯೂರಿ ಅದನ್ನು ಪರಿಶೀಲಿಸಲಾರಂಭಿಸಿದ. ಮೊದಲ ಆನೆಯಲ್ಲಿ ಏನೂ ಕಾಣಿಸದೆ ಎರಡನೆಯದಕ್ಕೆ ಸರಿದ.

ಅದನ್ನು ವಿಸ್ತಾರವಾಗಿ ಪರಿಶೀಲಿಸಿದ ನಂತರ ಪುನರಾಲೋಚನೆಮಾಡಿ ಮೊದಲನೆಯದಕ್ಕೆ ಮರಳಿ, ಅದರ ಬಾಯೊಳಕ್ಕೆ ಸ್ಕ್ರೂ ಡ್ರೈವರ್ ತೂರಿಸಿದ.

"ಆಹಾ!" ಎನ್ನುತ್ತ ಜೇಬಿನಿಂದ ಕತ್ತಿಯನ್ನು ತೆಗೆದು ಆನೆಯ ಬಾಯೊಳಕ್ಕೆ ತೂರಿಸಿದಾಗ ಕತ್ತಿ ಹಿಡಿ ತಡೆಯುವವರೆಗು ಒಳಗೆ ಹೋಯಿತು.

ಗುಡುಗಿನಂತಹ ಶಬ್ದ ಬಂತು. ನೋಡುತ್ತಿದ್ದಂತೆಯೇ ಅಚಲ ಕಲ್ಲಿನ ರಥ ಮುಂದೆ ಸಾಗಲಾರಂಭಿಸಿತು. ಸುಮಾರು ೧೦ ಅಡಿ ಮುಂದೆ ಸರಿದು ನಿಂತಿತು. ಭಾಸ್ಕರ ಮತ್ತು ಉಜ್ವಲಾ ರಥವು ಖಾಲಿ ಮಾಡಿದ ಸ್ಥಳಕ್ಕೆ ತಮ್ಮ ಟಾರ್ಚುಗಳನ್ನು ಬೆಳಗಿಸಿದರು. ಹುಳ–ಹುಪ್ಪಟೆಗಳು ಓಡಿಹೋದ ನಂತರ ಆ ಸ್ಥಳದಲ್ಲಿ ಒಂದು ಆಕಳಿಸುವ ಕಿಂಡಿ ಕಾಣಿಸತೊಡಗಿತ್ತು. ಕಿಂಡಿಯ ಸುತ್ತ ಜೇಡರ ಬಲೆ ಕಟ್ಟಿತ್ತು. ಮೆಟ್ಟಿಲುಗಳು ಕಿಂಡಿಯಿಂದ ಕೆಳಗಿಳಿದು ಕತ್ತಲಿನಲ್ಲಿ ಮಾಯವಾಗುತ್ತಿದ್ದವು. ಕಿಂಡಿಯೊಳಕ್ಕೆ ಟಾರ್ಚ್ ಬೆಳಗಿಸಿದರೂ ಆ ಬೆಳಕು ಹೆಚ್ಚು ದೂರ ಹೋಗಲಿಲ್ಲ. ಮಾತು ಹೊರಡದೆ ದವಡೆ ಇಳಿಬಿಟ್ಟು ಇಬ್ಬರೂ ಕಿಂಡಿಯನ್ನೇ ನೋಡುತ್ತ ನಿಂತರು.

"ಥ್ಯಾಂಕ್ಸ್, ಪ್ರೊಫೆಸರ್. ನನಗೆ ನಿಮ್ಮ ಮೇಲೆ ಸಂಪೂರ್ಣ ಭರವಸೆ ಇತ್ತು." ಪರಿಚಿತ ಧ್ವನಿ ಕೇಳಿಸಿತು. ತಿರುಗಿ ನೋಡಿದಾಗ ಕೈಯಲ್ಲಿ ರಿವಾಲ್ವರ್ ಹಿಡಿದು ನಾಗೇಶನ್ ಅವರಿದ್ದೆಡೆಗೆ ನಡೆದು ಬರುತ್ತಿದ್ದ. ಅವನೊಡನೆ ಮೂವರು ಗೂಂಡಾಗಳು ಬಂದೂಕುಗಳನ್ನು ಹಿಡಿದು ಬರುತ್ತಿದ್ದರು.

ಭಾಸ್ಕರ, ಉಜ್ವಲಾ ಎರಡೇ ನಿಮಿಷಗಳಲ್ಲಿ ಎರಡನೆ ಬಾರಿ ಬಾಯ್ತೆರೆದು ಅಚ್ಚರಿಯಿಂದ ನೋಡುತ್ತ ನಿಂತರು. ನಾಗೇಶನ್ ಹಗುರವಾಗಿ, "ಓಹ್! ಅಷ್ಟು ಆಶ್ಚರ್ಯ ಪಡಬೇಡಿ, ಪ್ರೊಫೆಸರ್. ನೀವು ಬೆಂಗಳೂರು ಬಿಟ್ಟಾಗಿನಿಂದ ನಮ್ಮವರು ನಿಮ್ಮನ್ನು ಹಿಂಬಾಲಿಸುತ್ತಲೇ ಇದ್ದಾರೆ. ನಾನು ನಿಮಗೆ ಅನ್ಯಾಯ ಮಾಡಿಲ್ಲ. ಪಾರ್ಟ್‌ನರ್ ಮಾಡಿಕೊಳ್ಳಿಯೆಂದು ಮೊದಲಿಗೇ ಕೇಳಲಿಲ್ಲವೇ? ಈಗ ಇಡೀ ನಿಧಿ ನನ್ನದೇ! ಆದರೆ ನಿಮಗೂ ಒಮ್ಮೆ ಅದನ್ನು ನೋಡುವ ಅವಕಾಶ ಕೊಡುತ್ತೇನೆ. ನಡೆಯಿರಿ ಹೋಗೋಣ." ಎನ್ನುತ್ತ ತನ್ನ ರಿವಾಲ್ವರ್‌ನಿಂದ ಕಿಂಡಿಯ ಕಡೆ ಸನ್ನೆ ಮಾಡಿದ.

ಎಲ್ಲರೂ ನೆಲದಲ್ಲಿದ್ದ ಕಿಂಡಿಯನ್ನು ಸುತ್ತುವರಿದು ನಿಂತರು. "ಆ ಕತ್ತಲು, ಭಯಾನಕ ಗುಂಡಿಯೊಳಕ್ಕೆ ಯಾರು ಮೊದಲು ಹೋಗ್ತೀರ?" ಒಬ್ಬ ಗೂಂಡ ಉಸುರಿದ.

ನಾಗೇಶನ್ ಅವನನ್ನು ದುರುಗುಟ್ಟಿ "ಮಾರ, ಭದ್ರ, ನನ್ನ ಜೊತೆ. ಖಾನ್, ನೀನಿಲ್ಲೇ ಇರು. ನಾನಿಲ್ಲದೆ ಯಾರಾದರೂ ಆಚೆ ಬಂದರೆ...ಏನು ಮಾಡಬೇಕು ನಿನಗೆ ಗೊತ್ತೇ ಇದೆ. ಲೆಟ್ಸ್ ಗೋ." ಎಂದ.

ಭಾಸ್ಕರ ಟಾರ್ಚ್ ಹಿಡಿದು ಮೆಲ್ಲನೆ ಕಿಂಡಿಯೊಳಗಿನ ಮೆಟ್ಟಿಲುಗಳನ್ನು ಇಳಿಯ ತೊಡಗಿದ. ಅವನ ಹಿಂದೆ ಒಬ್ಬೊಬ್ಬರಾಗಿ ಉಳಿದವರೂ ಹೊರಟರು; ಭಾಸ್ಕರನ ಹಿಂದೆ ನಾಗೇಶನ್, ಅವನ ಹಿಂದೆ ಉಜ್ವಲಾ, ನಂತರ ಮಾರ, ಭದ್ರ. ಸುಮಾರು ೨೫–ಮೆಟ್ಟಿಲುಗಳು ಇಳಿದ ನಂತರ ಒಂದು ಇಕ್ಕಟ್ಟಾದ ಸುರಂಗಕ್ಕೆ ಬಂದರು. ಭಾಸ್ಕರ ದಾರಿ ತೋರಿಸುತ್ತಿದ್ದ, ಉಳಿದವರು ಸಾಲಾಗಿ ಒಬ್ಬರ ಹಿಂದೆ ಒಬ್ಬರು ನಿಧಾನವಾಗಿ ನಡೆಯ ತೊಡಗಿದರು. ಸ್ವಲ್ಪ ದೂರ ಹೋದ ನಂತರ ಒಂದು ಸಣ್ಣ ಕೋಣೆಗೆ ಬಂದರು. ಸಮಯ ನೋಡಿ ಉಜ್ವಲಾ ಭಾಸ್ಕರನ ಪಕ್ಕಕ್ಕೆ ಹೋಗಿ ನಿಂತಳು.

ಭಾಸ್ಕರ, ಉಜ್ವಲಾರ ಟಾರ್ಚ್‌ಗಳು ಹಲವು ಘಂಟೆಗಳ ಕಾಲ ಬೆಳಗಿದ್ದರಿಂದ ಅವುಗಳೊಳಗಿದ್ದ ಬ್ಯಾಟರಿಗಳು ಸಾಯುತ್ತಿದ್ದವು. ಮಬ್ಬಾದ ಬೆಳಕಲ್ಲಿ ಕೋಣೆಯಲ್ಲಿ ತೂಗಿಹಾಕಿದ್ದ ಪಂಜು ಕೈಗೆತ್ತಿಕೊಳ್ಳುತ್ತ, ಭಾಸ್ಕರ ಕೇಳಿದ "ಬೆಂಕಿಕಡ್ಡಿ ಇದೆಯೇ?"

ನಾಗೇಶನ್ ತನ್ನ ಜೇಬಿನಿಂದ ಲೈಟರ್ ಒಂದನ್ನು ಹೊರತೆಗೆದು, ಚಲಾಯಿಸಿ ಭಾಸ್ಕರನ ಕೈಯಲ್ಲಿದ್ದ ಪಂಜನ್ನು ಹೊತ್ತಿಸಿದ. ಬೆಳಕು ಸ್ವಲ್ಪ ಹೆಚ್ಚಾಯಿತು.

"ವಾವ್" ಉಜ್ವಲಾ ಉದ್ಗಾರ ತೆಗೆದಳು.

ತಳ ಕಾಣಿಸದ ಬಾವಿಯೊಂದರ ತುದಿಯಲ್ಲಿ ಕಟ್ಟಿದ್ದ ಜಗಲಿಯಮೇಲೆ ನಿಂತಿದ್ದರು. ಬಾವಿಯ ಅಡ್ಡಳತೆ ಸುಮಾರು ೪೦ ಅಡಿಯಾಗಿತ್ತು. ಬಾವಿಯ ಗೋಡೆಗೆ ಅಂಟಿದಂತೆ ಇಕ್ಕಟ್ಟಾದ ಚಕ್ರಾಕಾರ ಮೆಟ್ಟಿಲುಗಳು ಕೆಳಕ್ಕೆ ಹೋಗುತ್ತಿದ್ದವು. ರಕ್ಷಣೆಗಾಗಿ ಮೆಟ್ಟಿಲಿಗೆ ಮರದ ಸಾರುವೆಯನ್ನು ಕಟ್ಟಲಾಗಿತ್ತು.

"ಆಗಿನ ಕಾಲದಲ್ಲಿ ಇಷ್ಟೆಲ್ಲ ಹೇಗೆ ಕಟ್ಟಿರಲು ಸಾಧ್ಯ?" ಬೆರಗಾಗಿ ನಾಗೇಶನ್ ಕೇಳಿದ.

"ಮೇಲಿನ ದೇವಾಲಯಗಳನ್ನು ಹೇಗೆ ಕಟ್ಟಿದರೋ ಹಾಗೆ." ಭಾಸ್ಕರ ಉತ್ತರಿಸಿದ.

"ಅದೇನು?" ಮೇಲಿನಿಂದ ತೂಗಿಹಾಕಿದ್ದ ೮ ಅಡಿ ಅಗಲವಾದ ವಸ್ತುವೊಂದನ್ನು ತೋರಿಸುತ್ತ ಕೇಳಿದ ಭದ್ರ.

"ಅದು ದೀಪ ಗುಚ್ಛ." ಎನ್ನುತ್ತ ಭಾಸ್ಕರ ಬಗ್ಗಿ ಅದನ್ನೂ ಹೊತ್ತಿಸಿದ. ಬಾವಿಯಲ್ಲಿ ಸಾಕಷ್ಟು ಬೆಳಕಾಯಿತು, ಆದರೆ ತಳವಿನ್ನೂ ಕಾಣಿಸುತ್ತಿರಲಿಲ್ಲ.

"ನಡೆಯಿರಿ, ಇನ್ನೇನು ತಡ." ನಾಗೇಶನ್ ಹೇಳಿದ.

ಮಾರ ಮುಂದೆ ಹೊರಟ, ಆದರೆ ಉಜ್ವಲಾ ಹಿಂಜರಿದಳು.

''ಐದುನೂರು ವರ್ಷಗಳಿಂದ ಗೆದ್ದಲು ಹತ್ತಿದ ಆ ಮರದ ಸಾರುವೆಯನ್ನು ನಂಬಿಕೊಂಡು ನಾನು ಬರೋದಿಲ್ಲ''

ನಾಗೇಶನ್ ತನ್ನ ರಿವಾಲ್ವರ್ ಅವಳ ಕಡೆ ತಿರುಗಿಸಿದಾಗ ಭಾಸ್ಕರ ನಿಷ್ಕೃಷ್ಟವಾಗಿ ಹೇಳಿದ ''ಉಜ್ವಲಾ, ನಡಿ ಹೋಗೋಣ.''

ಪುನಃ ನಿಧಾನವಾಗಿ ಮೆಟ್ಟಿಲುಗಳನ್ನು ಇಳಿಯುತ್ತ ಒಬ್ಬರ ಹಿಂದೆ ಒಬ್ಬರು ಹೊರಟರು. ಒಂದು ಸ್ಥಳದಲ್ಲಿ ಒಂದು ಮೆಟ್ಟಿಲು ಮಾಯವಾಗಿತ್ತು. ಮಾರ ಕೆಳಗಿನ ಮೆಟ್ಟಿಲಿಗೆ ನೆಗೆಯಲು ಮರದ ಸಾರುವೆಯ ಆಸರೆ ಪಡೆಯಲೆಂದು ಅದರ ಮೇಲೆ ಒರಗಿ ಭಾರ ಬಿಟ್ಟ. ಗೆದ್ದಲು ಹತ್ತಿದ ಸಾರುವೆ ಮುರಿದು ಮಾರನ ಸಮೇತ ಬಾವಿಯೊಳಗೆ ಬೀಳಲಾರಂಭಿಸಿತು. ಮುಂದಿನ ಹತ್ತು ಸೆಕೆಂಡ್‌ಗಳು ಹತ್ತು ವರ್ಷಗಳಂತೆ ಕಳೆದವು, ಮಾರ ಕಣ್ಮರೆಯಾದರೂ ಅವನ ಕೂಗು ಕೇಳಿಸುತ್ತಲೇ ಇತ್ತು. ನಿಧಾನವಾಗಿ ಅದೂ ಮೌನವಾಯಿತು. ಭಾಸ್ಕರ, ಉಜ್ವಲಾ ಭೀತಿಗ್ರಸ್ಥರಾಗಿ ನೋಡುತ್ತಿದ್ದರು. ನಾಗೇಶನ್ ಕೆಲ ಕ್ಷಣಗಳನಂತರ ಎಚ್ಚೆತ್ತು ಆ ಮೆಟ್ಟಿಲನ್ನು ಇಳಿದು ಮುಂದೆ ಹೋಗಲಾರಂಭಿಸಿದ.

''ನಾಗೇಶನ್, ಬೇಡ. ಬಹಳ ಅಪಾಯಕಾರಿ.''

''ನಿಮ್ಮ ಪ್ರಾಣ ಮಾರನ ಪ್ರಾಣಕ್ಕಿಂತ ಅಮೂಲ್ಯವೆಂದುಕೊಂಡಿದ್ದೀರ? ಕಮ್ ಆನ್.''

ಭಾಸ್ಕರ, ಉಜ್ವಲಾ ದಂಗಾಗಿ ಅವನ ಹಿಂದೆ ಹೊರಟರು.

ಸುಮಾರು ೨೦ ನಿಮಿಷ ಇದೇ ರೀತಿ ಮೆಟ್ಟಿಲುಗಳನ್ನು ಇಳಿದು ಹೋದ ನಂತರ ಪುನಃ ಮತ್ತೊಂದು ಜಗಲಿಗೆ ಬಂದು ನಿಂತರು. ಮೆಟ್ಟಿಲುಗಳೂ ಅಲ್ಲಿಗೇ ನಿಂತು ಹೋಗಿದ್ದವು. ಬಾವಿಯ ಗೋಡೆಗೆ ಅಂಟಿದಂತೆ ಒಂದು ವಿಶಾಲ ಲೋಹದ ಬಾಗಿಲು ಅವರನ್ನು ಅಡ್ಡಗಟ್ಟಿತ್ತು.

''ಓ.ಕೇ. ಪ್ರೊಫೆಸರ್. ತೆಗೆಯಿರಿ ಬಾಗಿಲನ್ನು.'' ಸುತ್ತ ನೋಡುತ್ತ ನಾಗೇಶನ್ ಹೇಳಿದ.

ಭಾಸ್ಕರ ಬಾಗಿಲ ಚಿಲಕವನ್ನು ಹುಡುಕ ತೊಡಗಿದ. ಐದು ನಿಮಿಷಗಳ ನಂತರ ಯಾವುದೂ ಕಾಣದೆ, ''ಇದನ್ನು ತೆಗೆಯುವ ರಹಸ್ಯ ನನಗೆ ಗೊತ್ತಿಲ್ಲ.'' ಎಂದ.

''ನನ್ನ ಜೊತೆ ಆಟವಾಡಬೇಡಿ, ಪ್ರೊಫೆಸರ್'' ಎನ್ನುತ್ತ ನಾಗೇಶನ್ ಪ್ರೊಫೆಸರ್ ತಲೆಗೆ ರಿವಾಲ್ವರ್ ಇಟ್ಟ. ಭಾಸ್ಕರ ಕಣ್ಣು ಮುಚ್ಚಿಕೊಂಡ. ಕೆಲ ಕ್ಷಣಗಳ ಮೌನದ ನಂತರ, ''ಶಿಟ್! ನಿಮ್ಮನ್ನು ಶೂಟ್ ಮಾಡಿದರೆ ಬಾಗಿಲನ್ನು ತೆಗೆಯುವವರು ಯಾರೂ ಇರುವುದಿಲ್ಲ. ಅದೇ ಈಕೆಯನ್ನು...'' ಎನ್ನುತ್ತ ಉಜ್ವಲಾಳ ಕಡೆ ರಿವಾಲ್ವರ್ ತಿರುಗಿಸಿದ.

ಉಜ್ವಲಾಳ ಕಣ್ಣುಗಳಲ್ಲಿ ಭೀತಿ ತುಳುಕುತ್ತಿತ್ತು. ಅವಳನ್ನು ನೋಡಿ ಭಾಸ್ಕರ, ''ಈಸೀ, ಈಸೀ'' ಎಂದು ಪುನಃ ಬಾಗಿಲ ಕಡೆ ತಿರುಗಿದ. ಬಾಗಿಲ ಚೌಕಟ್ಟಿನಲ್ಲಿ ಅಡಗಿದ್ದ ಗುಂಡಿಯೊಂದನ್ನು ಒತ್ತಿದಾಗ ಒಳಗಿನಿಂದ ಲೋಹವನ್ನು ಬಡಿದ ಶಬ್ದ ಬಂತು. ನಿಧಾನವಾಗಿ ಆ ಬಾಗಿಲುಗಳನ್ನು ತಳ್ಳಿದ. ಬಾಗಿಲ ಆಚೆ ಒಂದು ಮಧ್ಯಮಗಾತ್ರದ ಕೋಣೆಯಿತ್ತು. ಎಲ್ಲರೂ ಕೋಣೆಯೊಳಕ್ಕೆ ನಡೆದರು. ಕೋಣೆಯ ಮಧ್ಯದಲ್ಲಿ ಒಂದೇ ಒಂದು ಪುಟ್ಟ ಕಲ್ಲಿನ ಆನೆ ಬಿಟ್ಟರೆ ಕೋಣೆಯಲ್ಲಿ ಬೇರೇನೂ ಇರಲಿಲ್ಲ.

''ಎಲ್ಲಿದೆ ನಿಧಿ?'' ನಾಗೇಶನ್ ಕೇಳಿದ.

''ಇದೇ. ಇಷ್ಟೇ ನಿಧಿ''

''ಇದಕ್ಕೆ ಇಷ್ಟು ದೂರ ಬಂದೆವಾ?''

ಭಾಸ್ಕರ ಮಾತನಾಡಲಿಲ್ಲ. ಉಜ್ವಲಾ ಬಡಬಡಾಯಿಸ ತೊಡಗಿದಳು ''ಏನಾದರೂ ಇರಲೇಬೇಕು, ಪ್ರೊಫೆಸರ್! ಮತ್ತೊಂದು ಕ್ಲೂ, ಅಥವಾ...''

''ಇಷ್ಟೇ, ಉಜ್ವಲಾ. ಇದೇ ಕೊನೆ, ಇನ್ನೇನೂ ಕ್ಲೂ ಇಲ್ಲ, ನಿಧಿ ಇಲ್ಲ.'' ಭಾಸ್ಕರ ಸಹನೆ ಮೀರಿ ಹೇಳಿದ.

''ನನ್ನ ಜೊತೆ ಮತ್ತೆ ಆಟವಾಡುತ್ತಿದ್ದೀರ, ಪ್ರೊಫೆಸರ್?'' ನಾಗೇಶನ್ ರೀವಾಲ್ವರ್ ಭಾಸ್ಕರನ ಕಡೆ ತೋರಿಸುತ್ತ, ಕೋಣೆಯಿಂದ ಹಿಂಜರಿಯಲಾರಂಭಿಸಿದ. ಭದ್ರ ಅವನ ಪಕ್ಕದಲ್ಲೇ ಹಿಂಜರಿಯುತ್ತಿದ್ದ. ಇಬ್ಬರೂ ಲೋಹದ ಬಾಗಿಲಾಚೆ ಹೋದಮೇಲೆ ''ಭದ್ರ, ಬಾಗಿಲನ್ನು ಮುಚ್ಚು.'' ಎಂದ ನಾಗೇಶನ್.

''ನಮ್ಮನ್ನು ಇಲ್ಲಿ ಬಂಧಿಸಬೇಡ. ಬಾಗಿಲನ್ನು ಒಳಗಿನಿಂದ ತೆಗೆಯಲಾಗೋದಿಲ್ಲ.'' ಎಂದಳು ಉಜ್ವಲಾ.

''ನಿಲ್ಲು, ನೀನು ಹೀಗೆ ಮಾಡೋ ಹಾಗಿಲ್ಲ.'' ಎಂದ ಭಾಸ್ಕರ.

''ಹಾಗೇ ಮಾಡುತ್ತೇನೆ ಪ್ರೊಫೆಸರ್, ಮುಂದಿನ ಕ್ಲೂ ಹೇಳದಿದ್ದರೆ...''

''ನೀವುಗಳು ಹೋಗಿ, ನಮಗೂ....'' ಉಜ್ವಲಾ ಮಾತನಾಡಲು ಹೊರಟಳು.

''ಮತ್ತೆ ಮಾತನಾಡಬೇಡ'' ಆಕೆಯ ಕಡೆ ರಿವಾಲ್ವರ್

ತಿರುಗಿಸುತ್ತ ಹೇಳಿದ ನಾಗೇಶನ್. "ಪ್ರೊಫೆಸರ್?"

"ಆನೆ..." ಭಾಸ್ಕರ ಹೇಳ ಹೊರಟ.

"ಪ್ರೊಫೆಸರ್!" ಕಠಿಣ ಧ್ವನಿಯಲ್ಲಿ ಹೇಳಿದಳು ಉಜ್ವಲಾ. "ಹೇಳಬೇಡಿ".

"ಆ ಆನೆಯೇ ಮುಂದಿನ ಕ್ಲೂ. ಅದರ ಅರ್ಥ ನಿಧಿ ಆನೆಯ ಲಾಯದಲ್ಲಿದೆಯೆಂದು." ಭಾಸ್ಕರ ಮುಂದುವರೆಸಿದ.

"ಥ್ಯಾಂಕ್ಸ್, ಪ್ರೊಫೆಸರ್. ಬಾಗಿಲು ಮುಚ್ಚು, ಭದ್ರ." ಎನ್ನುತ್ತ ನಾಗೇಶನ್ ತಿರುಗಿದ.

"ನಿಲ್ಲು! ನಮ್ಮನ್ನು ಇಲ್ಲಿ ಕೂಡಿಹಾಕಬೇಡ." ಉಜ್ವಲಾ ಕೂಗಿದಳು.

"ಯಾಕೆ?" ಮುಗುಳ್ನಗುತ್ತ ಕೇಳಿದ ನಾಗೇಶನ್.

"ಪ್ರೊಫೆಸರ್ ಸುಳ್ಳು ಹೇಳಿದ್ದರೆ? ಅಥವ ಅಲ್ಲಿ ಮತ್ತೊಂದು ಕ್ಲೂ ಇದ್ದರೆ?"

"ಆಗ ನಿಮ್ಮನ್ನು ಎಲ್ಲಿ ಹಿಡಿಯಬೇಕೆಂದು ಗೊತ್ತು. ಗುಡ್ ಬೈ, ಪ್ರೊಫೆಸರ್." ಎನ್ನುತ್ತ ನಾಗೇಶನ್ ಮೆಟ್ಟಿಲನ್ನೇರ ತೊಡಗಿದ. ಭದ್ರ ಬಾಗಿಲನ್ನು ಮುಚ್ಚಿದ.

"ತೆಗಿ ಬಾಗಿಲು... " ಉಜ್ವಲಾ ಅರಚಿದಳು. "ಪ್ರೊಫೆಸರ್, ನಾವಿನ್ನು ಇಲ್ಲೇ... " ಉದ್ವೇಗದಿಂದ ಕೂಗಾಡ ತೊಡಗಿದಳು.

"ಶಾಂತವಾಗು, ಉಜ್ವಲಾ. ಏನೂ ಆಗೋದಿಲ್ಲ. ಇಲ್ಲಿಂದ ಹೊರಗೆ ಹೋಗೋಣವಂತೆ," ಭಾಸ್ಕರ ಸಾಂತ್ವನ ಹೇಳಿದ. "ನಾಗೇಶನ್‌ಗೆ ಕ್ಲೂ ಬೇಕಿತ್ತು ಕ್ಲೂ ಕೊಟ್ಟೆ ಅಷ್ಟೆ."

"ಸುಳ್ಳು ಕ್ಲೂ! ಅದು ಸುಳ್ಳೆಂದು ಗೊತ್ತಾಗಿ ನಾಗೇಶನ್ ಇಲ್ಲಿಗೆ ಹಿಂತಿರುಗಿದರೆ ನಾವಿನ್ನೂ ಇಲ್ಲೇ ಇರುತ್ತೇವೆ, ಆಗ ನಮ್ಮನ್ನು ಶೂಟ್ ಮಾಡುತ್ತಾನೆ." ಇನ್ನೂ ಉಜ್ವಲಾಳ ಆತಂಕ ಕಡಿಮೆಯಾಗಿರಲಿಲ್ಲ.

"ಇಲ್ಲ ಮರಿ. ನಾವು ಅವನ ಕೈಗೆ ಸಿಗೋದಿಲ್ಲ," ಭಾಸ್ಕರ ಕೋಣೆಯ ಸುತ್ತ ಓಡಾಡತೊಡಗಿದ್ದ. "ಇಲ್ಲಿಂದ ಹೊರಹೋಗಲು ಇನ್ನೊಂದು ದಾರಿ ಇದೆ."

"ಎಲ್ಲಿ?"

"ನಿಧಿ ಇರುವ ಕೋಣೆಯಿಂದ." ಎನ್ನುತ್ತ ಕೋಣೆಯ ಮಧ್ಯದಲ್ಲಿದ್ದ ಆನೆಯನ್ನು ತಿರುಗಿಸಿದ.

'ಭುಸ್' ಎಂದು ಗೋಡೆಯಾಚೆಯಿಂದ ಹೊಯ್ಗಾಳಿ ಹೊಡೆಯಿತು. ಗೋಡೆಯ ಒಂದು ಭಾಗ ಪಕ್ಕಕ್ಕೆ ಸರಿದುನಿಂತು, ಅದರಾಚೆ ಮತ್ತೊಂದು ಕೋಣೆ ಕಾಣಿಸುತ್ತಿತ್ತು.

ಭಾಸ್ಕರ ಪಂಜನ್ನು ಹಿಡಿದು ಆಚೆಯಿದ್ದ ಕೋಣೆಗೆ ದಾಟಿದ. ಉಜ್ವಲಾ ಅವನ ಹಿಂದೆಯೇ ಹೋದಳು. ಕೋಣೆಯಲ್ಲಿ ಕಾಣಿಸಿದ್ದು ಬರೀ ಮುರಿದ ಪೆಟಾರಿಗಳು, ತುಣುಕು ಹಗ್ಗಗಳು, ಒಡೆದ ಮಡಿಕೆಗಳು ಮತ್ತಿತರ ಅವಶೇಷಗಳು ಮಾತ್ರ.

ಭಾಸ್ಕರ ಸಂಪೂರ್ಣವಾಗಿ ಕುಗ್ಗಿ ಹೋದ. "ಇಲ್ಲ! ಖಾಲಿಯಾಗಿದೆ! ಯಾರೋ ನಮ್ಮ ಮೊದಲೇ ಇದನ್ನು ಕಂಡುಹಿಡಿದು ಖಾಲಿ ಮಾಡಿರಬೇಕು! ಛೆ! ನಿಧಿಯೂ ಇಲ್ಲ ಮಣ್ಣೂ ಇಲ್ಲ! ಎಲ್ಲ ನನ್ನ ಭ್ರಮೆ!" ಹತಾಶನಾಗಿ ಹೇಳಿದ ಭಾಸ್ಕರ.

"ಇಲ್ಲ ಪ್ರೊಫೆಸರ್! ಖಂಡಿತ ಇಲ್ಲ. ಈ ಕೋಣೆ ನೋಡಿ! ಇದರ ಅರ್ಥ ನಿಧಿ ನಿಜವೆಂದು. ಇಲ್ಲಿಯವರೆಗು ಕ್ಲೂಗಳನ್ನು ಪತ್ತೆ ಮಾಡಿಕೊಂಡು, ಆ ನಿಧಿಯನ್ನು ಅಟ್ಟಿಸಿಕೊಂಡು ಬಂದಿದ್ದೇವೆ ಎಂದು. ಇಲ್ಲಿಲ್ಲದಿದ್ದರೆ ನಿಧಿ ಬೇರೆಲ್ಲೋ ಇರಬೇಕು. ಮತ್ತೆ ಹುಡುಕೋಣ." ಉಜ್ವಲಾ ಅವನಿಗೆ ಉತ್ತೇಜನ ನೀಡಿದಳು. ಸ್ವಲ್ಪ ಮೌನದ ನಂತರ "ಮತ್ತೊಂದು ದಾರಿ ಇದೆಯೆಂದಿದ್ದರಲ್ಲ, ಎಲ್ಲಿದೆ?" ವಿಚಾರಿಸಿದಳು.

"ಅದೇ ನನಗೂ ಅರ್ಥವಾಗುತ್ತಿಲ್ಲ! ಈ ಹೊಂಡ ತೆಗೆದ ಕೂಡಲೆ, ಇದನ್ನು ಕಟ್ಟಿದವರು ಹಿಂದಿನಿಂದ ಮತ್ತೊಂದು ಸುರಂಗ ಕೊರೆದಿರಬೇಕು... ಗಾಳಿಯಾಡಿಸಲು, ಜೊತೆಗೆ ನೆಲಕುಸಿತವಾದರೆ ಹೊರಹೋಗಲು. " ಆಗಲೇ ಆತ್ಮವಿಶ್ವಾಸ ಮೂಡಿ ಸುತ್ತಿಗೆಯಿಂದ ಗೋಡೆಯನ್ನು ಕುಟ್ಟುತ್ತ ಕೋಣೆಯ ಸುತ್ತ ಓಡಿಯಾಡಲಾರಂಭಿಸಿದ್ದ ಭಾಸ್ಕರ. ಗೋಡೆಯಲ್ಲಿ ಉಬ್ಬಿದ್ದ ಗುಬುಟೊಂದನ್ನು ಒತ್ತಿದಾಗ ನೆಲವೇ ಆಕಳಿಸಿ ಬಾಯಿ ಬಿಟ್ಟಂತೆ ಕಿಂಡಿಯೊಂದು ತೆರೆಯಿತು. ಅಗಲವಾಗಿದ್ದ ಮೆಟ್ಟಿಲುಗಳು ಕೆಳಗಿಳಿದು ಹೋಗುತ್ತಿದ್ದವು. ಒಬ್ಬರ ಮುಖ ಮತ್ತೊಬ್ಬರು ನೋಡಿಕೊಂಡು ಭಾಸ್ಕರ, ಉಜ್ವಲಾ ಕೆಳಗಿಳಿಯಲು ಆರಂಭಿಸಿದರು. ಹಲವು ಮೆಟ್ಟಿಲು ಇಳಿದ ನಂತರ ನೆಲ ಮಟ್ಟವಾಗಿ ಒಂದು ಮೊಗಸಾಲೆಗೆ ಬಂದು ನಿಂತರು.

"ವಾವ್!"

"ಓಹ್!"

ಉಜ್ವಲಾ ಮತ್ತು ಭಾಸ್ಕರ ವಿಗ್ರಹಗಳು, ಪೆಟಾರಿಗಳು ಮತ್ತು ಗಡಿಗೆಗಳಿಂದ ತುಂಬಿದ್ದ ಕೋಣೆಯಲ್ಲಿ ನಿಂತಿದ್ದರು. ಮೊಗಸಾಲೆಯಿಂದ ಇನ್ನೂ ಕೆಳಗಿಳಿಯಲು ಕಲ್ಲಿನ ಮೆಟ್ಟಿಲುಗಳಿದ್ದವು. ಪಾತಿಯೊಂದು ಮೆಟ್ಟಿಲ ಜೊತೆಯೇ ಹೋಗುತ್ತಿತ್ತು. ಪಾತಿಯೊಳಗೆ ಇದ್ದಲು ಹಾಗು ಎಣ್ಣೆಯ ಮಿಶ್ರಣವಿರುವುದನ್ನು ನೋಡಿ ಭಾಸ್ಕರ ತನ್ನ ಕೈಯಲ್ಲಿದ್ದ ಪಂಜಿನ ಬೆಂಕಿಯನ್ನು ಅದಕ್ಕೆ ತಾಗಿಸಿದ. ಪಾತಿಯುದ್ದಕ್ಕೂ ಬೆಂಕಿ ಹತ್ತಿಕೊಳ್ಳುತ್ತ, ಬೆಳಕು ಚೆಲ್ಲುತ್ತ ಹೋಯಿತು. ಕಣ್ಣಿಗೆ ಎಟಕುವಷ್ಟು ದೂರಕ್ಕೂ ಇನ್ನೂ ಹೆಚ್ಚಿನ ಬಂಗಾರ, ಬೆಳ್ಳಿ ಹಾಗು ಕಲ್ಲಿನ ವಿಗ್ರಹಗಳು, ಚಿನ್ನದ ಆಭರಣಗಳು, ವಜ್ರ-ವೈಢೂರ್ಯಗಳು ತುಂಬಿದ್ದ ಸಾವಿರಾರು ಪೆಟಾರಿಗಳು, ಇನ್ನೂ ಹೆಚ್ಚು ಬಂಗಾರದ ನಾಣ್ಯಗಳು ತುಂಬಿದ್ದ ಹೂಜಿಗಳು, ಸಾವಿರಾರು ತಾಳೆಗರಿಯ ಹಸ್ತ-ಪ್ರತಿಗಳು, ಇನ್ನೂ ಹೆಚ್ಚು ಹೇಳಲಾಗದ ನಾನಾರೀತಿಯ ಅತ್ಯಮೂಲ್ಯ ವಸ್ತುಗಳು ಪಾತಿಯಲ್ಲಿ ಉರಿಯುತ್ತಿದ್ದ ಬೆಂಕಿಯ ಬೆಳಕಿನಲ್ಲಿ ಕಂಗೊಳಿಸುತ್ತಿದ್ದವು.

ಭಾಸ್ಕರ, ಉಜ್ವಲಾ ಬಹಳ ಹೊತ್ತು ಮಾತನಾಡಲಾರದೆ ಈ ದೃಷ್ಯವನ್ನು ನೋಡುತ್ತ ನಿಂತರು. ಕೊನೆಗೊಮ್ಮೆ ಮೌನ ಮುರಿದಾಗ ಉಜ್ವಲಾಳ ಅಳುವಿನ ಶಬ್ದ ಕೇಳಿಬಂತು. ಅವಳೆಡೆ ನಡೆಯುತ್ತ ಭಾಸ್ಕರ ಪಿಸುಮಾತಿನಲ್ಲಿ ಕೇಳಿದ "ಉಜ್ವಲಾ, ಆರ್ ಯು ಓಕೆ?"

ಬೆರಳು ತೋರಿಸುತ್ತ ಉಜ್ವಲಾ "ಅಲ್ಲಿ ನೋಡಿ! ಮೇಲೆ ಹೋಗಲು ಮೆಟ್ಟಿಲು!" ಎಂದಳು.

*****

"ಆಲ್‌ರೈಟ್. ನಿಮ್ಮ ಪ್ರಸ್ತಾಪವೇನು ಪ್ರೊಫೆಸರ್?" ಇನ್ಸ್‌ಪೆಕ್ಟರ್ ಮಹೇಶ್ವರ ಕೇಳುತ್ತಿದ್ದ.

ಅರಮನೆಯ ಕಳವಿನ ವಿಚಾರವಾಗಿ ನಾಗೇಶನ್ ಕಡೆಯವರನ್ನು ಹಿಂಬಾಲಿಸುತ್ತ ಹಂಪೆಗೆ ಬಂದಿದ್ದ ಇನ್ಸ್‌ಪೆಕ್ಟರ್ ಮಹೇಶ್ವರ ಹಂಪೆಯ ಪೋಲೀಸರೊಂದಿಗೆ ಕೂಡಿ ತನಿಖೆ ನಡೆಸುತ್ತಿದ್ದ. ಉಜ್ವಲಾ ಹಾಗು ಭಾಸ್ಕರ ನಿಧಿಯ ಕೋಣೆಯಿಂದ ತಪ್ಪಿಸಿಕೊಂಡು ಹೊರಬಂದು, ಹಂಪೆಯ ಪೋಲೀಸರನ್ನು ಸಂಪರ್ಕಿಸಿದಾಗ ಮಹೇಶ್ವರನನ್ನು ಎದುರಾಗಿದ್ದರು.

"ಒಂದು ಹತ್ತು...ನೂರು ಕೋಟಿ ರೂಪಾಯಿ ಲಂಚ?"

"ತಮಾಷೆ ಮಾಡುತ್ತಿದ್ದೀರ, ಪ್ರೊಫೆಸರ್? ನಿಮ್ಮ ನಿಧಿ ಬಗ್ಗೆ ನನಗೆ ಗೊತ್ತಾಗಿದೆ"

"ನೀವು ಅದರ ಮೇಲೆ ನಿಂತಿದ್ದೀರ, ಇನ್ಸ್‌ಪೆಕ್ಟರ್. ನಿಮ್ಮ ಕಾಲಿನ ಸುಮಾರು ನೂರು ಅಡಿ ಕೆಳಗಿದೆ. ಆ ನಿಧಿ ಯಾರೊಬ್ಬರ ಕೈಗೂ ಸಿಗಬಾರದು. ಅದಕ್ಕೇ ಅದನ್ನು ಪ್ರಾಚೀನ ಕಾಲದಿಂದಲೂ ಯಾರ ಕಣ್ಣಿಗೂ ಕಾಣದಂತೆ ಇರಿಸುತ್ತಿದ್ದರು. ಇದಕ್ಕೆ ಒಂದೇ ದಾರಿ"

"ಜನರಿಗೆ ಹಂಚುವುದು." ಇನ್ಸ್‌ಪೆಕ್ಟರ್ ಅಸಾಧಾರಣ ಜಾಣ್ಮೆಯಿಂದ ನುಡಿದ.

"ದೇಶಾದ್ಯಂತ ಮ್ಯೂಸಿಯಮ್‌ಗಳು, ಧರ್ಮ-ಕ್ಷೇತ್ರಗಳು, ವಿಶ್ವವಿದ್ಯಾಲಯಗಳಿಗೆ ಹಂಚಬೇಕು. ಬರೀ ಸಂಪತ್ತೊಂದೇ ಅಲ್ಲ, ಅಲ್ಲಿ ನೂರಾರು-ಸಾವಿರಾರು ವರ್ಷಗಳ ಇತಿಹಾಸವೂ ಅಡಗಿದೆ"

"ಮತ್ತೇನು?"

"ಈ ನಿಧಿ ಹುಡುಕಿದ್ದಕ್ಕೆ ನಾನೊಬ್ಬನೇ ಅಲ್ಲ, ಉಜ್ವಲಾಳಿಗೂ ಮನ್ನಣೆ ಸಿಗಬೇಕು. ಓಹ್! ಆ ಅರಮನೆ ವಿಚಾರ... ಉಜ್ವಲಾಳಿಗು ಅದಕ್ಕು ಸಂಬಂಧವಿಲ್ಲ. ಅವಳ ಹೆಸರು ಆ ವಿಚಾರದಲ್ಲಿ ಎಲ್ಲೂ ಬರಬಾರದು."

"ಆಹಾ?"

"ನಾನೂ ಆ ಅರಮನೆ ವಿಚಾರದಲ್ಲಿ ಜೈಲಿಗೆ ಹೋಗದಿರಲು ಇಷ್ಟ ಪಡುತ್ತೇನೆ."

"ಯಾರಾದರೂ ಒಬ್ಬರು ಹೋಗಲೇಬೇಕಲ್ಲಾ?"

"ಹಂ ಹಾಗಿದ್ದರೆ ಆನೆ-ಅಸ್ತಬಲದ ಕಡೆ ನಿಮ್ಮ ಸೈನ್ಯ ತಿರುಗಿಸಿದರೆ ಅಲ್ಲಿ ನಿಧಿ ಹುಡುಕುತ್ತಿರುವ ಗೂಂಡಾಗಳನ್ನು ಹಿಡಿದು ಜೈಲಿಗೆ ಹಾಕಬಹುದು." ಭಾಸ್ಕರ ಬಿಟ್ಟುಕೊಟ್ಟ.

*****

ಆರು ತಿಂಗಳು ಉರುಳಿದವು. ಒಂದು ದಿನ ವಿಶ್ವವಿದ್ಯಾಲಯದಲ್ಲಿ ಭಾಸ್ಕರ ತನ್ನ ಆಫೀಸಿನಲ್ಲಿ ಕುಳಿತಿದ್ದಾಗ ಅವನ ಮೇಜಿನಮೇಲೆ ಉಜ್ವಲಾ ಒಂದು ಪುಸ್ತಕವನ್ನು ತಂದಿಟ್ಟಳು. "ಸರ್, ಇದು ನನ್ನ ಪಿ.ಎಚ್.ಡಿ. ಡಿಸರ್ಟೇಶನ್."

ಭಾಸ್ಕರ ಅದನ್ನು ಕೈಗೆತ್ತಿಕೊಂಡು ಅದರ ಶೀರ್ಷಿಕೆ ಓದಿದ, 'ರಾಷ್ಟ್ರನಿಧಿ'.

***

# Argonaut Dental


## Sahana Prasad DDS, Inc.

### Family and Aesthetic Dentistry

in the Argonaut Center near Blockbuster and Safeway

## All that is good begins with a Smile.

Your smile is our top priority. Our entire team is dedicated to providing you with the personalized, gentle care that you deserve. We are a dental practice devoted to restoring and enhancing the natural beauty of your smile. We use conservative, state-of-the-art procedures that will result in beautiful, long lasting smiles!



## About Dr. Prasad



Dr. Sahana Prasad

Dr. Sahana Prasad has been practicing Family and Aesthetic Dentistry in California since 1999. She completed California State Dental Board Licensure and received her Doctor of Dental Sciences (DDS) degree in 1999. Over the past 8 years she has spent hundreds of hours in continuing education courses in order to stay current on advances in dentistry. In addition to family dentistry Dr. Prasad has dedicated herself to the art and science of cosmetic dentistry.

Dr. Sahana Prasad was born and raised in India. She completed her undergraduate studies and study of dentistry at *SDM College of Dental Sciences, Karnatak University, India in 1993. She practiced dentistry in India until her arrival in the USA in 1995.

Dr. Sahana Prasad and her family live in Saratoga. She is an active member of the California Dental Association and American Dental Association. In her free time she volunteers at her daughters' elementary school. She loves to travel, read, bike, and go camping.

**SDMCDS is considered to be the best and the largest dental college in Asia offering accredited degrees in association with Royal College of Surgery, UK. She was placed among the top 5 students throughout the four year curriculum in Karnatak University, representing four dental colleges.*

*If you're looking for exceptional dental care with a gentle touch, you've found it.*

Dentistry is changing...

at a wondrous pace. We offer you a state-of-the-art practice with all digital equipment in a beautiful setting. We believe in preserving your natural teeth. Also, with refined cosmetic treatments, a whiter smile is yours for the asking. These days we have the means to bring both children and adults a high level of dental health—comfortably.



**We offer a full array of dental procedures including:**

- Digital X-rays
- Tooth-Colored Fillings
- Porcelain Veneers
- Porcelain Crowns
- Porcelain Bridges
- Invisalign®
- Zoom!® Teeth Whitening
- Implant Crowns
- Night Guards
- Partial and Full Dentures

Special Offers

***Free Take Home Whitening Kit*** (Value $295)
When you come in for your Comprehensive Examination, X-ray and Initial Cleaning.
Not redeemable for cash. Patient must be 18 years of age for teeth whitening. Not good with any other offer.

***$200 off Zoom!® In Office Whitening***
When you come in for your Comprehensive Examination, X-ray and Initial Cleaning.
Not redeemable for cash. Patient must be 18 years of age for teeth whitening. Not good with any other offer.

After your initial visit, if your Treatment Plan exceeds $400, you'll also receive
***$100 off future expenses.***
Not redeemable for cash. Not good with any other offer.

***$1000 off Invisalign® Treatment Plan***
Not redeemable for cash. Patient must be 18 years of age and must clinically qualify for Invisalign Treatment. Not good with any other offer.

Make an appointment today:
**408 • 867 • 1800**
or come in for a free consultation
We're in the Argonaut Center near Blockbuster and Safeway.

Argonaut Dental
Sahana Prasad DDS, Inc.
Family and Aesthetic Dentistry
12860 Saratoga-Sunnyvale Rd
Saratoga, California 95070
**www.ArgonautDental.com**

*ಸುಪ್ತದೀಪ್ತಿ
ಕ್ಯಾಲಿಫೋರ್ನಿಯ

## ಅಮರಾ....ವತಿ



ಅವಕಾಶಗಳ ಅಮರಾವತಿಯಲ್ಲಿ
ಗೋರಿಗಳು ಸಾವಿರಾರು
ಒಕ್ಕಣ್ಣ ವಿಕಲಾಂಗರ ನಡುವೆ
ಹತ ಭಾಗ್ಯ ಚೇತನರು
ಶೋಕ, ನಗೆಬುಗ್ಗೆ ಒಸರುಗಳ
ಕೋಶಗಳೊಳಗೆ ನಿರ್ವಾತ
ಸದ್ದೇ ಇರದ ಗದ್ದಲ
ಗೊಂದಲ, ಬಿಳಿ
ಮನೆ ಮನೆಯಲ್ಲಿ
ಕತ್ತಲೆಗೇ ಮೆತ್ತಿದ ಹಸುರು
ಕಾಣದ ನೆಲದಲ್ಲಿ ನೆತ್ತರು
ಯಾರ ಕೈವಾಡಕ್ಕೆ ಮತ್ತಾರ ಹೆಸರು
ವಿತ್ತಚೇತನದ ಅಡಿಪಾಯದಲ್ಲಿ
ಹೆಗ್ಗಣಗಳ ಗೂಡು
ಪಾರಿವಾಳವಿರದ ಮಾಡು
ಹೊಸನಗೆಯ ಸಮಾಧಿಯಲ್ಲಿ
ಹಳೆಹುಲಿಗಳ ದರಬಾರು
ನೆತ್ತಿ ಕಾಯುವ ದೈವ
ಅವ-ನೆತ್ತಿ ಕುಕ್ಕಿದರೆ
ಕಾವನಾರು?

(೯-೧೧ರ ದುರಂತ, ತದನಂತರದ ಅಫ್ಘಾನ್ ಯುದ್ಧ,
ಆಮೇಲಿನ ಇರಾಕ್ ಯುದ್ಧ... ಇವೆಲ್ಲದರ ಪರಿಣಾಮ,
ಕಾರಣಗಳ ಚಿಂತನೆಯಲ್ಲಿ...)
೧೬-ಎಪ್ರಿಲ್-೨೦೦೭
***

ಅಮೇರಿಕಾ ಕಂಡ ಅತ್ಯಂತ ಕಿರಿಯ ಹಾಗೂ ಅತ್ಯಂತ ಹಿರಿಯ ರಕ್ಷಣಾ ಕಾರ್ಯದರ್ಶಿಗಳು ಯಾರು?

ಮಾಜಿ ಕಾರ್ಯದರ್ಶಿ ಡೊನಾಲ್ಡ್‌ರಂಸ್‌ಫೀಲ್ಡ್. ೧೯೭೫ರಲ್ಲಿ ಅಧ್ಯಕ್ಷ ಫ್ಹೋರ್ಡ್‌ರವರು ರಕ್ಷಣಾ ಕಾರ್ಯದರ್ಶಿಯನ್ನಾಗಿ ನೇಮಿಸಿದಾಗ ರಂಸ್‌ಫೀಲ್ಡರಿಗೆ ೪೩ ವರ್ಷ. ೨೦೦೧ರಲ್ಲಿ ಹಾಲೀ ಅಧ್ಯಕ್ಷ ಬುಶ್ ರಂಸ್‌ಫೀಲ್ಡರನ್ನು ಮತ್ತೆ ರಕ್ಷಣಾ ಕಾರ್ಯದರ್ಶಿಯಾಗಿ ಆರಿಸಿದರು.
***

ಅನಿಲ್ ಜೋಶಿ
ಕ್ಯಾಲಿಫೋರ್ನಿಯ

## ಅಶ್ವತ್ಥ



ಎಲ್ಲಿ ನೋಡಿದರಲ್ಲಿ ಜನಜಂಗುಳಿ
ಕಾರು ಇತ್ಯಾದಿಗಳ ಸಾಲು
ಗುಂಪಿನಲ್ಲಿ ನಾನೂ
ಹೊರಟಿರುವುದೆಲ್ಲಿಗೆ?
ತಲುಪುವದೆಲ್ಲಿಗೆ?

ಮತ್ತೊಂದು ಮುಂಜಾವು
ಮತ್ತದೇ ಧಾವಂತ
ಕಾಣದ ನಾಳೆಗಳ ತುಡಿತ
ಇಮ್ಮೀಡಿಯೆಟ್ಟುಗಳ ಕುಣಿತ
ಅಹಸ್ಸಂವತ್ಸರನ ಆಟ

ನೆಟ್ಟ ಕನಸುಗಳ ಚಿಂತೆ
ಕೂಡಿಟ್ಟ ಗಂಟುಗಳ ನಂಟು
ಕಷ್ಟವೆಂದು ನಾಳೆಗಳಿಗಿಟ್ಟ ದಾರಿ
ಕೈ ಬಿಟ್ಟ ಆಶೆಗಳ ಕಥೆ, ವ್ಯಥೆ
ದೂರದಲ್ಲೆಲ್ಲೋ ಸದ್ದು, ಅಸ್ಪಷ್ಟ
ಏನದು? ಕಾಲನ ತಮಟೆ?

ಹೂತಿಟ್ಟ ಪದರುಗಳ ಸೀಳಿ
ತತ್‌ಕ್ಷಣ ಆಲವಾಗಿ, ಅರಳೆಯಾಗಿ
ಕಣಕಣವ ತುಂಬಿ
ಬದುಕೆಲ್ಲ ಬೆದಕಿ
ಅಸ್ತಿತ್ವವನೆ ಕೆಣಕುವ ಪ್ರಶ್ನೆ;
ಧುತ್ತನೆ ಎದುರಾಯ್ತೆ ಇಂದು

ಗೊತ್ತಿದ್ದು ಮರೆತ ಯಕ್ಷಪ್ರಶ್ನೆ
ಮತ್ತೆ ಮತ್ತೆ ನೆನಪಾಗಿ ಕಾಡಿ,
ಇಂದು ನಾಳೆಗಳ ಸಾರ್ಥಕತೆ
ದ್ವಂದ್ವಗಳಲ್ಲಿ ಮುಳುಗಿ
ಬರಿ ಪ್ರಶ್ನೆಗಳೆ ಉಳಿದಾಗ
ಕರುಣಿಸೋ ಕೃಷ್ಣ ಗೀತಾಮೃತ
ಕಿತ್ತಿಬಿಡಬೇಕು ಈ ಅಶ್ವತ್ಥ

(ಭಗವದ್ಗೀತೆ: ಅಧ್ಯಾಯ ೧೫ರ ಒಂದು ಶ್ಲೋಕ:
'ಅಶ್ವತ್ಥಮೇನಂ ಸುವಿರೂಢಮೂಲಂ
ಅಸಂಗ ಶಸ್ತ್ರೇಣ ದೃಢೇನ ಛಿತ್ವಾ')
***

ಕ ಥೆ

೨೦೦೭ರ ಯುಗಾದಿ ಕಥಾಸ್ಪರ್ಧೆಗೆ ಸಲ್ಲಿಸಿದ ಕಥೆ.

ಸುಧಿ ಬೆಂಗಳೂರು
ಕ್ಯಾಲಿಫೋರ್ನಿಯ



# ಮುಂದೇನು

**ಕು**ಮಾರಾ, ನಾನು ಶಿವಪ್ಪ...ಇದ್ಯೇನಯ್ಯ ಒಳಗೆ?

ಯಾರು? ಓಹೊ, ಮಂಡ್ಯ ಶಿವಣ್ಣೋರು...ಬನ್ನಿ ಒಳಗೆ ಬನ್ನಿ, ಅದ್ಯಾಕೆ ಬಾಗ್ಲಲ್ಲೆ ನಿಂತ್ಬಿಟ್ರಿ? ಬನ್ನಿ ಕೂತ್ಕೊಳಿ.

ಅಲ್ಲಪ್ಪ ಕುಮಾರಪ್ಪ, ನಮ್ಮೊರು ಕಡೆ ಮನೆತಾವು ಹೇಳ್ಕಳ್ಸಿದ್ಯಂತೆ, ನಾನು ಇರಿಲಿಲ್ಲಪ್ಪ, ಬೆಂಗಳೂರಿಗೆ ಹೊಗಿದ್ದೆ, ಒಂದು ಹಳೆ ತಕರಾರಿತ್ತು, ಹಾಗೆ ಮಗಳ್ನು ಮೊಮ್ಮಕ್ಳನ್ನೆಲ್ಲಾ ನೋಡ್ಕೊಂಡು ಈಗ ಸ್ವಲ್ಪ ಹೊತ್ತಿಗೆ ಊರ್ ಸೇರಿದ್ನಾ, ಬಂದೋನೆ...ಬಂದರೆ ತಕ್ಷಣ ತಿಳಿಸಿ ಅಂದ್ರು ಅಂತ್ಕೇಳಿದ್ದೆ ತಡ, ತಡ ಮಾಡ್ದೆ ಇಲ್ಲಿಗೇ ಸೀದ ಬಂದುಬಿಟ್ಟೆ ನೋಡು, ಅದಿರಲಿ ನಿಮ್ಮಪ್ಪಂಗೆ ಕಣ್ಣು ಮಂಜು ಸರಿ ಹೋಯಿತೇನಪ್ಪ? ಎಲ್ಲಿ ಸದ್ದೆ ಇಲ್ಲ ಇನ್ನೂ ಅವುಂದು, ನಾನು ಬಂದು ಏಷ್ಟೊತ್ತಾಯಿತು, ಮಲಗಿದಾನೇನೊ...ಮಲಗಿದ್ದರೆ ಎಬ್ಬಸ್ಬೇಡ ಬಿಡು, ನಾಳೆ ಈ ಕಡೆ ಬರೋದಿದೆ ಬರ್ತಿನಿ.

ಎಲ್ಲಿ ಬಂತು ಶಿವಣ್ಣೋರೆ ಮಲಗೋದು?... ಅಪ್ಪಯ್ಯ ಒಳಗೆ ಮಲಗಿಲ್ಲ, ಅದನ್ನೆ ಹೇಳೊಕ್ಕೆ ಕಳಸಿದ್ದೆ ಶಿವಣ್ಣೋರೆ ಆವತ್ತು ನಿಮ್ಮನೆಗೆ, ಹೊರಟೇ ಹೋದ್ರು ದೂರ...ನಮ್ಮನ್ನೆಲ್ಲ ಬಿಟ್ಟು. ಅವತ್ತು ನೀವು ಬಂದು ಹೋದವ್ಯಾಗೆ ಆ ರಾತ್ರಿ ತಲೆ ನೋವು ಸಿಕ್ಕಾಪಟ್ಟೆ ಜಾಸ್ತಿಯಾಗಿ, ಪಕ್ಕದ ಊರಿನ ವೈದ್ಯರನ್ನ ನಾನೆ ಹೋಗಿ ಕರ್ಕೊಂಡ್ಬಂದೆ, ಅದೇನೋ ಮೈ ಕೈ ಮುಟ್ಟಿ ಎದೆಯಾಗೆಲ್ಲ ನೋಡ್ದ್ರು ಅವರು, ಮಾತ್ರೆ ಬರ್ಕೊಟ್ರು ಸರೋಗುತ್ತೆ ಒಂದೆರಡು ದಿನದಲ್ಲಿ ಅಂದಿದ್ರು ಆವಪ್ಪ, ಮನೆ ಓಷಧಿನೂ ಹಾಕುದ್ವು, ಪೇಟೆಯಿಂದ ಮಾತ್ರೆ ತಂದು ಅಪ್ಪಂಗೆ ನುಂಗುಸ್ದಿನ, ಕೊನೆಗೆ ಯಾವುದೂ ಏನೂ ಪ್ರಯೋಜನಕ್ಕೆ ಬರಲಿಲ್ಲ....[ಅಳುವಿನ ದನಿಯಲ್ಲಿ] ನಾಳೆ ಸೋಮಾರ ಬಂದ್ರೆ, ಅಪ್ಪ ಹೋಗಿ ಈಗ ನಾಲ್ಕು ವಾರಕ್ಕೆ ಬರ್ತ್ಯತೆ, ಅವರೆ ಎಲ್ಲ ನೋಡ್ಕೊತಿದ್ರು ಈ ಮನ್ಯಾಗೆ, ನಾನಾಯಿತು ಹೊಲ ಆಯಿತು, ಹೊಲದಲ್ಲೇ ದುಡ್ಕೊಂಡಿದ್ದೆ, ಈಗ ನೋಡಿ...

ಹೌದೇನೆಪ್ಪ...ಹೋಗ್ಬಿಟ್ನೇನಪ್ಪ....ನಿಮ್ಮಪ್ಪ...ಕುಮಾರಪ್ಪ...ಒಳ್ಳೆವ ನಪ್ಪ, ತುಂಬ ಒಳ್ಳೆವ್ನು. ಮುತ್ತು ಅಪ್ಪ ಅವನು ಮುತ್ತು ಕಣಪ್ಪ, ಏನೇ ಆಗಿರಲಿ ಸದಾ ನಗನಗತಾನೆ ಇರೋನು, ಗಟ್ಟಿಗ ಕಣಪ್ಪ, ನೋಡೊಕ್ಕೆ ಆಗ್ಲಿಲ್ವಲ್ಲಪ್ಪ ನಂಗೆ ಕಡೆನಲ್ಲಿ, ಅಲ್ಲೆಲ್ಲೊ ಹಾಳು ವಕೀಲ್ರತ್ರ ಸಿಕ್ಕಾಕಿಕೊಂಡೆ ನಾನು, ನನ್ನ ಬುದ್ದಿಗೇನು ಮಂಕು ತುಂಬಿತ್ತೊ ಏನೊ, ಐವತ್ತು ವರ್ಷದ ಮೇಲೆನೆ ಗೊತ್ತು ನಂಗೆ ನಿಮ್ಮಪ್ಪ. ನೋಡ್ಲಿಲ್ಲಪ್ಪ ನಾನು ನೋಡ್ಲಿಲ್ಲ ಕಡೆಗೆ. ನೋಡಪ್ಪ, ಅವನು ಹಿಂದೆ ನನಗೆ ಒಂದಷ್ಟು ಹಸುಗಳನ್ನ ಮಾರ್ಕೊಂಡು ಬರೊಕ್ಕೆ ಬಲು ಸಹಾಯ ಮಾಡಿದ್ದ, ಕೊನೆಗೆ ಒಂದಿಷ್ಟೂ ಹಣ ತೊಗೊಳ್ಳಿಲ್ಲ. ಅಂತೂ ಬಲವಂತ ಮಾಡಿ ಅವನ ಕೈಗೆ ಕೊಟ್ಟೆ, ಅಂತವ್ನು ಅಪ್ಪ ಕುಮಾರಪ್ಪ, ಜೀವನದಾಗೆ ಸುಖ ದುಖ ಬಂದೆ ಬರ್ತ್ಯತ್ತಪ್ಪ. ನಾವೆಲ್ಲ ಮನುಷ್ಯರಪ್ಪ ಮನುಷ್ಯರು ಸಾಮಾನ್ಯ ಕಾಯಿಗಳಪ್ಪ ನಾವುಗಳು...ವಿಧಿ ಕಣಪ್ಪ....ಸ್ವಲ್ಪ ಸಮಾಧಾನ ಮಾಡ್ಕೊ. ಹೋಗಲಿ, ಅವನ್ಯಾರು...ದೊಡ್ಡಮಗ...ಹೆಸರು ಬರ್ತಿಲ್ಲ ಬಾಯ್ಗೆ...ಹಾಳು ಮರುವು...

ಕಾಂತಿ ಶಿವಣ್ಣೊರೆ ಕಾಂತಿ...

ಹಾ! ಅದೆ ಕಾಂತಪ್ಪ ಬಂದಿದನಾ? ಪಕ್ಕದ ರಾಜ್ಯದಲ್ಲಿ ಯಾವುದೊ ದೊಡ್ಡ ಆಫಿಸರ್ ಕೆಲಸ ಮಾಡ್ಕೊಂಡು ಇದಾನಲ್ವೇನಪ್ಪ ಅವ್ನು? ದೊಡ್ಡೊನಪ್ಪ ಅವ್ನು,ಇರಬೇಕು ಅವನಿಲ್ಲಿ ...ಇಲ್ಲಿಗೆ ಅಂತದೇನು ಆವನೂರು ದೂರ ಇಲ್ಲ ಅಲ್ವೇನೋ?

ಹತ್ರನೆ ಬಸ್ನಾಗ್ ಬಂದ್ರೆ; ಕಾಂತಿ ಬಂದಿದ್ದ ಶಿವಣ್ಣೊರೆ...ಆಗಲೆ ವಾರಕ್ಕೆ ಬಂತು ಬಂದೋಗಿ ಅವನು, ಅಷ್ಟೆಯ ಇನ್ನಷ್ಟೆ ಅಪ್ಪಯ್ಯಂಗೆ ಇನ್ನು ಆರೋಗ್ಯ ಸುಧಾರಿಸೊ ಹಾಗೆ ಕಾಣ್ತಯಿಲ್ಲ ಅಂತ ನಾನೆ ಕರೆ ಮಾಡಿದ್ದೆ. ಅವನು ಅಪ್ಪಯ್ಯ ಬದುಕಿರೊವಾಗ್ಲೆ ಬಂದ ಅಂತಿಟ್ಟುಕೊಳ್ಳಿ...ಆದರೇನು ಬಂತು ಹೇಳೊದಕ್ಕೂ ಕೇಳೊದಕ್ಕೂ ಆಗ್ತಾ ಇರಲಿಲ್ವೆ ಅಪ್ಪಯ್ಯಂಗೆ ಅವನು ಬಂದಾಗ...ಕಡೆಗೆ ಮಾಡೋ ಕಾರ್ಯ ಎಲ್ಲ ಮುಗಿಸಿ ಹೋಗೊದಿರಲಿ, ಈಗ ಇನ್ನಿಲ್ಲಿರೋರ ಜೀವನಕ್ಕೆ ಕೊಡಲಿ ಹಾಕೊ ಯೋಜನೆ ಅವುಂದು ಶಿವಣ್ಣೊರೆ, ಕೇಳ್ಬಿಟ್ಟರೆ ಭಾರಿ ಯೋಜನೆ!

ಎಲಾ ಇವ್ನಾ ಚೋಟುದ್ದ ಮೆಣಸಿನಕಾಯಿ ಬಿಟ್ಟಾಗ! ಚೆನ್ನಾಗಿ ಓದಿಸಿ ದೊಡ್ಡ ಹುದ್ದೆಗೆ ತಯಾರಿ ಮಾಡ್ಸಿದಿನಿ ಅಂತೆಲ್ಲ ನಿಮ್ಮಪ್ಪ ಹೆಮ್ಮೆಯಿಂದ ಹೊಗಳಿದ್ದೂ ಹೊಗಳಿದ್ದೆ ಎಲ್ರತ್ರನೂ, ಅವನ್ನನ್ನ ನೋಡು ಮತೆ, ತಗೋ ಮತೆ! ಅಂತ ಜನ ಮೆಚ್ಕೋಂತದೇನು ಮಾಡವ್ನೆ ಹೇಳು ನಾನು ವಸಿ ಕೇಳೇಬಿಡ್ತೀನಿ.

ಅದಿರಿಲಿ...ಮರ್ತೆ...ಕುಡಿಯೊದಕ್ಕೇ ಕೇಳಿಲ್ಲ ನಿಮ್ಮನ್ನ ಏನು ನಾನು...

ಅಯ್ಯೊ ಆ ಚಿಂತೆ ಬಿಡಪ್ಪ..



ಅಷ್ಟು ದೂರದಿಂದ ಬಂದಿವ್ರಿ ಬಿಸಿಲ್ನಾಗೆ ನಮ್ಮೊರಿಗೆ, ಎಳನೀರು ವಡಿಲೆ ಶಿವಣ್ಣ?

ಏನು ಬೇಡ್ವೊ, ಒಂದು ಲೋಟ ಬರೀ ನೀರು ತಾರೊ...ಆಗಲಿ ಒಂದು ಎಳನೀರೆ ಕೊಟ್ಟೆಬಿಡು ಅತ್ಲಾಗೆ!

[ಸ್ವಲ್ಪ ಹೊತ್ತಿನ ನಂತರ] ತೊಗೊಳಿ ಶಿವಣ್ಣೊರೆ, ನಮ್ಮ ತೋಟದ್ದೇ ಇದು, ನಿನ್ನೆ ಕಿತ್ತಿದ್ದು. ಕುಡಿರಿ, ಈ ನೆಲದ ಗುಣ ಬಲು ರುಚಿ, ನೀರು ಚಂದಗದ?

ಹೌದುಪ್ಪ ಸೀಗಿದೆ

ಶಿವಣ್ಣೊರೆ, ಅಲ್ಲ ಕಾಂತಿ ಮುಂಚಿನಂಗಲ್ಲ

ಹೌದಪ್ಪ ಆಗ್ಬೇಕಾದ್ದೆ ಬದಲಾಗ್ಬೇಕದ್ದೆ, ಅಲ್ವೊ...ಒಂದು ದೂರದ ದ್ವೀಪದಾಗಿದುಬಿಟ್ಟರೆ ಅದರ ನೀರಾಚೆಯಿರೊ ಊರೋರ ಮುಖ ಕಣ್ಣಿಗೆ ಕಾಣ್ತೈತ ಹೇಳು!

ಅವನು ಅಮ್ಮ ಸಾಯೊಕ್ಕೂ ಮುಂಚೆ ಮೇಲಿಂದ ಮೇಲೆ ನಮ್ಮಳ್ಳಿಗೆ ಬರೋನು, ಬಸ್ಸು ಸಿಕ್ಕಿದ್ರೆ ಬಸ್ಸು, ಸಿಗ್ದಿದ್ರೆ ಲಾರಿ ಹತ್ಕೊಂಡೂ ಬರೋನು ಇಲ್ಲಿಗೆ. ಅದ್ಯಾವ್ದೋ ಬಾಟ್ಲಂತೆ, ಪಿಲಾಸ್ಟಿಕ್ಕಂತೆ, ತುಂಬ್ಸಿಟ್ಟು ಫ್ರಿಡ್ಜ್ನಾಗೆ ಮಡ್ಗಿದ್ರೆ ತಣ್ಣಗಿರ್ತೈತಂತೆ ಕುಡಿಯೊ ನೀರೆಲ್ಲ ಯಾವಾಗಲು, ಮಡಿಕೆ ಯಾಕಾಗಲ್ವೊ ಅದಕ್ಕೆ ನಮ್ಮಪ್ಪ ಕಾಣೆ; ಇಲ್ಲಿಂದ ಸಮುದ್ರಕ್ಕೆ ಹರಿದೋಗೊ ನೀರನ್ನ ಬಾಟ್ಲ್ನಾಗೆ ತುಂಬಿಸಿಟ್ಟು ಮಾರೋ ಕಾರ್ಖನೇಲಿ ಕೆಲಸಕ್ಕೆ ಸೇರಿದಾಗಿಂದ ಅಷ್ಟಕ್ಕಷ್ಟೆ ಈ ಕಡೆ ನೋಡಿ ಅವ್ರುಂದು ಮತೆ. ಅಲ್ಲೆ ಶಿವಣ್ಣೊರೆ ಅವನು ನಮ್ಮ ಅತ್ತಿಗೇನ ನೋಡಿದ್ದು, ಇಲ್ಲಿ ಮದುವೆ ಮಾಡ್ಕೊಟ್ರು ಅಷ್ಟೆ. ಇಬ್ಬರಿಗು ಅದೆ ಕಾರ್ಖನೆಯಾಗೆ ದುಡಿಮೆಯೆಲ್ಲ, ಅಲ್ಲೆ ಮನೇನು ಮಾಡವ್ರೆ, ನಾನು ಒಂದು ಸಲ ಹೋಗ್ಬಂದಿವ್ನಿ. ಇಬ್ಬರು ಮಕ್ಕಳ್ನು ಶಾಲೆಗೆ ಅಲ್ಲೆ ಹಾಕೌರ್ವೆ, ಈ ಕಡೆಗೆ ಇಲ್ಲ ಇನ್ನ, ಅಲ್ಲೆ ಅವನು ಇನ್ಮ್ಯಾಗೆ ಬಿಡಿ. ಮಕ್ಕಳ ರಜೆ ಅಂತ ಬರ್ತಾನೆ ಹೊರತು ಈಗ ಸಿಹಿ ಊಟಕೆಲ್ಲ ಇಲ್ಲ. ದಿನ ದುಡ್ಕೊಂಡ್ರಲ್ಲೆ ಆಗುತ್ತೆ ಇಬ್ಬರಿಗು ನಗರದಾಗೆ ಬಿಡುವಿಲ್ಲ ಅಂತನೆ. ನಿನಗೇನೊ ಹೊಲ್ದಾಗೆ ಕೆಲಸ ಸಂಜೆಗಂಟ ಮಾಡ್ತ್ಯ, ಮನೆಗೆ ಬಂದು ಉಂಡು ಬಿದ್ಕೊತ್ಯ ಕತ್ಲಾದ್ಮ್ಯಾಗೆ...ಬೆಳೆ ಬಂದ್ರೆ ಬೆಳೆ ಇಲ್ಲಿದಿದ್ರೆ ಸರ್ಕಾರದಿಂದ ಪರಿಹಾರ ಇದ್ದೆ ಇದ್ಯಲ್ಲ ಅಂತನೆ. ಕಾರ್ಖನೆಯಾಗೆ ಕೆಲಸ ವಸಿ ಜಾಸ್ತಿನೆ ಅಂತ ಇಟ್ಕೊಳ್ಳಿ, ಅಷ್ಟೆ ಸಲೀಸಾಗೆ ಸಂಪಾದನೆನೂ ಆಗ್ತೈತಲ್ವಾ ಶಿವಣ್ಣೊರೆ!

ಆಗಿದೀರಿನ್ನೇನು ಆಗುತ್ತೆ ಬಿಡಪ್ಪ ನಮ್ಮ ತರನಾ ಮಳೆ ಬಂದ್ರೆ

ಬಂತು ಇಲ್ಲಿದ್ರೆ ಒಂದು ಬಿಡ್ಗಾಸುಯಿಲ್ಲ ಅನ್ನೋದಕ್ಕೆ!

ಶಿವಣ್ಣೋರೆ, ತುಂಬ ಹಿಂದೆ ಹೀಗೆ ಇಲ್ಲಿಗೆ ಬಂದಿದ್ದಾಗ ಅವನು, ಈ ಮುರ್ಕಲು ಮನೆ ಒಡೆದು ಮೇಲೆ ಮನೆ ಕೆಳಗೊಂದು ಅಂಗಡಿ ಹಾಕ್ತಿನಿ, ಅದ್ಯಂತದೊ ಟೀವಿ ಅಂಗಡಿ ಅಂತೆ, ಮುಖ್ಯ ರಸ್ತೆಗೆ ಬರುತ್ತೆ ನಮ್ಮನೆ ಹಿಂದಿನ ಬೀದಿಗೆ ನೀನು ವ್ಯವಸಾಯ ಬಿಟ್ಟು ಅಂಗಡಿ ನೋಡ್ಕೊ ಅಂತ ಹೇಳೊಕೆ ಬಂದಿದ್ದ, ಅದಕ್ಕೆ ಅಪ್ಪಯ್ಯ "ನಮಗೆಲ್ಲ ಏನೇನುಬೇಕೊ ಅದನೆಲ್ಲ ಆ ದ್ಯಾವ್ರು ಮಾಡಿದನೆ ಮಗ, ಸಾಕು, ನಾಲ್ಕಾರು ತಲೆಮಾರಿನ ಮನೆ ಇದು ಗೊತ್ತ, ಜೊತ್ಯಾಗೆ ಚೂರೆ ಚೂರು ಹೊಲ ಎದುರಿಗೇ ಬೇರೇ ಇದೆ ನಮ್ಮದೂ ಅಂತ ಬೇಸಾಯಕ್ಕೆ. ಕೆಡೊವ್ಹೋದು ಬೇಡ ಸಾಲ ಮಾಡಿ ಅಂಗಡಿ ಏರ್ಸೋದೂ ಬೇಡ, ಇನ್ನು ಏಷ್ಟು ದಿನ ಇರ್ತಿನಿ ನಾನು ಅಂದುಕೊಂಡೆ, ಎರಡೆ ದಿನದ ಬದುಕು ನಂದಪ್ಪ, ಅವರು ಬಿಟ್ಟಿಹೋಗಿರೊದರಲ್ಲಿ ಸುಖವಾಗಿದ್ದು ಹಾಗೆ ಮುಂದಕ್ಕು ಬಿಟ್ಬೋದ್ರೆ ಸಾಕು" ಎಂಬ ಕಿವಿಮಾತು ಹೇಳಿದ್ದರು. ಅದಾದಮ್ಯಾಗೆ ಇನ್ನೊಂದು ಕಿತ ಕಾಂತಿ, ಅತ್ತಿಗೆ, ಸೀತಕ್ಕ ಎಲ್ಲ ಬಂದಿದ್ದಾಗ ನನ್ನೂ ಎಲ್ಲರನ್ನೂ ಅಪ್ಪಯ್ಯ ಕರೆದು ಒಟ್ಟಾರೆ ಎಲ್ಲರಿಗು ಹೇಳಿದ್ದು ನೆನಪಿಸಿಕೊಂಡರೆ :–

"ನೊಡ್ರಪ್ಪ, ಎಲ್ಲರು ಜೊತೆಲಿದಿರ ಇವತ್ತು, ಸ್ವಲ್ಪ ಮಾತಾಡದಿದೆ, ಮೊದಲು, ನಿಮ್ಮಮ್ಮಂದು ಒಂದಿಷ್ಟು ಸೀರೆ ಒಡವೆಗಳಿವೆ, ಸುಮ್ಮನೆ ಹಾಗೆ ಇವೆ ಇಲ್ಲೆ ನಿಮಗೆಲ್ಲ ಕೊಟ್ಟಿಬಿಡೋಣ ಅಂತ ಕರೆದೆ. ಬನ್ನಿ ನೀವೇ ಬಂದು ನಿಮಿಗೆ ಹಿಡಿಸಿದ್ದು ತೊಗೊಳಿ. [ಯಾರು ಬರಲಿಲ್ಲ]ಅಪ್ಪ ಕುಮಾರ ನೀನೆ ಸರಿ ಇದಕ್ಕೆ ಬಾರಪ್ಪ ಇನ್ನು ಮದುವೆ ಆಗಿಲ್ಲ ನೋಡು[ಎಲ್ಲರು ನಕ್ಕರು], ಮದುವೆ ಆದ ಮೇಲೆ ಒಟ್ಟಿಗೆ ಮಾಡಣ ಅಂತಿದ್ದೆ ಇದೆಲ್ಲ ಕೋಡೊದು, ಯಾವಾಗಾಗುತ್ತೆ ಅದು"...[ಎಲ್ಲರು ಜೋರಾಗಿ ನಕ್ಕರು]..."ನೀನೆ ಕೊಡು ಅಪ್ಪಯ" ಎಂದಳು ಅಕ್ಕಯ್ಯ... "ಬೇಡಮ್ಮ ನಾನೆ....[ಎಂದು ಎದ್ದು ಕೈಕಟ್ಟಿಕೊಂಡು ನಿಂತು ಅತ್ತಿಗೆಯನ್ನ] ಬಾರಮ್ಮ ನೀನೇ ಸರಿ ಇದಕ್ಕೆ ಹ್ಯಾಗ್ರಿದ್ರು ಕೆಲಸದಲ್ಲಿ ಲೆಕ್ಕಾಚಾರ ಪುಸ್ತಕ ನೋಡ್ಕೊಳ್ಳೋಳು ನೀನು ಬಾ" ಎಂದು ಕೈಲಿದ್ದ ನಾಕು ಸೀರೆ ನಾಕು ಒಡವೆಗಳನ್ನು ಅತ್ತಿಗೆಗೆ ಕೊಟ್ಟರು. ಅತ್ತಿಗೆ ಅದನೆಲ್ಲ ನೋಡಿ, [ಸೀತಕ್ಕನನ್ನು ಒಮ್ಮೆ ಹಾಗೆ ನೋಡಿ] ಎರಡು ಸೀರೆ ಎರಡು ಒಡವೆಗಳ ಗುಂಪೆರಡನ್ನು ಮಾಡಿ...ಒಂದು ಸೀತಕ್ಕನಿಗೆ...ಇನ್ನೊಂದು ತನಗೆಂದು..."ಮೊನ್ನೆತಾನೆ ನೀವು ಕುಮಾರನಿಗಾಗಿ ತಂದ ಹೊಸ ಟ್ರ್ಯಾಕ್ಟರ್ ಇದಕ್ಕೆ ಸರಿಹೋಗುತ್ತೆ." ಎಂದು ಅಪ್ಪನಿಗೆ ಹೇಳಿದರು...[ಯಾರು ಏನು ನುಡಿಯದ ನಿಶಬ್ದ]..."ಏನೊ ಒಂದು ಬೇಗ ಹಂಚಿ ಮುಗಿಸಮ್ಮ...ಬಂದದ್ದು ಬರಲಿ ಗೋವಿಂದನ ದಯೆ ಇರಲಿ ಅಂದುಕೊಳ್ಳಿ." ಎಂದು ಎದ್ದರು ಅಪ್ಪಯ್ಯ.

"ಅಪ್ಪಯ್ಯ, ಇಷ್ಟೆನಾ, ಏನೊ ಮಾತಾಡ್ಬೇಕು ಅಂತ ಎಲ್ಲಾರ್ನು ಬಾ ಬಾ ಅಂತ ಕರ್ಕೊಂಡುಬಂದೆ." ಎಂದ ಕಾಂತಿ.

"ಹೌದಲ್ಲ, ಸೀರೆದ್ರಲ್ಲಿ ಮುಖ್ಯವಾದದ್ದೆ ಮರ್ತೆ ನೋಡು, ಆಮೇಲೆ ಆಡೋಣ ಬಿಡು ಕಾಂತಿ, ಈಗ ಕರಂಟ್ ಇದ್ದಾಗ ಹೊಲ್ದಲ್ಲಿ ಪಂಪ್ ಹಾಕ್ಬೇಕು ಇಲ್ದಿದ್ರೆ ನಾಳೆ ನೀರಿಗೆ ತೊಂದರೆ, ಬಾರೊ ಕುಮಾರ." ಎಂದು ನನ್ನ ಕರೆದು ತಾವು ಹೊರಟೆಹೋಗಿದ್ದರು.

ಕಾಂತಿಯವರು ಹಳ್ಳಿ ಬಿಟ್ಟು ಹೊರಟ ಸ್ವಲ್ಪ ಹೊತ್ತಿನ ನಂತರ ಅಪ್ಪಯ್ಯ ಸೀತಕ್ಕನನ್ನು ಕರೆದು ಅವಳಿಗೆ ಅತ್ತಿಗೆ ಕೊಟ್ಟಿದ್ದರಲ್ಲಿ ಒಂದು ಸೀರೆ ಹಾಗು ಒಂದು ಒಡವೆಯನ್ನು, "ಇದೆರಡು ಹೊಸ ಸೊಸೆಗಿರಲಿ ಬಿಡಮ್ಮ." ಎಂದು ಹೇಳಿ ತಗೆದಿರಿಸಿಕೊಂಡರು.

"ಸೀತಮ್ಮ ನೋಡಮ್ಮ, ಆ ದೇವರ ಅನುಗ್ರಹದಿಂದ ಕಾಂತಿ ಚೆನ್ನಾಗಿ ಓದಿದ, ಓದಿಸಿದೆ, ಒಳ್ಳೆ ಕೆಲಸಾನು ಸಿಕ್ಕಿತು. ಅಲ್ಲಿಗೆ ಅವನು ಕಚ್ಕೊಂಡ. ಇನ್ನು ನೀನು, ನಿನಗೆ ಒಳ್ಳೆ ಕಡೆ ಮದುವೆ ಮಾಡಿಕೊಟ್ಟಿದಿನಿ, ಇನ್ನು ಅವರ ಮನೆನೆ ನಿನ್ನ ಮನೆ, ಅಲ್ಲಿಗೆ ಸೇರಿದವಳು ನೀನು. ಇನ್ನು ಕೋನೆವ್ನು ಕುಮಾರ, ನೀವಿಬ್ರುನೂ ಹತ್ನೆ ಕ್ಲಾಸಮ್ಮ, ಅದನ್ನು ಸರಿಯಾಗಿ ಮುಗಿಸಲಿಲ್ಲ ಇವನೊಬ್ಬ ದಡ್ಡ; ಅದಕ್ಕೆ ಇವನ್ನ ಹೊಲಕ್ಕೆ ಹಾಕ್ಕೊಂಡೆ ಸ್ವಲ್ಪಾದ್ರು ವ್ಯವಸಾಯ ಬರಲಿ ದುಡಿಮೆಗೆ ಬೇಕಲ್ಲ ಅಂತ; ಎಲ್ಲರಿಗು ಬದುಕ್ಕೊಳ್ಳಕ್ಕೆ ಕೈಲಾದಷ್ಟು ದಾರಿ ಮಾಡ್ಬೇಕಲ್ಲ ತಂದೆ ತಾಯಿಯಾದವ್ರು, ಅದು ನನ್ನ ನಿಮ್ಮಮ್ಮನ ಒಂದು ಜವಾಬ್ದಾರಿ ಕಣಮ್ಮ, ಮುಂದಕ್ಕೆ ನಿಮ್ಮದು ನೀವೇ ನೋಡ್ಕೊತಿರ, ನಾವು ಹಿಂದೆ ಇದ್ದೆ ಇದೀವಿ, ನಿಮ್ಮ ನಿಮ್ಮ ಮನೆಗಳಲ್ಲಿ ಸಂಸಾರಗಳಲ್ಲಿ ಚೆನ್ನಾಗಿ ಸುಖವಾಗಿ ಬಾಳಿ, ಇವನ್ನೊಂದು ಮದುವೆ ಆಗಿಬಿಟ್ರೆ ನಿಶ್ಚಿಂತೆ ಅಷ್ಟೆನಮ್ಮ." ಎಂದ್ದಿದರು.

"ಆದ್ರುನು ಈ ಕಾಂತಿ ಯಾಕೊ ಇತ್ತೀಚೆಗೆ...ವರ್ತ್ನೇನೆ ಸರಿಯಿಲ್ಲ ಅನಿಸುತ್ತೆ...ಆಯಮ್ಮ ನೊಡಿದ್ರೆ ನಾನೇನು ಹೇಳಿದ್ನಾ ಹಂಚು ನಿಮ್ಗೆಲ್ಲ ಅಂತ, ಟ್ರ್ಯಾಕ್ಟರ್ ಕೂಡ ಲೆಕ್ಕಚಾರ ಹಾಕ್ತಯಿದ್ದರೆ, ಸುಮ್ಮನೆ ನೋಡ್ತಾಯಿದ್ದ ನಿಮ್ಮಣ್ಣ, ಒಂದು ಮಾತು...ಬೇಡ ಅಂತ ಒಂದು ಮಾತು ತುಟಿ ಮೇಲೆ ಬರಲಿಲ್ಲ ನೋಡಮ್ಮ....[ತಮ್ಮಷ್ಟಕ್ಕೆ ತಾವೆ ಅಂದುಕೊಳ್ಳುತ್ತ] ಪದೆ ಪದೆ ಮುರ್ಕಲು ಮನೆ ಕೆಡವಿತಿನಿ ಅಂಗಡಿ ಹಾಕ್ತಿನಿ ಅನ್ನೊಕ್ಕೆ ಆಗುತ್ತೆ ಬೇರೆ [ಸಂಶಯದ ಪಾಶಕ್ಕೆ ಸಿಕ್ಕಿಬಿದ್ದಿದ್ದವರ ಹಾಗೆ ಕಂಡು]..."

[ಹಲವು ದಿವಸಗಳ ನಂತರ] ಒಂದು ಸಲ ಅಪ್ಪಯ್ಯನು ನನ್ನನ್ನು ಮನೆಯ ಹೊರಗಡೆ ಕರೆದುಕೊಂಡು ಹೋಗಿ, ನನ್ನ ಕೈಯಿಗೆ ಹೊಲದ ಹಿಡಿ ಮಣ್ಣು ಕೊಟ್ಟು, "ನೋಡಪ್ಪ ಕುಮಾರಾ, ಇದು ನಿನ್ನ ಭಾಗಕ್ಕೆ ಬಲ ಕಣಪ್ಪ, ಉಸಿರು ಕಣಪ್ಪ, ಉಸಿರು ಬೇಸಾಯನೆ ನಿನಗೆ ಭಾಗ್ಯ ನೋಡು ಅವ್ನೇನೇ ಹೇಳ್ಳಿ. ಅವನು ಮನೆ ಕೆಡುವುಬೇಕು ಅಂತಾನಲ್ಲ ನಾನು ಒಪ್ಪಲ್ಲ. ಸಾಲ ಮಾಡಿ ಸುಧಾರಣೆಯಗಬೇಕಿಲ್ಲ ಸಂಪಾದನೆ ಮಾಡಿ ಸುಧಾರಿಸಿ ಅದರ ಬದಲಿಗೆ ಒಪ್ತೀನಿ. ನಿನಗೆ ಒಂದು ಮಾತು, ನೋಡು ಈ ಮನೆ ಈ ಹೊಲ ತುಂಬ ಹಿರಿಯರಿಂದ ನಮಗೆ ಬಂತು, ಅವರುಗಳು ಹಾಳು ಮಾಡ್ಕೊಳ್ದೆ ನಮ್ಮವರೆಗು ಬಿಟ್ಟಿದಾರೆ ನೋಡು, ಅದು ನಮ್ಮ ಪುಣ್ಯ ಅಲ್ಲ ಅದು ಅವರ ಜವಾಬ್ದಾರಿತನ, ಅಯ್ಯಯ್ಯೊ ಅನ್ಬೇಕಾದಾಗ ಇರಲಿ ಅನ್ನೊದನ್ನ ಮನವರಿಕೆ ಮಾಡ್ಕೋಬೇಕು. ನಿಮ್ಮನ್ನೆಲ್ಲ ಅವತ್ತು ಕರೆದಿದ್ದು ಮುಖ್ಯವಾಗಿ ಇದನ್ನೆ ಈ ಮನೆ ಈ ಹೊಲ ಆಸ್ತಿ ಬಗ್ಗೆ ಮಾತಾಡಿ ಒಂದು ಒಳ್ಳೆ ಇತ್ಯರ್ಥ

ಮಾಡೋಣ ಅಂತ, ಏನು ಮಾಡೊದು ಅದಕ್ಕೆ ಬೆಕ್ಕು ಅಡ್ಡ ಬಂದೋಯಿತು. ಕಾಂತಿನ ಪೂರ್ತಿ ಅರ್ಥಮಾಡ್ಕೊಳೊಕ್ಕೆ ಆಗ್ತಯಿಲ್ಲಪ್ಪ ಅಂದುಕೊಂಡಿದ್ದೆ, ಇಲ್ಲ ಅರ್ಥ ಆಗ್ತಾಯಿದನೆ ಆ ಮಹಾನುಭಾವ ಈಗ ಅದಕ್ಕೆ ಸ್ವಲ್ಪ ಕೇಳು, ನೋಡು ನೀನು ಸದಾ ನನ್ನ ನಿಮ್ಮನ್ನ ಇಲ್ಲೆ ಇದ್ದು ನೋಡ್ಕೊಂಡೊನು, ನಿನಗೆ ಅನ್ಯಾಯವಾಗಬಾರದು. ಈ ಮನೆ ಹೊಲದ ಕಥೆ ಈಗ ಯಾಕೆ, ಬಾ ನನ್ನ ತೋಟ ಸ್ವಂತದ್ದು, ನನಗೆ ಇಷ್ಟ ಬಂದಂಗೆ ಬರಿಬೋದು ನಾನು, ಬಾ ಮಗ ಎಲ್ಲ ಸರಿಹ್ಯೊತೈತೆ.'' ಎಂದು ರಿಜಿಸ್ಟ್ರಾರ್ ಆಫಿಸಿನಲ್ಲಿ ಅಪ್ಪಯ್ಯ ಅವರ ತೋಟವನ್ನು ನನಗೆ ದಾನವೆಂದು ಬರೆಸಿದ್ದರು ಅಂದು.

ಶಿವಣ್ಣೊರೆ, ಅದಾದಮ್ಯಾಗೆ ಅಪ್ಪಯ್ಯನ್ನ ಆರೋಗ್ಯ ಕೆಡ್ತಾ ಬಂತು. ಮನಸಲ್ಲಿ ಉತ್ಸಾಹ ಇದ್ದರು ಶರೀರ ತಕ್ಕ ತಾಳ ಹಾಕಿರಲ್ಲಿಲ್ಲ. ಆಗಲೆ ನೀವು ಕೊನೆ ಸಲ ಬಂದಿದ್ದು ನಮ್ಮನೆಗೆ ಶಿವಣ್ಣೊರೆ, ತಲೆ ನೋವು ಜಾಸ್ತಿಯಾಗಿ, ಮನೆ ಮಟ್ಟಿಗೆ ಓಡಾಟಕ್ಕೆ ಮಾತ್ರ ಇಳಿದುಬಿಡ್ತು ಆರೋಗ್ಯ. ಹೀಗೆ ಅಪ್ಪ ಒಂದು ದಿನ ''ಎನೊ ಕೆಟ್ಟ ಘಳಿಗೆ ಕಾದಿದೆ ಕುಮಾರಾ ನಮಗೆ, ಇಲ್ಲಿ ಬಾರಪ್ಪ ಸ್ವಲ್ಪ.'' ಅಂದ್ರು. ''ಕಾಂತಿ ಸಾಧು ಅಲ್ಲಪ್ಪ ಈಗ ಸಾಧು ಅಲ್ಲ. ಒಂದು ವಿಚಾರಪ್ಪ, ನಾನೇನಾದ್ರು ಹೋಗಿಬಿಟ್ಟರೆ, ಈ ಮನೆ ಈ ಹೊಲ ಭಾಗಕ್ಕೆ ಬಂದುಗಿಂದ್ರೆ, ನನ್ನ ಇಚ್ಛೆ ಇಷ್ಟೆ, ಮನೆ ಭಾಗ ಆಗಬಾರ್ದಪ್ಪ ಆಗಬಾರ್ದು. ನೋಡಪ್ಪ ನನ್ನ ಪ್ರಕಾರ ಎಲ್ಲರಿಗು ಸುಖದಲ್ಲಿ ಪಾಲು ಬೇಕು ದುಖದಲ್ಲಿ ಯಾರಿಗು ಬೇಡ! ಏನೇ ಇದ್ದರು ಈ ಮನೆ ಪಾಲಾಗಬಾರದು, ಕೋರ್ಟು ಕಛೇರಿ ಅದೆಲ್ಲ ನನ್ನ ಮಟ್ಟಿಗೆ ಮೈಲಿಗೆ. ಕಳ್ಳ ಪೋಲಿಸರು ಅವರಗೆಲ್ಲ ಸರಿ ಕೋರ್ಟುಗಿರ್ಟು ಎಲ್ಲ ಅಣ್ಣ ತಮ್ಮಂದಿರಿಗಲ್ಲ, ಸಂಬಂದಿಗಳಿಗಲ್ಲ ಕಣಪ್ಪ. ಕೋರ್ಟು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ವಕೀಲರು ಹೇಳೊದರ ಮೇಲೆ ಒಂದು ತೀರ್ಪು ಕೊಟ್ಟಿಬಿಟ್ಟರೆ ಮುಗೀತೆ? ಆ ತೀರ್ಪಿನಿಂದ ಎಷ್ಟರ ಮಟ್ಟಿಗೆ ಸೌಹಾರ್ದದಿಂದ ಇರಬಹುದು ಆಮೇಲೆ ಅನ್ನೋದು ಯೋಚನೆ ಮಾಡಿ ನ್ಯಾಯ ನೀಡೋದು ಮುಖ್ಯ ಅಲ್ವೆ ಸಂಬಂಧಗಳಲ್ಲಿ. ಅದಕ್ಕೆ ಏನೆ ಬರಲಿ ಆ ಕಡೆ ನೀವಿಬ್ಬರು ತಲೆ ಹಾಕಬೇಡಿ, ಅಲ್ಲಿ ಹೋದ್ರೆ ನ್ಯಾಯಯೆನೊ ಕೊಡುತ್ತೆ ಆದರದು ನೆಮ್ಮದಿ ಕಿತ್ತುಕೊಂಡು ಕೊಡೊ ನ್ಯಾಯನಪ್ಪ, ಕೋರ್ಟಿಗೆ ಸಂಬಂಧಗಳ ಸೂಕ್ಷ್ಮ ಅರ್ಥ ಆಗೊ ಸ್ಥಿತಿಲಿಲ್ಲಪ್ಪ ಆ ವ್ಯವಸ್ತೆ, ನಿಮ್ಮಗಳಿಂದಲೆ ನಿರ್ಧಾರ ಆಗಬೇಕು ಇಂತದ್ದು. ಅದಕ್ಕೆ ನನ್ನ ಅಭಿಪ್ರಾಯ ಇಷ್ಟೆ. ಅವನೇನಾದ್ರು ಪಾಲಿಗೆ ನಿಂತರೆ ಅಂಗಡಿ ಗಿಂಗಡಿ ಅಂತ, ಅದನ್ನ ಬಿಟ್ಟುಬಿಡು ಅತ್ಲಾಗೆ, ನಾನು ಕೊಟ್ಟಿರೊ ತೋಟ್ದಾಗೆ ಒಂದು ಮನೆ ಕಟ್ಟಿಸು. ಇಲ್ಲಿರೊ ಹೊಲದಲ್ಲಿ ಬೇಸಾಯ ಮಾಡಿ ಬದುಕು, ಅವನಿಗೇನು ಬೇಸಾಯ ಬರಲ್ಲ ಏನಿಲ್ಲ, ಬಂದಿದ್ರಲ್ಲಿ ಅವನಿಗು ಒಂದೆರಡು ಕಾಳು ವರ್ಷಕ್ಕೊಂದೆರಡು ಸಲ ಕಳಿಸು. ಇಬ್ಬರು ಸಂತೋಷ್ವಾಗಿ ಅಣ್ಣ ತಮ್ಮಂದಿರ ಹಾಗಿರಿ ಅಷ್ಟೆಸಾಕು ತಿಳಿತ, ಇಷ್ಟರ ಮೇಲೆ ನಿಮ್ಮಿಷ್ಟ.'' ಎಂದಿದ್ದರು. ಇದೆಲ್ಲ ಅಪ್ಪನ ಬಾಯಲ್ಲೆ ಅಣ್ಣ ಕೇಳಿದ್ದರೆ ಎಷ್ಟೊ ಚೆನ್ನಾಗಿರತಿತ್ತು. ಅವನು ಬರೋ ಹೊತ್ತಿಗೆ ಅಪ್ಪನಿಗೆ ಹೇಳೊಕ್ಕಾಗ್ತಾಯಿರಲಿಲ್ಲ, ಅಪ್ಪ ಹೇಳಿದೆಲ್ಲ ನಾನೆ ಅವನಿಗೆ ಹೇಳ್ದೆ, ನಾನು ಹೇಳಿದ್ರಲ್ಲಿ ಅವನಿಗೆ ಒಳನಂಬಿಕೆ ಇಲ್ಲ. ಅಪ್ಪ ಹೋಗಿ ಏರಡೆ ವಾರಕ್ಕೆ ಭಾಗ ಅಂತಾನಲ್ಲ ಶಿವಣ್ಣೊರೆ ಅವನು, ಸಿಟ್ಟು ಬಂತು ಸುಮ್ಮಿದ್ದೆ.

ಮುಂದೇನು ಹಾಗಾದರೆ ಎಂದ?

ನೋಡಪ್ಪ ಅಪ್ಪನ ಮಾತಿಗೆ ಗೌರವ ಕೊಡಬೇಕು ಭಾಗ ಗೀಗ ಬೇಡ ಕಣೊ ಅಂದ್ರೆ ಅದೆಲ್ಲ ಬೇಡ್ವಂತೆ ಅವನಿಗೆ. ''ಈ ಮನೆ ನೀನೆ ಇಟ್ಕೊ ನನಗೆ ಹೊಲ ಇರಲಿ.'' ಅಂದೆ, ''ಬಂದಿದ್ರಲ್ಲಿ ಅರ್ಧ ಕೊಡ್ತ್ಯ ಹೊಲದಲ್ಲಿ'' ಅಂತಾನೆ? ಎಲ ಇವ್ನಾ ಮುಖ್ಯವಾಗಿ ದುಡಿಯೊದು ನಾನೊಬ್ಬನೇ, ದರ್ಬಾರ್ ಮಾತ್ರ? ಹೋಗ್ಲಿ ಅಪ್ಪ ಹೇಳಿದ್ದು ಚೆನ್ನಾಗಿ ಗ್ಯೆಪ್ತಿಲಿತ್ತು, ಅಣ್ಣ ತಾನೆ ಅಂತ ಅದುಕ್ಕೂ ಆಗಲಿ ಅಂತ ಒಪ್ಪಿಕೊಂಡೆ, ಆಯಿತು ಕೆಲಸ ಇದೆ ಇನ್ನಿಲ್ಲಿರಕ್ಕಾಗಲ್ಲ ರಜೆಯಿಲ್ಲ ಅಂತ ಇಲ್ಲಿಂದ ಕೊನೆಗು ಇತ್ಯರ್ಥ ಮಾಡ್ಕೊಂಡು ಹೋದ, ನನಗುಳಿದಿದ್ದು ಕೊಂಚೆಯಾದರು ಒಪ್ಪಿಕೊಂಡೆ, ಆಗ ಅಯ್ಯೊ ಈಗಿರೊ ಮನೆ ಬಿಟ್ಟು ಹೊಸ ಮನೇನ ಕಟ್ಟಿಕೊಳ್ಳೊ ದೊಡ್ಡ ಆತಂಕದ ಎದುರು ನಿಂತಿದ್ದೆ. ಅಪ್ಪಯ್ಯ ಎಷ್ಟೊಂದು ನನ್ನ ಇವನ ಬಗ್ಗೆ ಹಿಂದನೇ ಯೋಚಿಸಿದ್ದರು, ಇವನು ತರಲೆ ಇಂತಹ ಜಿರಳೆ ಅಂತ ಆಲೋಚಿಸಿ ತೋಟ ಬರೆದಿಟ್ಟ ಅವರ ಜಾಣತನದ ನೆನಪೊಂದೆ ನನ್ನ ಬಲವಾಗಿತ್ತು.

ಕುಮಾರಪ್ಪ, ಆಟ ಆಟ ಆಡ್ತಾಯಿದನಲ್ಲಪ್ಪ ಅಣ್ಣ ತಮ್ಮಂದ್ರಲ್ಲೆ ಇವನು, ಹೋಗಲಿ ಬಿಡು ನಿನಗೆ ಏನು ಸಹಾಯ ಬೇಕೊ ಈ ಶಿವಣ್ಣನ ಕೇಳು ನಾನು ಮಾಡ್ತಿನಿ, ನಿನಗೆ ದಾರಿ ಕಾಣುಸ್ತಿನಿ.

ಬರಿ ಆಟ ಅಲ್ಲ ಶಿವಣ್ಣೊರೆ ಪಗಡೆ ಇದು, ದುಡ್ಡಿಗೆ ತಮ್ಮನತ್ರನೆ ಪಗಡೆ, ಆಸಾಮಿ ಇಲ್ಲಿಂದ ಎಲ್ಲ ಒಪ್ಪಿಕೊಂಡು ಹೊದ್ನಾ ವಾಪಸ್ಸು, ಇಗ ಕೋರ್ಟ್ ನೋಟಿಸ್ ಬಂದಿದೆ ತೊಗೊಳಿ ನನಗೆ! ಇದನ್ನ ನೋಡಿದ್ರೆ ಕೋಪದಲ್ಲಿ ಕಿರುಚ್ಕೊಬೇಕೊ ಪರುಚ್ಕೊಬೇಕೊ ಯಾವುದು ಗೊತ್ತಾಗಲ್ಲ. ದೊಡ್ಡ ವ್ಯವಹಾರದಲ್ಲಿ ನ್ಯಾಯ ಕಳ್ಕೊಂಡವರಿಗೆ ಮಾತ್ರ ಕೋರ್ಟ್ ಕಟ್ಟೆ ಅಂದುಕೊಂಡಿದ್ದೆ ಇವನು ಇಷ್ಟಕೆಲ್ಲ ನಮ್ ನಮ್ಮಲ್ಲೆ ಕೋರ್ಟ್ ಹತ್ತಾನೆ ಅಂತ ಅನಿಸಿರಲಿಲ್ಲ. ಅಪ್ಪಯ್ಯ ನನ್ನ ಹೆಸರ್ನಗೆ ಅವತ್ತು ದಾನ ಬರ್ಸಿದ್ರಲ್ಲ ಅವರ ತೋಟನ, ಅವನಿಗೆ, ಅಕ್ಕನಿಗೆ ಅದರಲ್ಲಿ ಪಾಲೈತಂತೆ ಅದು ಕೂಡ ಪಿತ್ರಾರ್ಜಿತ ಅಂತ ಯೇನೋ ಆಗುತ್ತಂತೆ, ಅಪ್ಪನಿಗೆ ಬೇರೆ ಆದಾಯ ಇರಲಿಲ್ಲವಂತೆ ಸ್ವಂತವಾಗಿ ತೋಟ–ಗೀಟ ಮಾಡೊದಕ್ಕೆ, ಈ ಮನೆ ಹೊಲದಲ್ಲಿ ಗಳಿಸಿದ್ರಲ್ಲಿ ತೋಟ ಕೊಂಡಿರ್ತಾರೆ ಆದ್ದರಿಂದ ಅದು ಪಾಲಾಗಬೇಕು ಅನ್ನುತ್ತೆ ನೋಡಿ ಅವನ ಈ ನೋಟಿಸ್! ಅಲ್ಲ ಅವನಿಗೆ ಮುರ್ಕಲು ಮನೆ ಸಾಲ್ದು ಅಂತ ನನಗೆ ಹರ್ಕಲು ಬಟ್ಟೆ ಬೇರೆ ಹಾಕಬೇಕು ಅನ್ನೊ ತಕ್ರಾರು ಅವುಂದು ಈಗ!

ಇನ್ನು ಸುಮ್ಮನೆ ಕುರಿಯಾಗಿದ್ದರೆ ಉಳಿಗಾಲ ಇಲ್ಲಪ್ಪ ಕುಮಾರಪ್ಪ ನಿನಗೆ, ನರಿ ಮೈಮರೆಸಿ ಬಾಗ್ಲಿಗೆ ಬಂದ್ಬಿಟ್ಟಿದೆ, ಚಲವಿರಲಿ ಮಗ ಅದ್ಯೇನು ಮಾಡ್ಬೆಕೊ ಆಲೊಚ್ಸು, ಹೆದರದೆ ಮಾಡು ಈ ಅನ್ಯಾಯ ಹೊರಾಡಕ್ಕೆ, ಅವನ ಬುದ್ದಿಗಷ್ಟು!

***

**Kleinberg Benefits Inc. (KBI)**
**Employee Benefits Brokerage & Consulting**

KBI is a premier benefits brokerage firm in the Silicon Valley. For over twelve years, KBI has brought expertise to small and mid-size clients nationwide, based on experience, integrity, responsibility and service. We are committed to continue to build our business on these principles.

Our services include:

- HR/Benefits Support and Services
- Carrier Negotiation and Placement
- Employee Communications
- Online Enrollment and Administration
- Federal and State Benefit Compliance
- Mergers and Acquisitions

When it comes to your employee benefits and employer needs, KBI will provide unparalleled service and the tools to simplify the benefits process.

Please contact us for further information.

**Mike Radakovich**
**President, KBI Benefits**
**p: 408-366-8882**
**f: 408-366-8888**
**c: 415-730-4234**
**www.kbibenefits.com**

ಲೇಖನ

ಎಲ್ಲ ಗಂಡಸರೂ ಮದುವೆ ಆಗಲೇಬೇಕಂತೆ. ಯಾಕೆ ಅಂದ್ರೆ...

ರಾಮಪ್ರಸಾದ್ ಕೆ. ವಿ.
ಕ್ಯಾಲಿಫೋರ್ನಿಯ



# ಹೆಂಡತಿಯೊಬ್ಬಳು ಮನೆಯೊಳಗಿದ್ದರೆ...

ಮೈಸೂರು ಮಲ್ಲಿಗೆಯ ಸೊಗಸನ್ನು ತಮ್ಮ ಕವಿತೆಗಳ ಮೂಲಕ ಕನ್ನಡಿಗರಿಗೆ ಕೊಟ್ಟ ಕೆ.ಎಸ್.ನರಸಿಂಹಸ್ವಾಮಿಯವರಿಗೆ, "ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಅದೇ ಕೋಟಿ ರೂಪಾಯಿ" ಅನ್ನೋದು ನಮ್ಮೆಲ್ಲರಿಗೂ ಗೊತ್ತು. ಮೈಸೂರು ಅನಂತಸ್ವಾಮಿಯವರಿಗೂ ಹಾಗೇ ಇದ್ದಿರಬೇಕು ಅನ್ನಿಸುತ್ತೆ. ಇಲ್ಲದಿದ್ದರೆ ಅವರಿಗೆ ಆ ಹಾಡನ್ನು ಅಷ್ಟು ಚೆನ್ನಾಗಿ ಹಾಡಲು ಸಾಧ್ಯವೇ ಆಗುತ್ತಿರಲಿಲ್ಲ, ಅನ್ನುವುದು ನನ್ನ ಅಭಿಪ್ರಾಯ. ನಾನೂ ಅವರಂತೆ ಒಂದು ಹೊಸ ಕವಿತೆ ಬರೆಯೋಣವೆಂದು ನೋಡಿದ್ದೇನೆ. ಆದರೆ, ನಾನು ಕೆ.ಎಸ್.ನ. ಅವರಂತೆ ಕವಿಯಾಗಲಿಲ್ಲವೇ? ನನಗೆ ಅನ್ನಿಸೋ ತರಹ, ಹಾಗು ನನ್ನಂತೆ ಎಷ್ಟೋ ಜನಗಳಿಗೂ ಅದೇ ಭಾವನೆಯಿದ್ದರೂ, ಇದೇ ಸಮಸ್ಯೆಯ ಕಾರಣದಿಂದ ಆ ರೀತಿ ಹೊಸ ಪದ್ಯಗಳನ್ನು ಹಾಡಿಲ್ಲ ಅಂತ ಕಾಣುತ್ತೆ. ಇದು ಒಂದು ತರಹ ಒಳ್ಳೆಯದೇ ಆಯಿತು. ಇಲ್ಲದಿದ್ದರೆ, ಮೈಸೂರ ಮಲ್ಲಿಗೆಗೆ ತಕ್ಕಷ್ಟು ಪ್ರಖ್ಯಾತಿ ಬರುತ್ತಲೇ ಇರಲಿಲ್ಲವೇನೋ! ಶಾಂತಂ ಪಾಪಂ! ಅಂತಹ ದೊಡ್ಡ ಕವಿಗಳಿಗೆ ಎಷ್ಟು ಅನ್ಯಾಯವಾಗಿಬಿಡುತ್ತಿತ್ತು, ಅಲ್ಲವೇ?

ಅದಿರಲಿ, ನರಸಿಂಹ ಸ್ವಾಮಿ ಅವರು ಹೀಗೆ ಹೊಗಳೋದಕ್ಕೂ, ಕವಿತೆಯನ್ನು ಬರೆಯಲು ಬರದಂತಹ ನಮ್ಮ-ನಿಮ್ಮಂತಹವರು ಹೆಂಡತಿಯನ್ನು ಹೊಗಳಲು ಪ್ರಯತ್ನಿಸೋದಕ್ಕೂ, ಹೆಂಡತಿಯರ ಯಾವ ಗುಣ ಕಾರಣವಾಗಿರಬಹುದು? ನಿಜ ಹೇಳಬೇಕೆಂದರೆ, ಮನೆಯ ಒಡತಿ ಸರಿ ಇಲ್ಲದಿದ್ದರೆ, ಮನೆ ಮೂರಾಬಟ್ಟೆಯಾಗಿರುವ ಎಷ್ಟೋ ಸಂಸಾರಗಳಿವೆ. ಅಂದ ಹಾಗೆ, ಹೆಂಡತಿ ಎಂದರೆ ಹೆಣ್ಣು ಒಡತಿ ಅಂತಲೇ? ಒಡತಿ ಅಂದಮೇಲೆ ಹೆಣ್ಣೇ ಆಗಿರಬೇಕಲ್ಲವೇ? ಹಾಗಾದರೆ, ಹೆಣ್ಣು ಒಡತಿ ಅಂತ ಹೇಳಬೇಕಾದ ಅವಶ್ಯಕತೆ ಏನಿದೆ? ಒಡತಿಯ ರೀತಿನೀತಿ ನೋಡಿ ಅನುಮಾನ ಪಡಬೇಡಿ ಅಂತಲೇ? ಇದನ್ನು ಯಾರಾದರೂ ವ್ಯಾಕರಣ ಚೆನ್ನಾಗಿ ತಿಳಿದವರನ್ನು ವಿಚಾರಿಸಬೇಕಷ್ಟೇ! ಅದು ಹಾಗಿರಲಿ, ನಿಜ ಹೇಳಬೇಕೆಂದರೆ ದಾರಿತಪ್ಪುತ್ತಿದ್ದ ಗಂಡಸರನ್ನು ಸರಿದಾರಿಗೆ ತಂದವರು ಹಲವರು ಹೆಂಡಿರಾದರೆ, ಮತ್ತೆ ಸರಿಯಾದ ದಾರಿಯಲ್ಲೇ ಇದ್ದವರನ್ನು ಇನ್ನೂ ಸಾಧಕರನ್ನಾಗಿ ಮಾಡಿದವರು ಇನ್ನಷ್ಟು ಹೆಂಡಿರು. ಯಾವ ಕಲಾವಿದ, ಸಾಹಿತಿಯನ್ನು ತೆಗೆದುಕೊಂಡರೂ, ಅವರ ಯಶಸ್ಸಿನ ಹಿಂದೆ ಅವರವರ ಹೆಂಡತಿಯರ ಭಾರೀ ಕೈವಾಡವಿರುತ್ತದೆ. ಹಿಂದೆ ಸಾಕ್ರೆಟಿಸ್ ಅದಕ್ಕೇ ಹೇಳಿದ್ದು ಅಂತ ಕಾಣುತ್ತೆ, "ಎಲ್ಲ ಗಂಡಸರೂ ಮದುವೆ ಆಗಲೇಬೇಕು. ಯಾಕೆ ಅಂದ್ರೆ, ಒಳ್ಳೇ ಹೆಂಡತಿ ಸಿಕ್ಕರೆ, ಜೀವನ ಉದ್ಧಾರ ಆಗುತ್ತೆ, ಕೆಟ್ಟ ಹೆಂಡತಿ ಸಿಕ್ಕರೆ ತನ್ನಂತೆ ತತ್ವಜ್ಞಾನಿ ಆಗಬಹುದು!" ಅಂತೂ ಎಲ್ಲಾ ಹೆಂಡತಿಯರ ಮಹಿಮೆ ಅನ್ನೋದರಲ್ಲಿ ಅನುಮಾನವೇ ಇಲ್ಲ. ರಾಮಕೃಷ್ಣ ಪರಮಹಂಸ ಅವರ ಜೀವನದಲ್ಲಿ ಅವರ ಹೆಂಡತಿ ಶಾರದಾದೇವಿ ಅವರ ಪಾತ್ರ, ಮಹಾತ್ಮಾ ಗಾಂಧಿಯವರಿಗೆ ಹೆಜ್ಜೆ ಹೆಜ್ಜೆಯಲ್ಲೂ ನೆರಳಾಗಿದ್ದ ಕಸ್ತೂರಬಾ ಮೊದಲಾದವರ ವಿಷಯಗಳೆಲ್ಲ ನಾವು ಕೇಳಿ ತಿಳಿದವುಗಳೇ ಆಗಿವೆ.

ಆದಿಕವಿ ವಾಲ್ಮೀಕಿಯ ಕಥೆಯನ್ನೇ ತೆಗೆದುಕೊಳ್ಳೋಣ. ಮೊದಲು ಅವನು ಕಾಡುಮೇಡುಗಳಲ್ಲಿ ದಾರಿಹೋಕರ ತಲೆ ಒಡೆಯುವ ದರೋಡೆಕೋರನಾಗಿದ್ದನಂತೆ. ತಾನು ಮಾಡುತ್ತಿರುವುದೆಲ್ಲ ತನ್ನ ಹೆಂಡಿರುಮಕ್ಕಳಿಗಾಗಿ; ಹಾಗಾಗಿ, ತನ್ನ ಸಂಪಾದನೆಯಲ್ಲಿ ಅವರಿಗೆ ಹೇಗೆ ಪಾಲಿದೆಯೋ ಹಾಗೇ ತನ್ನ ಪಾಪಕಾರ್ಯದಲ್ಲೂ ಅವರಿಗೆ ಪಾಲು ಇದ್ದೇ ಇದೆ ಎಂದು ಎಣಿಸಿದ್ದ ಪಾಪ! ಆದರೆ, ಒಮ್ಮೆ ಈ ವಿಷಯವಾಗಿ ಹೆಂಡತಿಯನ್ನು ಕೇಳಬೇಕಾಗಿ ಬಂತು. ಆ ಮಹಾತಾಯಿ "ಗಂಡನಾಗಿದ್ದು ನೀನು ನಮ್ಮನ್ನು ಸಾಕುವುದು ನಿನ್ನ ಧರ್ಮ. ಹಾಗೆಂದು, ನೀನು ಸಿಕ್ಕಸಿಕ್ಕವರ ಕೊಲೆಮಾಡಿದರೆ, ಆ ಪಾಪವನ್ನೆಲ್ಲ ಅನುಭವಿಸಲು ನನ್ನದೇನು ಕರ್ಮ?" ಎಂದು ಕೇಳೇಬಿಟ್ಟಳು. ಭ್ರಮೆಯಿಂದ ಮುಕ್ತನಾದ ಅವನು ತನ್ನ ಮೇಲೆ ಹುತ್ತವೇ ಬೆಳೆದುಕೊಳ್ಳುವಷ್ಟು ಭಾರೀ ತಪಸ್ಸು ಮಾಡಿ, ಮಹಾ ಜ್ಞಾನಿಯಾಗಿ ವಾಲ್ಮೀಕಿ ಅನ್ನುವ ಹೆಸರು ಪಡೆದ. ನಂತರ ರಾಮಾಯಣದಂತಹ ಮಹಾ ಕಾವ್ಯವನ್ನೂ ಬರೆದ. ಈಗ ನೋಡಿ, ಅವನ ಹೆಂಡತಿ ಅವನಿಗೆ ಬೇರೇನಾದರೂ ಉತ್ತರ ಕೊಟ್ಟಿದ್ದಿದ್ದರೆ, ರಾಮಾಯಣದಂತಹ ಕೃತಿ ನಮಗೆ ಸಿಗುತ್ತಿತ್ತೋ ಇಲ್ಲವೋ! ಅಲ್ಲವೇ? ಹೆಂಡತಿಯ ಮಹಿಮೆ ಈಗ ನಿಮಗೆ ಕಂಡಿತೋ ಇಲ್ಲವೋ?

ವಾಲ್ಮೀಕಿಯಿಂದ, ಸ್ವಲ್ಪ ನಮ್ಮ ಕಾಲದ ಕಡೆಗೆ ಬರೋಣ. ಹೆಂಡತಿಯಿಂದ ಭಾರೀ ಬದಲಾವಣೆ ಹೊಂದಿ, ಅದರಿಂದ ಕನ್ನಡ ಸಾಹಿತ್ಯಕ್ಕೂ, ಕರ್ನಾಟಕ ಸಂಗೀತಕ್ಕೂ ಅಸಾಮಾನ್ಯ ಕೊಡುಗೆ ಕೊಟ್ಟವರು ಪುರಂದರದಾಸರು. ಚಿನ್ನದ ವ್ಯಾಪಾರ ಮಾಡುತ್ತಿದ್ದ ಶ್ರೀನಿವಾಸ ನಾಯಕನನ್ನು ಪುರಂದರದಾಸರನ್ನಾಗಿ ಬದಲಾಯಿಸುವಲ್ಲಿ ಕೆಲಸಮಾಡಿದ ಅವರ ಹೆಂಡತಿ ಸರಸ್ವತೀಬಾಯಿಯ ಮೂಗುತಿಯ ಕಥೆ ಎಲ್ಲರಿಗೂ ಗೊತ್ತು. ಇದರ ಸತ್ಯಾಸತ್ಯತೆಗಳನ್ನು ಬದಿಗಿಟ್ಟರೂ, ಹೆಂಡತಿಯೇ ತನ್ನ ಬದಲಾವಣೆಗೆ ಪ್ರಮುಖ ಕಾರಣವಾದದ್ದನ್ನು ಪುರಂದರ ದಾಸರೇ ಒಂದು ಕೀರ್ತನೆಯಲ್ಲಿ ಹೀಗೆ ಹೇಳುತ್ತಾರೆ:

**ಪಲ್ಲವಿ:**
ಆದದ್ದೆಲ್ಲ ಒಳಿತೆ ಆಯಿತು ನಮ್ಮ ।
ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು ॥

**ಚರಣಗಳು:**
ದಂಡಿಗೆ ಬೆತ್ತ ಹಿಡಿಯುವುದಕ್ಕೆ ಮಂಡೆ ಮಾಚಿ ನಾಚುತಿದ್ದೆ ।
ಹೆಂಡತಿ ಸಂತತಿ ಸಾವಿರವಾಗಲಿ ದಂಡಿಗೆ ಬೆತ್ತ ಹಿಡಿಸಿದಳಯ್ಯ ॥

ಗೋಪಾಳ ಬುಟ್ಟಿ ಹಿಡಿಯುವುದಕ್ಕೆ ಭೂಪತಿಯಂತೆ ಗರ್ವಿಸುತಿದ್ದೆ ।
ಆ ಪತ್ನೀ ಕುಲ ಸಾವಿರವಾಗಲಿ ಗೋಪಾಳ ಬುಟ್ಟಿ ಹಿಡಿಸಿದಳಯ್ಯ ॥

ತುಳಸಿ ಮಾಲೆಯ ಹಾಕುವುದಕ್ಕೆ ಅರಸನಾಗಿ ನಾಚುತಿದ್ದೆ ।
ಸರಸಿಜಾಕ್ಷ ಪುರಂದರ ವಿಠಲನು ತುಳಸಿ ಮಾಲೆ ಹಾಕಿಸಿದನಯ್ಯ ॥

ಈ ರಚನೆಯಲ್ಲಿ ತಮಗೆ ಹರಿದಾಸನಾಗಲು ಪ್ರೇರೇಪಿಸಿ, ಸರಿದಾರಿಗೆ ಹಚ್ಚಿದ ತಮ್ಮ ಹೆಂಡತಿಯನ್ನು ಪುರಂದರದಾಸರು, ಆ ಪತ್ನೀ ಕುಲ ಸಾವಿರವಾಗಲಿ ಎಂದು ಮನಃಪೂರ್ತಿಯಾಗಿ ಸ್ಮರಿಸಿದ್ದಾರೆ. ಹೀಗಾಗಿ, ಮೂಗುತಿ, ಮುದುಕ ಬ್ರಾಹ್ಮಣನ ಕಥೆ ಏನೇ ಇರಲಿ, ಆಕೆ ತನ್ನ ಗಂಡನ ಮನಸ್ಸು ಹರಿದಾಸನಾಗುವ ಕಡೆ ಹರಿಸುವುದಕ್ಕೆ ಕಾರಣವಾದವರೆಂಬುದು ಖಂಡಿತ ಎಂದು ತಿಳಿಯುತ್ತದೆ. ಪುರಂದರ ದಾಸರು ಆ ಮಟ್ಟದಲ್ಲಿ ಸಂಗೀತ ಹಾಗೂ ಸಾಹಿತ್ಯದಲ್ಲಿ ಸಾಧನೆ ಮಾಡಲು, ದಾಸರಾಗುವ ಮೊದಲಿನಿಂದಲೂ ಅವರಿಗೆ ಈ ವಿಷಯಗಳಲ್ಲಿ ತಕ್ಕ ಮಟ್ಟಿಗೆ ಪ್ರೌಢಿಮೆ ಇದ್ದು, ನಂತರ ಇದನ್ನೆ ಅವರು ಪ್ರಮುಖ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದರಿಂದ ಸಾಧ್ಯವಾಯಿತು ಎಂದೇ ಅಂದುಕೊಳ್ಳೋಣ. ಹಾಗಿದ್ದರೂ, ವ್ಯಾಪಾರದ ಮೇಲೆ ಹೆಚ್ಚು ಗಮನ ಹರಿಸುತ್ತಿದ್ದಿರಬಹುದಾದ ಅವರಿಗೆ, ಹೆಂಡತಿಯ ಪ್ರೇರೇಪಣೆ ತಮ್ಮ ವ್ಯಾಪಾರದಿಂದ ವಿಮುಖರಾಗಿ, ಹೊಸ ಹಾದಿಯನ್ನು ತುಳಿಯುವಂತೆ ಮಾಡಿದ್ದು ಕನ್ನಡಿಗರೆಲ್ಲರ ಭಾಗ್ಯ ಎನ್ನಬೇಕು.

ಈಗ ಇನ್ನೂ ಸಾವಿರ ವರ್ಷಗಳಷ್ಟು ಹಿಂದೆ ಹೋಗೋಣ. ಸಂಸ್ಕೃತ ಕವಿಗಳ ಮುಂಚೂಣಿಯಲ್ಲಿರುವವನು ಕಾಳಿದಾಸ. ವಾಲ್ಮೀಕಿ, ಪುರಂದರ ದಾಸರ ಹಾಗೆ, ಸಂಸ್ಕೃತದ ಮಹಾಕವಿ ಕಾಳಿದಾಸನೂ ಇಂತಹ ದಂತಕಥೆಯೊಂದಕ್ಕೆ ಪಕ್ಕಾದವನೇ. ಅಸಾಮಾನ್ಯವಾದ ಸಾಧನೆ ಮಾಡಿರುವವರ ಹಿಂದೆ, ಅವರಿಗೆ ಅಮಾನುಷ ಶಕ್ತಿಗಳು ದೊರಕಿದ್ದವು ಎಂದು ಹೇಳುವ ಕಥೆಗಳು ಇರುವುದು ನಮಗೆ ಈಗಾಗಲೇ ನೋಡಿ–ಕೇಳಿ ಗೊತ್ತಿರುವ ಸಂಗತಿ.

ರಾಜಕುಮಾರಿಯೊಬ್ಬಳು ತನ್ನ ಮಗನನ್ನು ಮದುವೆಯಾಗೊಲ್ಲಳು ಎಂಬ ರೊಚ್ಚಿನಿಂದ, ಮಂತ್ರಿ ಏನೂ ಅರಿಯದ ಅವಿದ್ಯಾವಂತನೊಡನೆ ಅವಳ ಮದುವೆಯನ್ನು ಮೋಸದಿಂದ ಮಾಡುತ್ತಾನೆ. ಮದುವೆಯ ದಿನ ರಾತ್ರಿ ಗಂಡನನ್ನು ಏಕಾಂತದಲ್ಲಿ ಕಂಡ ರಾಜಕುವರಿ "ಅಸ್ತಿ ಕಶ್ಚಿತ್ ವಾಗ್ವಿಶೇಷಃ?" ಎಂದು ಕೇಳುತ್ತಾಳೆ. ಏನಾದರೂ ಸೊಗಸಾಗಿರುವ ಮಾತಿದೆಯೇ? ಇದ್ದರೆ ಆಡು ಎಂಬರ್ಥದಲ್ಲಿ. ಗಂಡ ಬ್ಬೆಬ್ಬೆಬ್ಬೆ ಎಂದು ತಡವರಿಸುವುದನ್ನು ಕಂಡಾಗ ತಾನು ಮೋಸ ಹೋದದ್ದು ಅವಳಿಗೆ ಅರಿವಾಗುತ್ತದೆ. ಅವಳು ಗಂಡನನ್ನು ಕಾಳಿಯ ಗುಡಿಗೆ ಕಳಿಸಿ, ಅವಳಿಂದ ವಿದ್ಯಾಭಿಕ್ಷೆಯನ್ನು ಕೇಳಲು ಹೇಳುತ್ತಾಳೆ. ಕಾಳಿಯ ಕೃಪೆಗೆ ಪಾತ್ರನಾದ ಗಂಡ, ಹೆಂಡತಿಯನ್ನೂ ಮರೆತು, ದೇಶಾಂತರ ಹೋಗಿ ಕಾಳಿದಾಸನೆಂಬ ಹೆಸರಿನಲ್ಲಿ ಪ್ರಖ್ಯಾತನಾಗುತ್ತಾನೆ.

ಪಾಪ, ಕಾಳಿದಾಸನಿಗೆ ಹೆಂಡತಿಯೇ ಮರೆತು ಹೋದರೂ, ಅವಳು ಕೇಳಿದ ಪ್ರಶ್ನೆ ಕಿವಿಯಲ್ಲಿ ಗುಞ್ ಗುಡುತ್ತಿತ್ತೇನೋ! ಅದಕ್ಕೆ ಅವನು ಈ ಪದಗಳಿಂದಲೇ ಪ್ರಾರಂಭವಾಗುವ ಕಾವ್ಯಗಳನ್ನು ಬರೆದನಂತೆ. ಕಾಳಿದಾಸನ ಕೃತಿಗಳನ್ನು ನೋಡಿದ ನಂತರ, ಆದರ ಮೊದಲಲ್ಲಿ ಬರುವ ಪದಗಳನ್ನು ಉಪಯೋಗಿಸಿ, ರೋಮಾಂಚಕವಾದ ಕಥೆಯನ್ನು ಹೆಣೆಯಲಾಗಿದೆ ಎಂದು ನನ್ನ ಅನಿಸಿಕೆ. ಅದೇನೇ ಇರಲಿ, ಈ ಮೂರು ಶ್ಲೋಕಗಳನ್ನು ಇಲ್ಲಿ ನೋಡೋಣ. ಕಾಳಿದಾಸನ ಕುಮಾರಸಂಭವ ಎಂಬ ಮಹಾಕಾವ್ಯ ಈ ಪದ್ಯದಿಂದ ಪ್ರಾರಂಭವಾಗುತ್ತದೆ:

ಅಸ್ತ್ಯುತ್ತರಸ್ಯಾಮ್ ದಿಶಿ ದೇವತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ ।
ಪೂರ್ವಾಪರೌ ತೋಯನಿಧೀವಗಾಹ್ಯ ಸ್ಥಿತಃ ಪೃಥಿವ್ಯಾ ಇವ ಮಾನದಂಡಃ ॥

ಬಡಗು ದಿಕ್ಕಲಿ ಇಹ ದೇವತಾತ್ಮನವ
ಒಡೆಯ ಬೆಟ್ಟಂಗಳಿಗೆ ಹೆಸರೋ ಹಿಮಾಲಯ ।
ಕಡಲೆರಡೂ ಕಡೆಯಲ್ಲು ಇರಿಸಿ ಮೊದಲು
ನಡುವೆ ತಾ ನಿಂತನು ಅಳತೆಗೋಲಿನ ತೆರದಿ ॥
(ಅನುವಾದ ನನ್ನದು)

ಕಾಳಿದಾಸನಿಗೇನಾದರೂ ಆಕಾಶಯಾತ್ರೆ ಗೊತ್ತಿತ್ತೇ? ಇಲ್ಲದಿದ್ದರೆ, ಉತ್ತರದಿಕ್ಕಿನಲ್ಲಿ ಹಿಮಾಲಯವೆಂಬ ಪರ್ವತಗಳ ರಾಜನಿದ್ದಾನೆ. ಎರಡೂ ಕಡೆ (ತುದಿಯಲ್ಲೂ) ಸಮುದ್ರಗಳಿರುವ ಇವನು, ಭೂಮಿಗೇ ಅಳತೆಗೋಲಿನಂತಿದ್ದಾನೆ ಎಂಬ ಕಲ್ಪನೆಯನ್ನು ಹೇಗೆ ಮಾಡಿದನೋ ಅವನು? ಗಗನದಿಂದ ಹಿಮಾಲಯ ಹೇಗೆ ಕಾಣುತ್ತದೆ ಎಂಬುದನ್ನು ಅವನು ಗೂಗಲ್ ಅರ್ಥ್‌ನಲ್ಲೇನಾದರೂ ನೋಡಿದ್ದನೇ? ಈ ಬಗೆಯ ಕಲ್ಪನೆ, ಭೂಮಿಯನ್ನು ಅಳೆಯುವ ಅಳತೆಗೋಲು ಎಂಬಂತಹ ಉಪಮೆಗಳಿಂದಲೇ ಅವನು ಉಪಮಾಲೋಲನೆಂಬ ಹೆಸರು ಗಳಿಸಿದ್ದಾನೆ. ಇನ್ನು ಮೇಘದೂತದ ಮೊದಲ ಶ್ಲೋಕ ನೋಡೋಣ:

ಕಶ್ಚಿತ್ ಕಾಂತಾ ವಿರಹ ಗುರುಣಾ ಸ್ವಾಧಿಕಾರಾತ್ ಪ್ರಮತ್ತಃ
ಶಾಪೇಣ ಅಸ್ತಂಗಮಿತ ಮಹಿಮಾ ವರ್ಷ ಭೋಗ್ಯೇಣ ಭರ್ತುಃ ।
ಯಕ್ಷಶ್ಚಕ್ರೇ ಜನಕ ತನಯಾ ಸ್ನಾನ ಪುಣ್ಯೋದಕೇಷು
ಸ್ನಿಗ್ಧಃ ಛಾಯಾ ತರುಷು ವಸತಿಂ ರಾಮಗಿರ್ಯಾಶ್ರಮೇಷು ॥

ಒಬ್ಬ ಯಕ್ಷ ತನ್ನೊಡೆಯನಿಂದ ನಲ್ಲೆಯನು ಅಗಲಿ ಬೆಂದು
ಶಪಿತ ವರುಷವನು ಕಳೆಯಲಾಗದೆ ಮಹಿಮೆ ಕಳೆದುಕೊಂಡು ।
ಜನಕತನಯೆ ಮಿಂದುದುದಕಗಳಲಿ ತಣ್ಣೆಳಲ ಅಂಗಳಲ್ಲಿ
ವಸತಿ ನಿಂದನೋ ರಾಮಗಿರಿಯ ಪುಣ್ಯಾಶ್ರಮಂಗಳಲ್ಲಿ ॥
(ವರಕವಿ ದ.ರಾ.ಬೇಂದ್ರೆ ಅವರ ಅನುವಾದ)

CCA
CALIFORNIA CRICKET ACADEMY
With Best Compliments



**Spring, Summer and Fall Youth Cricket Training :Fremont, Cupertino & San Jose**

**Visit www.calcricket.org or contact: 408-777-9983**

ಯಕ್ಷನೊಬ್ಬ ತಾನು ಮಾಡಿದ ತಪ್ಪಿಗಾಗಿ, ಯಕ್ಷಲೋಕದ ಅಲಕಾವತಿಯಿಂದ ಗಡೀಪಾರಾಗಿ, ಸೀತೆ ತನ್ನ ವನವಾಸಕಾಲದಲ್ಲಿ ವಾಸಿಸಿದ್ದ ವಿದರ್ಭದ ರಾಮಗಿರಿಗೆ ಹೋಗಬೇಕಾಯಿತಂತೆ. ಈ ಯಕ್ಷನೂ ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ತನಗದೆ ಕೋಟಿ ರುಪಾಯಿ ಎಂದು ಹಾಡುವವರ ಜಾತಿಯೇ! ತನ್ನ ಪ್ರಿಯತಮೆಗೆ ತನ್ನ ಸಂದೇಶವನ್ನು ತಿಳಿಸಲು ಇನ್ನಾರೂ ಸಿಗದೆ, ಮುಂಗಾರಿನ ಮೋಡವನ್ನೆ ಬಳಸಿಕೊಂಡನಂತೆ. ಗೂಗಲ್ ಅರ್ಥ್ ಪರಿಚಯವಿಲ್ಲದಿದ್ದರೂ, ಭಾರತ ದೇಶದ ಮೂರುಸುತ್ತೂ ಚೆನ್ನಾಗಿ ಅರಿತಿದ್ದ ಕಾಳಿದಾಸ. ವಿದರ್ಭದ ರಾಮಗಿರಿಯಿಂದ (ಈಗಿನ ರಾಮ್‌ಟೆಕ್, ಮಹಾರಾಷ್ಟ್ರ) ಹಿಮಾಲಯದ ಅಲಕಾಪುರಿಗೆ ಹೋಗುವ ದಾರಿಯನ್ನು ಅವನು ಮೇಘದೂತದಲ್ಲಿ ಚೆನ್ನಾಗಿ ವರ್ಣಿಸುತ್ತಾನೆ.

ಇನ್ನು ಕೊನೆಯದು ಅವನ ರಘುವಂಶ. ಅದರ ಮೊದಲ ಪದ್ಯ ಹೀಗಿದೆ:
ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥

ನಾ ತಲೆವಾಗುವೆ ಶಿವಶಿವೆಗೆ
ಈ ಜಗದಲೆಲ್ಲರ ಹೆತ್ತವರ ।
ಬಿಡದೊಡಗೂಡಿಯೆ ಇಹರಲ್ಲ!
ಮಾತಲಿ ಹುರುಳು ಬೆಸೆದಂತೆ ॥ (ಅನುವಾದ ನನ್ನದು)

ಮಾತು ಮತ್ತು ಅರ್ಥದಂತೆ ಸದಾ ಜೊತೆಯಾಗಿರುವ ಪಾರ್ವತೀಪರಮೇಶ್ವರರನ್ನು ಸ್ಮರಿಸುವ ಈ ಪದ್ಯವೇ ಸೂಚಿಸುತ್ತಿದೆ – ಅರ್ಥವಿಲ್ಲದೇ ಮಾತಿಗೆ ಬೆಲೆಯಿಲ್ಲ, ಅಂತೆಯೇ ಪಾರ್ವತಿಯಿಲ್ಲದೇ ಪರಮೇಶ್ವರನಿಗೂ ಬೆಲೆಯಿಲ್ಲ ಎಂದು! ದೇವಾನುದೇವತೆಗಳಿಗೇ ಹೆಂಡತಿಯಿಲ್ಲದೆ ಬೆಲೆಯಿಲ್ಲದಿರುವಾಗ, ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿ ರುಪಾಯಿ ಎಂದು ನರಸಿಂಹಸ್ವಾಮಿಯವರು ಹೇಳಿದ್ದರಲ್ಲಿ ಆಶ್ಚರ್ಯವೇನಿದೆ? ಶಿವನೂ ಬಹುಶಃ ಹೀಗೇ ಕವಿತೆಗಳನ್ನು ಹಾಡಿರಬಹುದು ಅನ್ನುವ ಸಂಶಯ ನನ್ನದು. ಆದರೆ, ಗಣಪ ಬರೆದುಕೊಳ್ಳದೇ ಹೋಗಿರಬಹುದು. ಯಾಕಂದ್ರೆ, ಅವನು ವ್ಯಾಸರ ಮಹಾಭಾರತ ಬರೆಯೋದಕ್ಕೆ ಹೋಗಿದ್ದನಲ್ಲ? ಅಥವಾ, ತನ್ನ ಹೆಂಡತಿಯರಾದ ಸಿದ್ಧಿ ಬುದ್ಧಿಯರನ್ನು ಹಿಂಬಾಲಿಸಿ ಹೋಗಿದ್ದನೋ ಏನೋ ನಾ ಕಾಣೆ!

ಆದ್ರೆ, ಈಗ ತಾನೇ ನೋಡಿದೆವಲ್ಲ? ಹುರುಳಿಲ್ಲದ ಮಾತಿಗೆ ಬೆಲೆಯಿಲ್ಲ ತಾನೇ? ಹಾಗಾದರೆ, ಅರ್ಥವನ್ನು ಕಳೆದುಕೊಳ್ಳುವ ಮೊದಲು, ನನ್ನ ಮಾತನ್ನು ಇಲ್ಲಿಗೇ ಮುಗಿಸುವುದೊಳಿತು !
***

**ಕ್ಯಾಲಿಫೋರ್ನಿಯದ . . .**

. . . ಯೋಸಿಮಿಟಿಯ ಜಲಪಾತವು ಅಮೇರಿಕದ ಅತ್ಯಂತ ಎತ್ತರದಿಂದ (೨೪೨೫ ಅಡಿ) ಧುಮುಕುವ ಜಲಪಾತ.
***
. . . ಮೌಂಟ್ ವಿಟ್ನಿ ಹಾಗೂ ಡೆತ್ ವ್ಯಾಲಿಗಳು ಅಮೇರಿಕದ ಅತ್ಯಂತ ಎತ್ತರದ ಹಾಗೂ ಅತ್ಯಂತ ತಗ್ಗಿನ ಜಾಗಗಳು.
***

ಕ ಥೆ

೨೦೦೭ರ ಯುಗಾದಿ ಕಥಾಸ್ಪರ್ಧೆಗೆ ಸಲ್ಲಿಸಿದ ಕಥೆ.

ಉಮಾ ಕಳಸಾಪುರ
ಕ್ಯಾಲಿಫೋರ್ನಿಯ

# ಪಾಲಿಗೆ ಬಂದಿದ್ದು

ವಿಶ್ರಾಂತಿಗೆಂದು ಒರಗಿ ಕುಳಿತಿದ್ದ ಮನುವಿಗೆ ಹಾಗೇ ಜೊಂಪು ಹತ್ತಿತ್ತು. ಶಾಸ್ತ್ರಿಗಳ ಮಾತು ಕಿವಿಗೆ ಬಿದ್ದಾಗಲೇ ಎಚ್ಚರ. ಸ್ವಾತಿಯೊಂದಿಗೆ ಏನೋ ಹೇಳುತಿದ್ದರು. "ನಾನಿನ್ನು ಬರ್ತೀನಿ ಕಣಮ್ಮ. ನಾಳೆ ಕಾರ್ಯಕ್ರಮಕ್ಕೆ ನಾನಿಲ್ಲದಿದ್ದರೂ ನಡೆಯುತ್ತೆ. ಬರೀ ಒಂದು ದೇವರ ಪೂಜೆ ಅಷ್ಟೆ. ಅದಕ್ಕೆ ನನ್ನ ಕಡೆಯವರೊಬ್ಬರನ್ನ ಕಳಿಸಿಕೊಡ್ತೀನಿ. ಮನುವಿಗೂ ಹೇಳಿಬಿಡು, ಮಲಗಿದ್ದಾನೇಂತ ಕಾಣುತ್ತೆ." ಮಾತು ಕಿವಿ ಮೇಲೆ ಬಿದ್ದರೂ ಏಳಲು ಏನೋ ಸೋಮಾರಿತನ. ಮಧ್ಯಾಹ್ನವೇ ಅವರಿಗೆ ತಾಂಬೂಲ ಕೊಟ್ಟಿದ್ದರೂ ಹೊರಡುವ ಮುನ್ನ ಔಪಚಾರಿಕವಾಗಿ ಎರಡು ಮಾತನಾಡಿ ಕಳಿಸುವುದು ಲಕ್ಷಣ ಎನಿಸಿ ಎದ್ದೆ.

"ಯಾಕಯ್ಯ ಎದ್ಬಿಟ್ಟೆ? ನಿಂಗೂ ಒಬ್ನೇ ಓಡಾಡಿ ಸಾಕಾಗಿದೆ. ರೆಸ್ಟ್ ತಗೋ. ಹೇಗಿದ್ರೂ ನಾಳೆ ಬರೀ ಮನೆ ಜನಾನೇ ತಾನೇ, ಹೇಗೋ ನಡೆಯುತ್ತೆ, ಎಲ್ಲಾ ತುಂಬಾ ಚೆನ್ನಾಗಿ ನಡೆಸ್ಕೊಟ್ಟೆ. ನೆಂಟರು ಇಷ್ಟರೂ ಅಂತ ಎಲ್ಲರನ್ನೂ ಕರೆದಿದ್ದೆ. ನಿಮ್ಮಮ್ಮನ ವರ್ಷಾಬ್ಧಿಕಕ್ಕಿಂತಲೂ ನಿರಾಯಾಸವಾಗಿ ನಡೀತಪ್ಪ." ಇನ್ನೂ ಎಷ್ಟು ಹೊತ್ತು ಮಾತಾಡುತ್ತ ಇರ್ತಿದ್ರೋ ಅವರ ಮೊಬೈಲ್ ರಿಂಗಾದ್ದರಿಂದ ಹಾಗೇ ಕೈಲೇ ಸನ್ನೆ ಮಾಡಿ ಹೊರಟರು.

ನೋಡ್ತಾ ನೋಡ್ತಾನೆ ನಮ್ಮ ಶಾಸ್ತ್ರಿಗಳೂ ಎಷ್ಟು ಬದಲಾದರು ಅನ್ನಿಸ್ತು. ಇವರೇ ಏಕೆ ಎಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಬದಲಾಗಿಯೇ ಇದ್ದಾರೆ. ಆದರೆ ಅಪ್ಪ? ಉಹೂಂ ಅವರು ಮಾತ್ರ ಬದಲಾಗಲಿಲ್ಲ. ಅಥವಾ ಅವರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಅವರಿಂದ ಬದಲಾವಣೆ ನಿರೀಕ್ಷಿಸಿದ್ದು ನನ್ನ ತಪ್ಪೇನೋ ಎಂದು ಈಗ ಅನಿಸುತ್ತಿದೆ. ದೊಡ್ಡವನಾಗಿ ಬೆಳೆದಂತೆ ಎಷ್ಟೋ ವಿಷಯಗಳು ಅರ್ಥವಾದರೂ, ಚಿಕ್ಕವನಿದ್ದಾಗ ಅಪ್ಪನ ಮೇಲೆ ಬೇರೆಯೇ ಅಭಿಪ್ರಾಯವಿತ್ತು.

ಸಂಬಳಕ್ಕಿಂತಲೂ ಹೆಚ್ಚಿನ ಮೇಲಾದಾಯ ಬರುವ ಇಲಾಖೆಯಲ್ಲಿ ಕೆಲಸದಲ್ಲಿದ್ದರೂ ಅಪ್ಪ ಎಂದೂ ಕಂಡವರ ಹಣಕ್ಕೆ ಕೈಚಾಚಲಿಲ್ಲ. ಸ್ವಲ್ಪ ಜಾಸ್ತಿಯೇ ಅನ್ನಿಸುವ ಮಿತವ್ಯಯದ ಜೀವನವಾದರೂ ಅದರಲ್ಲೇ ನೆಮ್ಮದಿ ಕಂಡವರು. ಆದರೆ ಅಮ್ಮನದು ಅಪ್ಪನಿಗಿಂತ ಭಿನ್ನವಾದ ಸ್ವಭಾವ. ಅತಿಯಾಸೆಯ ಹೆಂಗಸಲ್ಲದಿದ್ದರೂ ಎಲ್ಲರಂತೆಯೇ ಅವಳದೂ ಕೆಲವು ಬೇಡಿಕೆಗಳಿರುತ್ತಿದ್ದವು. ಆದರೆ ಅಪ್ಪನಿಂದ ಎಂದೂ ಆ ಬೇಡಿಕೆಗಳಿಗೆ ಮನ್ನಣೆ ಸಿಗುತ್ತಿರಲಿಲ್ಲ.

ಯಾವುದಾದರೂ ಮದುವೆ ಮುಂಜಿಗಳಿಗೆ ಹೋಗಿ ಬಂದ ಮೇಲೆ ಒಂದೆರಡು ದಿನ ಅವಳ ವರ್ತನೆಯೇ ಬೇರೆ ಇರುತ್ತಿತ್ತು. ಎರಡನೇ ತಂಗಿ ರುಕ್ಮಣಿ ಹೊಸದಾಗಿ ಮಾಡಿಸಿದ್ದ ಹವಳದ ಸರ, ಚಿಕ್ಕ ತಂಗಿಯ ಹೊಸ ಮಾದರಿಯ ಕರಿಮಣಿ ಸರ, ಇವುಗಳ ಸುತ್ತಲೇ ಅವಳ ಮಾತು ಸುತ್ತುತ್ತಿರುತ್ತಿತ್ತು. "ನಿಮ್ಮಪ್ಪನ ಕೈಯಲ್ಲಿ ಆಗಲ್ಲ ಅಂದಿದ್ರೆ ನಾನೇನು ಆಸೆ ಪಡ್ತಿರಲಿಲ್ಲ. ಅವರಿಗಿಂತ ಕಡಿಮೆ ಸಂಬಳ ತಗೋಳೋವ್ರೆಲ್ಲಾ ಹೇಗೆ ಜೀವನ ಮಾಡ್ತಾರೆ ಗೊತ್ತಾ? ಹೋಗ್ಲಿ ನನಗೇ ಒಡವೇ ವಸ್ತ್ರ ಬೇಡ, ಮನೇಮೇಲಾದ್ರೂ ಒಂದಿಷ್ಟು ಖರ್ಚು ಮಾಡ಼್ಬಾರ್ದ? ಸ್ವಂತದ್ದಾದ್ರೂ ಹೇಳ್ಕೊಳೋ ಹಾಗಿಲ್ಲಾ ನೋಡು ಹಾಗಿದೆ ನಮ್ಮನೆ. ಆ ರುಕ್ಮಣಿ ಮಕ್ಕಳನ್ನ ರಜಕ್ಕೆ ಬನ್ನಿ ಅಂದ್ರೆ, ಹೋಗಿ ದೊಡ್ಡಮ್ಮ ಬೆಂಗಳೂರಿಗೆ ರಜಕ್ಕೆ ಬಂದ್ರೂ ಯಾವುದೋ ಹಳ್ಳಿ ಮನೆಯಲ್ಲಿ ಇದ್ದೀವೇನೋ ಅನ್ನಿಸುತ್ತೆ ಅನ್ನೋದೇ. ನಾನು ಕೇಳ್ಕೊಂಡು ಬಂದಿಲ್ಲ ಅಂತಾ ಕಾಣುತ್ತೆ. ಇಷ್ಟೇ ಆಯ್ತು ನಮ್ಮ ಜೀವನ" ಎಂದು ನಿಟ್ಟುಸಿರು ಬಿಡುತ್ತಿದ್ದಳು.

ಅಮ್ಮ ಹೇಳುತ್ತಿದ್ದದ್ದೂ ನಿಜವೇ, ಸ್ವಂತದ್ದಾದರೂ ಬಹಳ ಹಳೆಯ ಕಾಲದ ಮನೆ. ಸೈಟಿನ ಒಂದು ಮೂಲೆಗೆ ಮನೆ ಕಟ್ಟಿದ್ದರು. ಎರಡು ಕೋಣೆಗಳ ಮನೆ. ಹಬ್ಬ ಹರಿದಿನಗಳಲ್ಲಿ ಸುಣ್ಣ ಬಣ್ಣ ಬಿಟ್ಟರೆ ಯಾವುದೇ ರಿಪೇರಿ ಕಂಡಿರಲಿಲ್ಲ. ನನಗಾಗಲೀ ಮಾನಸಳಿಗಾಗಲೀ ಹೆಚ್ಚಿನ ಸ್ನೇಹಿತರು ಮನೆಗೆ ಬರುತ್ತಿರಲಿಲ್ಲ. ಯಾವಾಗಲಾದರೊಮ್ಮೆ ಗ್ರೂಪ್ ಸ್ಟಡೀಸ್ ಎಂದು ಕರೆದ್ರೆ "ಬೇಜಾರು ಮಾಡಿಕೋ ಬೇಡ್ವೋ ಮನು, ಪ್ರೈವೆಸಿ ಇರಲ್ವೋ ನಿಮ್ಮ ಮನೆಯಲ್ಲಿ" ಅನ್ನುತ್ತಿದ್ದರು.

ಚಿಕ್ಕ ವಯಸ್ಸಿನಲ್ಲಿ ಅಪ್ಪನಿಂದ ನಕಾರವಿರುತ್ತೆ ಎಂದು ಗೊತ್ತಿದ್ದರೂ ಸಣ್ಣಪುಟ್ಟ ಬೇಡಿಕೆಗಳಂತೂ ಇದ್ದೇ ಇರುತ್ತಿತ್ತು. ನಂತರದ ದಿನಗಳಲ್ಲಿ ಕೇಳುವುದೂ ಕಡಿಮೆ ಆಯ್ತು. ಕಾಲೇಜಿನಲ್ಲಿದ್ದಾಗ ಕೇಳಿದ್ದು ಒಂದೇ ಒಂದು. ಓಡಾಡಲು ಒಂದು ಮೊಪೆಡ್ ಕೊಡಿಸು ಅಂತ. ಸ್ಕೂಟರ್ ಕೂಡ ಅಲ್ಲ. ಅಪ್ಪನ ಉತ್ತರ ಗೊತ್ತಿದ್ದದ್ದೇ. ಆದರೂ ಆ ಸಲ ಬಹಳ ನೋವಾಯಿತು. ಇನ್ನೆಂದೂ ಅಪ್ಪನ ಮುಂದೆ ಯಾವುದೇ ಬೇಡಿಕೆ ಇಡಲಿಲ್ಲ. ಹೇಗೋ ಓದು ಮುಗಿಯುತ್ತಿದ್ದಂತೆ ಕೆಲಸ ಸಿಗುವುದು ತಡವಾಗಲಿಲ್ಲ. ಒಳ್ಳೆಯ ಕಂಪನಿಯಲ್ಲೇ ಕೆಲಸ ಸಿಕ್ಕಿತು.

ಸ್ವಲ್ಪ ದಿನಗಳಲ್ಲೇ ಮಾನಸಳ ಮದುವೆಯೂ ನಿಶ್ಚಯವಾಯಿತು. ಅಮ್ಮನಂತೂ ಮದುವೆ ಮುಗಿಯುವವರಗೆ ಒಂದೇ ಸಮ ಚಡಪಡಿಸುತ್ತಿದ್ದರು. ಸರಳ ಮನಸ್ಸಿನ ಬೀಗರು ಸಿಕ್ಕಿದ್ದು

ಪುಣ್ಯವೇ ಸರಿ. ಯಾವುದೇ ಬೇಡಿಕೆಗಳಿರಲಿಲ್ಲ. ಹೆಚ್ಚಿನ ಅದ್ದೂರಿ ಆಡಂಬರಗಳಿಲ್ಲದೇ ಮದುವೆ ಸುಸೂತ್ರವಾಗಿ ನಡೆಯಿತು. ಎರಡೇ ವರುಷಕ್ಕೆ ಕೀರ್ತಿ, ಕವನ ಹುಟ್ಟಿದರು. ಅಪ್ಪನಿಗೆ ತಕ್ಕ ಮಗಳು ಕಣೆ ನೀನು, ಒಂದು ಬಾಣಂತನದ ಖರ್ಚು ಉಳಿಸ್ದೆ ಅಂತ ಅಪ್ಪನ ಆತ್ಮೀಯ ಸ್ನೇಹಿತರಾದ ಮೂರ್ತಿ ಅಂಕಲ್ ಮಾನಸಳನ್ನ ರೇಗಿಸ್ತಾ ಇದ್ರು. ಅವಳ ಆರತಿ ಮತ್ತು ಮಕ್ಕಳ ನಾಮಕರಣಗಳಿಗೆ ಹೆಚ್ಚಿನ ಜನರನ್ನು ಕರೆದು ಸಂಭ್ರಮಿಸಬೇಕೆಂಬ ಅಮ್ಮನ ಆಸೆಯೂ ನಿಟ್ಟುಸಿರಾಯ್ತು. ಆದರೆ ಯಾವುದೇ ಲೋಪವಾಗದಂತೆ ಚಿಕ್ಕ ಚೊಕ್ಕ ಸಮಾರಂಭಗಳಾದವು.

ಮತ್ತೈದು ವರ್ಷಗಳ ಅವಧಿಯಲ್ಲಿ ತಾನು ಒಂದೆರಡು ಕಂಪನಿಗಳನ್ನು ಬದಲಾಯಿಸಿ ಈಗಿರುವ ಕಂಪನಿಗೆ ಸೇರಿದ್ದೆ. ಒಳ್ಳೆಯ ಸಂಬಳ ಮತ್ತು ಹುದ್ದೆ ದೊರಕಿತ್ತು. ಮೊದಲು ಮಾಡಿದ್ದು ಅಂದರೆ ಮನೆಯ ಕೆಲಸ. ಹೆಚ್ಚು ಕಮ್ಮಿ ಹೊಸದಾಗಿಯೆ ಕಟ್ಟಿಸಿದಂತಾಯ್ತು. ಮೊದಲಿದ್ದ ಎರಡು ರೂಮುಗಳ ಜೊತೆಗೆ ಇನ್ನೊಂದು ರೂಮು, ಡೈನಿಂಗ್ ಹಾಲ್ ಸೇರಿಸಿ ಮನೆ ಮುಗಿಸುವ ಹೊತ್ತಿಗೆ ಮಾಡಿದ್ದ ಸ್ವಲ್ಪ ಉಳಿತಾಯ ಮತ್ತು ತೆಗೆದ ಸಾಲ ಎಲ್ಲವೂ ಮುಗಿದಿತ್ತು. ಅಪ್ಪನ ಒಪ್ಪಿಗೆಯೊಂದನ್ನು ಬಿಟ್ಟು ಏನನ್ನೂ ಕೇಳಿರಲಿಲ್ಲ. ಆದರೆ ಅವರಾಗಿಯೇ ಎರಡು ಲಕ್ಷ ಕೊಟ್ಟಾಗ ಬೇಡವೆನ್ನಲಿಲ್ಲ. ನಾನು ಕೇಳದಿದ್ದರೂ ಅವರಾಗೇ ದುಡ್ಡುಕೊಟ್ಟಿದ್ದು ಎಲ್ಲರಿಗೊ ಆಶ್ಚರ್ಯವಾದದ್ದಂತೂ ನಿಜ.

ಮನೆ ಕೆಲಸಗಳೆಲ್ಲ ಮುಗಿದ ಮೇಲೆ ಅಮ್ಮನಿಗೆ ಹೊಸದಾಗಿ ಸರವೋ ಬಳೆಯೋ ಕೊಳ್ಳಲು ಹೇಳಿದೆ. ಅದ್ಯಾಕೋ ಮೊದಲೆಲ್ಲಾ ಅಷ್ಟು ಹೇಳಿಕೊಂಡು ನಿಟ್ಟುಸಿರುಡುತ್ತಿದ್ದವಳು ಈಗ ಏನೂ ಬೇಡ ಅಂದು ಬಿಟ್ಟಳು. ಅಪ್ಪನ ಕಾಲದ ಓಲೆ ಮತ್ತು ಕರಿಮಣಿ ಸರಗಳನ್ನು ಬದಲಾಯಿಸುವುದಿಲ್ಲ ಅನ್ನುವುದೇ ಅವಳು ನೀಡಿದ ಕಾರಣ. ಒತ್ತಾಯ ಮಾಡಿದ್ದರಿಂದ ಬಳೆಗಳನ್ನು ಕೊಳ್ಳಲು ಒಪ್ಪಿದಳು ಅಷ್ಟೆ.

ಮತ್ತೆ ಸ್ವಲ್ಪ ದಿನಗಳಲ್ಲೇ ಸೊಸೆಯಾಗಿ ಬಂದವಳು ಸ್ವಾತಿ. ಹೊಂದಿಕೊಂಡು ಹೋಗುವ ಅವಳ ಸ್ವಭಾವ ಎಲ್ಲರಿಗೂ ಇಷ್ಟವಾಯಿತು. ಅಪ್ಪ ಅಮ್ಮನಿಗೆ ಸ್ವಾತಿ ಮಗಳಾದಳು. ಮಾನಸಳಿಗೆ ಸ್ನೇಹಿತೆಯಾದಳು. ಮನೆಯ ಎಲ್ಲಾ ಕೆಲಸ ಕಾರ್ಯಗಳನ್ನು ಒಬ್ಬಳೇ ನಿಭಾಯಿಸುತ್ತಿದ್ದಳು. ಅವಳ ಒಂದೇ ದೌರ್ಬಲ್ಯವೆಂದರೆ, ಕೈ ಹಿಡಿತವಿಲ್ಲದ್ದು. ಸ್ವಲ್ಪ ಅನುಕೂಲಸ್ಥರ ಮನೆಯಿಂದ ಬಂದಿದ್ದರಿಂದಲೊ ಏನೋ ಒಡವೆ ವಸ್ತ್ರ ಅಂತ ಅವಳ ಶಾಪಿಂಗ್ ಜೋರಾಗೆ ಇರುತ್ತಿತ್ತು. ಚಿನ್ನದ ಮೇಲೆ ದುಡ್ಡು ಹಾಕಿದರೆ ಯಾವತ್ತೂ ಮೋಸ ಇಲ್ಲ, ನಮ್ಮ ಮಕ್ಕಳ ಕಾಲಕ್ಕೂ ಇರುತ್ತೆ. ಸಮಯ ಅಂದ್ರೆ ನಮ್ಮ ಸಹಾಯಕ್ಕೂ ಬರುತ್ತೆ ಅನ್ನೋದು ಅವಳ ವ್ಯಾಖ್ಯಾನ ಆಗಿತ್ತು. ಏನೇ ಬಂಡವಾಳ ಅಂತ ಹಾಕಿದ್ರೂ ಈಗಿನ ಕಾಲದಲ್ಲಿ ಕಷ್ಟ ಅಂದ್ರೆ ಹೆಂಗಸರು ಅವರ ಚಿನ್ನ ಮಾರೋಕ್ಕೆ ಬಿಡ್ತಾರ್ಯೆ ಅನ್ನೋದು ನನ್ನ ವಾದವಾಗಿತ್ತು. ಅಮ್ಮ ಮಾತ್ರ "ಕೈಲಾದಾಗ ಅವಳಿಷ್ಟದ ಹಾಗೆ ಕೊಡಿಸಿಬಿಡು ಮನು, ಇಲ್ಲಾ ಎಂದು ಹೇಳಿ ಅವಳು ನಿಟ್ಟುಸಿರು ಬಿಡುವ ಹಾಗೆ ಮಾಡಬೇಡ." ಎಂದಿದ್ದಳು.



"ಅಮ್ಮನಿಗೆ ಏನಾದರು ಮಾಡಿಸೋಣಾರಿ" ಎಂದು ಸ್ವಾತಿಯೇ ಒಂದೆರಡು ಬಾರಿ ಒತ್ತಾಯ ಮಾಡಿದ್ದಳು. ನಾನು ಮತ್ತೆ ಹೇಳಿ ನೋಡಿದೆ. ಅಮ್ಮ ಒಪ್ಪಲಿಲ್ಲ. ನಾನೊಬ್ಬನೆ ಇದ್ದಾಗ, "ನೋಡು ಮನು ವಯಸ್ಸು ಚಿಕ್ಕದಿದ್ದಾಗ ನನಗೂ ಒಡವೆ ವಸ್ತ್ರ ಅಂತ ಆಸೆ ಇತ್ತು. ಏನೋ ನಿಮ್ಮಪ್ಪನೂ ಕಾರಣಾಂತರಗಳಿಂದ ಏನು ಬೇಕು ಅಂತ ಎಂದೂ ಕೇಳಲಿಲ್ಲ. ಈ ಓಲೆ ಸರಗಳೂ ಅವರೆ ಒಂದು ಕಾಲದಲ್ಲಿ ಕೊಡಿಸಿದ್ದೇ ಅಲ್ಲವೇ, ಹಾಗೆ ಇರಲಿ ಬಿಡು" ಎಂದು ನವಿರಾಗಿ ಹೇಳಿದಳಾದರೂ ಅಪ್ಪ ಬಾಯಿ ಬಿಟ್ಟು ಕೇಳಿ ತನಗೇನೂ ಕೊಡಿಸಲಿಲ್ಲ ಎನ್ನುವ ಒಂದು ನೋವಿನ ಎಳೆ ಅವಳ ಮುಖದಲ್ಲಿ ಎಲ್ಲೋ ಅಡಗಿದೆ ಎನಿಸಿತು.

ಅಪ್ಪ ನಮ್ಮ ಹಣಕಾಸಿನ ಮತ್ತು ಮತ್ತ್ಯಾವುದೇ ವಿಚಾರಗಳಲ್ಲೆಲ್ಲಾ ತಲೆಹಾಕುತ್ತಿರಲಿಲ್ಲ. ರಿಟೈರ್ಡ್ ಆಗಿದ್ದರೂ ತಿಂಗಳ ದಿನಸಿ ಮಾತ್ರ ಅವರೇ ಹೋಗಿ ತರುತ್ತಿದ್ದರು. ಅದೇ ಹಳೇ ಅಂಗಡಿ, ಅದೇ ಸಾಮಾನಿನ ಪಟ್ಟಿ ಏನೂ ಬದಲಾವಣೆ ಇರಲಿಲ್ಲ. ಹೆಚ್ಚಿನ ಸಾಮಾನು, ಬೇರೆಲ್ಲ ಖರ್ಚುಗಳನ್ನು ಸ್ವಾತಿಯೇ ನೋಡಿಕೊಳ್ಳುತ್ತಿದ್ದಳು. ರಜಾ ದಿನಗಳಲ್ಲಿ ಮಾನಸ ಗಂಡ ಮಕ್ಕಳೊಂದಿಗೆ ಬರುತ್ತಿದ್ದಳು. ಹಬ್ಬಗಳನ್ನು ಅವರ ಮನೆಯಲ್ಲೇ ಆಚರಿಸಬೇಕೆನ್ನುವುದು ಅವಳ ಗಂಡ ರಮೇಶನ ಆಣತಿ. ಅಂತಹ ದಿನಗಳಲ್ಲಿ ಒಂದು ಹೊತ್ತು ಬಂದು ಹೋಗುತ್ತಿದ್ದಳು. ನಾವುಗಳು ಒಟ್ಟಿಗೆ ಅವರಲ್ಲಿಗೆ ಆಗಾಗ ಹೋಗುವುದಿತ್ತು. ಅಪ್ಪನಿಗೆ ಅಳಿಯನಲ್ಲಿ ಅಭಿಮಾನ ಮತ್ತು ಗೌರವ ಎರಡೂ ಇತ್ತು. ಎಂತಹವರೂ ಮೆಚ್ಚುವ ನಡತೆ ಮತ್ತು ವಿಚಾರ ಅವನದಾಗಿತ್ತು.

ಎಲ್ಲಾ ಹೀಗೆ ಚೆನ್ನಾಗಿರುವಾಗಲೇ ಒಮ್ಮೆ ಬೆನ್ನು ನೋವೆಂದು ಮಲಗಿದ ಅಮ್ಮನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಅವಳಿಗಿದ್ದ ಗ್ಯಾಸ್ಟ್ರಿಕ್ ಸಮಸ್ಯೆಯಿಂದ ಆಗಾಗ ನರಳುತ್ತಿದ್ದ ಅಮ್ಮ ಎಂದೂ ಎರಡು ದಿನಕ್ಕಿಂತ ಹೆಚ್ಚಾಗಿ ಹಾಸಿಗೆ ಹಿಡಿದು ಮಲಗಿರಲಿಲ್ಲ. ಈ ಸಲವೂ ಹಾಗೇ ಗ್ಯಾಸ್ಟ್ರಿಕ್ ಹೆಚ್ಚಾಗಿರಬಹುದೆಂದು ಎಣಿಸಿದ್ದು ತಪ್ಪಾಗಿತ್ತು. ಡಾಕ್ಟರ್ ಹಾರ್ಟ್ ಅಟ್ಯಾಕ್ ಅಂದಾಗ ನಂಬುವುದು ತುಂಬಾ ಕಷ್ಟವಾಗಿತ್ತು. ಎಲ್ಲಾ ಟೆಸ್ಟುಗಳು ಮುಗಿದು ಆಪರೇಷನ್‌ಗೆಂದು ದಿನ ಕೊಟ್ಟಿದ್ದರು. ಅಮ್ಮ ಮಾತ್ರ ಯಾಕೋ ಆ ದಿನಕ್ಕೆ ಕಾಯಲೇ ಇಲ್ಲ. ಕಂಡೀಷನ್ ನಾರ್ಮಲ್ ಆಗಿದೆ ಏನೂ ಚಿಂತೆ ಮಾಡಬೇಕಿಲ್ಲ ಎಂದು ಹೇಳಿದ್ದ ಡಾಕ್ಟರ್ ತಲೆ ಕೆಳಗೆ ಹಾಕಿದರು.

ಎಲ್ಲರಿಗೂ ಈ ಷಾಕ್ ನಿಂದ ಹೊರ ಬರುವುದಕ್ಕೆ ಬಹಳ ಸಮಯವೇ ಬೇಕಾಯ್ತು. ಚಿಕ್ಕಂದಿನಿಂದಲೂ ಅಜ್ಜಿಯನ್ನು ತುಂಬಾ ಹಚ್ಚಿಕೊಂಡಿದ್ದ ನನ್ನ ಹತ್ತು ವರ್ಷದ ಮಗನ ಮಂಕು ಸರಿಯಲು ತಿಂಗಳುಗಳೇ ಬೇಕಾಯ್ತು. ಅಪ್ಪ ಮತ್ತು ನಾನು ಒಬ್ಬರಿಗೊಬ್ಬರು ನಾಲ್ಕು ಸಮಾಧಾನದ ಮಾತುಗಳನ್ನ ಹೇಳಿಕೊಳ್ಳಬೇಕೆಂದರೂ ಮಾತುಗಳು ಯಾಕೋ ಮನದಲ್ಲೇ ಉಳಿದವು.

ತಿಂಗಳುಗಳು ಕಳೆದು ವರ್ಷಾಬ್ಧಿಕವೂ ಬಂದಿತು. ಅಮ್ಮ ಸತ್ತಾಗ ಅವಳ ಕರ್ಮಾಂತರಗಳನ್ನು ಭಾವನ ಜವಾಬ್ದಾರಿಯಲ್ಲಿ ಹತ್ತಿರದಲ್ಲೇ ಇದ್ದ ಒಂದು ಮಠಕ್ಕೆ ಕಾಂಟ್ರಾಕ್ಟ್ ಕೊಟ್ಟು ಮುಗಿಸಿದ್ದೆವು. ಈ ಬಾರಿ ಮಠದಲ್ಲಿ ಬೇಡ, ನಾವೇ ಎಲ್ಲಾ ನಿಂತು ಮಾಡಿದರಾಯಿತೆಂಬ ನನ್ನ ಮಾತಿಗೆ ಒಪ್ಪಿದ ಅಪ್ಪ ಶಾಸ್ತ್ರಿಗಳಲ್ಲಿ ವಿಚಾರಿಸಿದರು. ಅವರು ಕೊಟ್ಟ ದೊಡ್ಡ ಪಟ್ಟಿಯನ್ನು ನೋಡಿದ ಅಪ್ಪನ ಮುಖದಲ್ಲಿ ಸಮಾಧಾನವಿದ್ದಂತೆ ಕಾಣಲಿಲ್ಲ. ಈ ವಿಚಾರದಲ್ಲೂ ಅಪ್ಪ ಯಾಕೆ ತಮ್ಮ ಹಳೇ ವರಸೆ ತೆಗೆಯುತ್ತಿದ್ದಾರೆ ಎಂದು ಬೇಜಾರಾಯಿತು. ಆದರೆ ಹತ್ತಿರ ಕರೆದು "ನೋಡು ಮನು ಈ ಎಲ್ಲಾ ಕಾರ್ಯಕ್ರಮಗಳನ್ನು ಅದ್ಧೂರಿಯಾಗೇ ಮಾಡಿ ಅವರು ಹೇಳಿದಂತೆಯೇ ದಾನ ಕೊಡಬೇಕಾಗಿಲ್ಲ. ಬಾಧ್ಯಸ್ಥರನ್ನು ಮಾತ್ರ ಕರೆದು ಸರಳವಾಗಿ ಮಾಡಿ ಮುಗಿಸಿ, ಉಳಿದ ಹಣವನ್ನು, ನಿಮ್ಮಮ್ಮ ಬದುಕಿದ್ದರೆ ತುಂಬು ಹೃದಯದಿಂದ ಸಂತೋಷ ಪಡುತಿದ್ದಂತಹ ಒಂದು ಕೆಲಸಕ್ಕೆ ವಿನಿಯೋಗ ಮಾಡು. ನಿಮ್ಮ ಕೊನೇ ಸೋದರಮಾವ ಮಗಳ ಮದುವೆಗೆ ಹಣ ಹೊಂದಿಸಲು ಒದ್ದಾಡ್ತಿದಾನೆ. ಕಷ್ಟದಲ್ಲಿರೋ ಅವನಿಗೆ ಕೊಟ್ಟರೆ, ಸಹಾಯ ಮಾಡಿದ ಹಾಗೂ ಆಗುತ್ತೆ, ನಿಮ್ಮಮ್ಮನ ಆತ್ಮಕ್ಕೂ ಶಾಂತಿ ಸಿಗುತ್ತೆ. ನಾನೆಂದೂ ನಿನ್ನ ಹಣದ ವಿಚಾರದಲ್ಲಿ ಹೀಗೇ ಮಾಡು ಎಂದು ಒತ್ತಡ ಹೇರಿಲ್ಲ. ಇಷ್ಟಕ್ಕೂ ನಿನಗೆ ತೋಚಿದ ಹಾಗೆ ಮಾಡು." ಎಂದು ಶಾಂತ ಸ್ವರದಲ್ಲಿ ಹೇಳಿ, ನನ್ನ ಉತ್ತರಕ್ಕೂ ಕಾಯದೇ ಮೂರ್ತಿ ಅಂಕಲ್ ಜೊತೆಗೆ ವಾಕಿಂಗ್ ಎಂದು ಹೊರಟೇಬಿಟ್ಟರು.

ಅಪ್ಪ ಈ ರೀತಿ ಹೇಳಿದ್ದು ಆಶ್ಚರ್ಯ ಮತ್ತು ಹೆಮ್ಮೆ ಎರಡೂ ಒಟ್ಟಿಗೆ ಉಂಟಾಯಿತು. ದೇವಸ್ಥಾನದಲ್ಲಿ ಸಿಕ್ಕ ಮೂರ್ತಿ ಅಂಕಲ್ ಹಾಗೆ ಮಾತಿಗೆ ನಿಂತವರು "ಏನಪ್ಪಾ ಮನು ಅಪ್ಪ ಹೇಳಿದ ವಿಚಾರ ಏನಾಯ್ತು? ನನಗೂ ನಿಮ್ಮಪ್ಪ ಹೇಳಿದ್ದು ಸರಿ ಅನ್ನಿಸ್ತು. ನಿಮ್ಮಪ್ಪನ ಮಾತಿಗೆ ನಿಂಗೆ ಆಶ್ಚರ್ಯವಾಗಿರಬೇಕಲ್ವ? ಮೂವತ್ತೈದು ವರ್ಷಗಳಿಂದ ಅವನನ್ನ ನೋಡಿರೋ ನನಗೆ ಆಶ್ಚರ್ಯವಾಗಲಿಲ್ಲ. ನಿನಗೆ ನಿಮ್ಮಪ್ಪನ ಬಗ್ಗೆ ತಿಳಿಯದೇ ಇರೋ ವಿಚಾರಗಳು ಕೆಲವು ಹೇಳ್ತೀನಿ ಕೇಳು. ಬೇಕಾದ ಹಾಗೆ ಹಣ ಮಾಡಬಹುದಾಗಿತ್ತು, ಆದರೆ ಅವನು ಕಂಡವರ ಬಿಡಿಗಾಸಿಗೆ ಕೈಚಾಚಲಿಲ್ಲ. ಹೆಚ್ಚುಗಾರಿಕೆ ಮತ್ತು ಪ್ರದರ್ಶನ ಬೇಕಿರಲಿಲ್ಲ. ಅವನನ್ನ ಸರಿಯಾಗಿ ತಿಳಿಯದವರಿಗೆ ಎಲ್ಲದರಲ್ಲೂ ಅವನದ್ದು ಕೈಹಿಡಿತ ಅನ್ನಿಸಿತು. ಒಂದು ಮಿತಿಯಲ್ಲೇ ಅವನ ಜೀವನ. ಮನೆ ವಿಚಾರದಲ್ಲೂ ಅಷ್ಟೆ, ಸಣ್ಣದಾದ ರಿಪೇರಿಯಿಂದ ಸಾಧ್ಯವಿಲ್ಲ ಹೊಸದಾಗಿಯೇ ಕಟ್ಟಿಸಬೇಕೆಂದು ಅವನಿಗೆ ತಿಳಿದಿತ್ತು. ಒಬ್ಬನ ಕೈಯಿಂದಲೇ ಅದು ಆಗುತ್ತಿರಲಿಲ್ಲ. ನೀನು ದುಡಿದು ಆ ಕೆಲಸ ಮಾಡುವೆನೆಂದಾಗ ಚಕಾರವೆತ್ತದೆ ತನ್ನ ಕೈಲಾದ ಸಹಾಯ ಮಾಡಿದ. ನೀನೇ ಹೇಳು, ನೀನು ದುಡಿಯಲಾರಂಭಿಸಿದ ಮೇಲೆ ಎಂದಾದರೂ ನಿನ್ನಲ್ಲಿ ಹಣದ ಲೆಕ್ಕ ಕೇಳಿದ್ದಾನೆಯೇ? ಅಲ್ಲದೇ ವಯಸ್ಸಾದ ಕಾಲಕ್ಕೆ ಬರಿಗೈ ಮಾಡ್ಕೊಂಡು ಕೂತ್ಕೋಬಾರದು ಅನ್ನೋ ಅವನ ಯೋಚನೆ ನನಗೂ ಸರಿ ಅನ್ನಿಸುತ್ತೆ. ದುಡ್ಡು ಕಾಸಿನ ವಿಚಾರದಲ್ಲಿ ಯಾವಾಗಲೂ ಅವನು ಸೂಕ್ತವಾದ

ನಿರ್ಧಾರಗಳನ್ನೇ ತೆಗೆದುಕೊಳ್ಳುತ್ತಿದ್ದ. ನೀನು ಅವನು ಹೇಳಿದ ಹಾಗೇ ಮಾಡ್ತೀಯಾಂತ ಗೊತ್ತು. ಯಾಕೇಂದ್ರೆ ನೀನೆಂದೂ ಅವನಿಗೆ ಎದುರಾಡಿಲ್ಲ ಅಂತ ನಾನು ಇಷ್ಟು ವರ್ಷಗಳಲ್ಲಿ ನೋಡಿಲ್ವೆ? '' ಎಂದು ಕೊನೆಗೆ ನನ್ನನ್ನೂ ಒಂದು ಚೂರು ಹೊಗಳಿ ಮಾತು ಮುಗಿಸಿದರು.

ಅಪ್ಪನ ಅಂತರಂಗ ತಿಳಿಯಲು ಬೇರೆಯವರಿಂದ ಹೇಳಿಸಿಕೊಳ್ಳಬೇಕಾಯಿತಲ್ಲ ಎನಿಸಿತು. ಅಪ್ಪನ ಮಾತಿನಂತೆಯೇ ಅಮ್ಮನ ವರ್ಷಾಬ್ಧಿಕ ಸರಳವಾಗಿ ನಡೆಯಿತು. ಮುಂದೆ ಎರಡೇ ತಿಂಗಳಲ್ಲಿ ನಡೆದ ಮಾವನ ಮಗಳ ಮದುವೆಗೆ ಅಕ್ಕ ಮತ್ತು ನಾವೆಲ್ಲ ಹೋಗಿ ಬಂದೆವು. ಅನಾರೋಗ್ಯದ ಕಾರಣದಿಂದ ಅಪ್ಪ ಬರಲಾಗಲಿಲ್ಲ. ನಮ್ಮಿಂದಾದ ಸಹಾಯದಿಂದ ಎಷ್ಟೋ ಭಾರ ಕಡಿಮೆಯಾಯಿತೆಂದು ಮಾವ ನನ್ನ ಕೈ ಹಿಡಿದು ಹೇಳಿದರು.

ಈ ನಡುವೆ ಅಪ್ಪನ ಆರೋಗ್ಯದಲ್ಲಿ ಏರು ಪೇರಾಗುತ್ತಿತ್ತು. ಅಮ್ಮ ಹೋದಮೇಲೆ ಅವರು ತುಂಬಾ ಇಳಿದು ಹೋಗಿದ್ದರು. ಅಲ್ಲದೆ ಸಕ್ಕರೆ ಕಾಯಿಲೆಯು ಕಾಡುತ್ತಿತ್ತು. ಒಂದು ಬೆಳಿಗ್ಗೆ ಅವರು ನಿದ್ದೆಯಿಂದ ಏಳಲೇ ಇಲ್ಲ. ಅಮ್ಮನ ನಂತರ ಅಪ್ಪನ ಅನಿರೀಕ್ಷಿತ ಸಾವು ನನ್ನನ್ನು ಅಧೀರನನ್ನಾಗಿ ಮಾಡಿತು. ಹೇಗೋ ದಿನಗಳು ಕಳೆದು ವರ್ಷವೂ ಮುಗಿದಿದೆ.

ಅಪ್ಪ ತನ್ನ ಆಸ್ತಿಯ ಬಗ್ಗೆ ವಿಲ್ ಮಾಡಿರಲಿಲ್ಲ. ಅಕ್ಕ ಮತ್ತು ನನ್ನ ನಡುವೆ ಹಣದಾಸೆಯಿಂದ ವೈಮನಸ್ಯ ಬರಲು ಸಾಧ್ಯವಿಲ್ಲ ಎಂದು ಅಪ್ಪನಿಗೆ ತಿಳಿದಿತ್ತೇನೋ. ಹಣದ ಬಗ್ಗೆ ಆಸಕ್ತಿಯಾಗಲೀ ಅಥವಾ ಆಸೆಯಾಗಲೀ ನನ್ನಲ್ಲಿ ಇರಲಿಲ್ಲ. ಎಷ್ಟು ಮಹಾ ಹಣ ಇರಬಹುದೆಂಬ ತಾತ್ಸಾರದಿಂದಲ್ಲ. ಕಷ್ಟಪಟ್ಟು ಕೂಡಿಟ್ಟ ಹಣ ಎಂಬ ಕಾರಣಕ್ಕೆ. ಅಂತೆಯೇ ನಾನು ಅಕ್ಕ ಭಾವ ಮತ್ತು ಮೂರ್ತಿಯವರ ಸಮಕ್ಷಮದಲ್ಲಿ ಅಭಿಪ್ರಾಯ ತಿಳಿಸಿದೆ. ನನಗೆ ಮನೆ ಇರುವುದರಿಂದ ಹೆಣ್ಣುಮಗಳಾದ ಮಾನಸಳಿಗೇ ಅಪ್ಪನ ಹಣ ಸೇರಬೇಕೆಂದು. ಅಕ್ಕ ಭಾವನದೂ ಅದೇ ಹಾಡು, ಮಗನಾಗಿ ಎಲ್ಲಾ ಜವಾಬ್ಧಾರಿಗಳನ್ನೂ ನಿಭಾಯಿಸುತ್ತಿರುವ ನನಗೊಬ್ಬನಿಗೇ ಅದರ ಮೇಲೆ ಹಕ್ಕು ಇರುವುದೆಂದು. ಹಿರಿಯವರಾದ ಮೂರ್ತಿಯವರದೇ ಕೊನೆಯ ಮಾತಾಯಿತು. ಮಾನಸಳಂತೆಯೇ ಸ್ವಾತಿಯನ್ನೂ ಕೂಡ ಅಪ್ಪ ಮಗಳಂತೆಯೇ ನೋಡಿದ್ದರು. ಅವರಿಬ್ಬರಿಗೇ ಹಣ ಸೇರಲಿ ಎಂಬ ಅವರ ಅಭಿಪ್ರಾಯದ ನಂತರ ಯಾರಿಂದಲೂ ಮುಂದಿನ ಮಾತು ಬರಲಿಲ್ಲ.

ಒಂದೆರಡು ಬಾರಿ ಮಾನಸ ಮನೆಗೆ ಬಂದಾಗ ಹಣದ ವಿಚಾರ ಬಂದಾಗಲೆಲ್ಲಾ ಹೇಗೋ ಮಾತು ತಪ್ಪಿಸುತ್ತಿದ್ದಳು. ಈ ಸೂಕ್ಷ್ಮ ತಿಳಿದ ಸ್ವಾತಿ "ಮನು ಈ ವಿಚಾರವನ್ನು ನನಗೆ ಬಿಡಿ, ಹೇಗಾದರು ಮಾಡಿ ಮಾನಸಾಳನ್ನು ಒಪ್ಪಿಸಿ, ಅಪ್ಪನ ವರ್ಷಾಬ್ಧಿಕವಾದ ಮೇಲೆ ನಾನು ಅವಳಿಗೆ ಯಾವ ರೂಪದಲ್ಲಾದರೂ ತಲುಪಿಸುತ್ತೇನೆ. ಅವಳಿಗೆ ನೋವಾಗದಂತೆ ನೋಡಿಕೊಳ್ಳುತ್ತೇನೆ'' ಎಂದು ಹಿರಿಯಳಂತೆ ಭರವಸೆಯ ಮಾತುಗಳಾಡಿದಾಗ ಯಾಕೋ ಆ ಕ್ಷಣಕ್ಕೆ ಏನೂ ವಿಚಾರಿಸದೆ ಹೂಂ ಗುಟ್ಟಿದೆ. ನನ್ನ ಅನುಮತಿ ಸಿಕ್ಕ ಕೆಲವೇ ದಿನಗಳಲ್ಲಿ ಸ್ವಾತಿ ತನ್ನ ಕಾರ್ಯ ಸಾಧಿಸಿದಂತಿತ್ತು. "ನೋಡಿ ಮನು ಹೇಗೋ ಒಪ್ಪಿಸಿದ್ದೀನಿ, ನೀವು ಅದ್ಯಾಕೆ ಇದ್ಯಾಕೆ ಎಂದೆಲ್ಲ ಕೇಳಲು ಶುರು ಮಾಡಬೇಡಿ'' ಎಂಬ ತಾಕೀತು ಸ್ವಾತಿಯಿಂದ ಬಂದಿತು. ಒಂದು ತಿಂಗಳಿಂದಲೂ ಇಬ್ಬರು ಹೊರಗೆ ಹೋಗುತ್ತಿದ್ದನ್ನು ಮನು ಕೆಲವು ಬಾರಿ ನೋಡಿದ್ದ. ಹೆಚ್ಚು ವಿಚಾರಿಸಲು ಹೋಗಿರಲಿಲ್ಲ.

ನಾಳೆ ಇನ್ನು ಮಾನಸ ಮನೆಗೆ ಹೊರಡುತ್ತಾಳೆ. ಎಲ್ಲಾ ರೆಡಿಯಿದೆಯಾ ಎಂದು ಸ್ವಾತಿಯನ್ನೇ ಕೇಳಿದರಾಯಿತು ಎಂದು ಮನು ತನ್ನ ಯೋಚನಾ ಲಹರಿಗೆ ಕಡಿವಾಣ ಹಾಕಿ ಎದ್ದು ಕಾಫಿಗೆಂದು ಅಡಿಗೆ ಮನೆಕಡೆಗೆ ಹೊರಟ. "ನೀನು ನಿದ್ದೆ ಮಾಡ್ತಿದ್ದೆ ಅಂತ ಎಬ್ಬಿಸಲಿಲ್ಲ ಕಣೊ, ನಿಂಗು ಸುಸ್ತಾಗಿತ್ತಲ್ವ, ನಾವು ಹೊರಗೆ ಹೋಗಿ ಬಂದ್ರೂ ನಿಂದು ನಿದ್ದೆ ಮುಗಿದಿರಲಿಲ್ಲ. ಅದಕ್ಕೆ ಕಾಫಿಗೆ ಎಬ್ಬಿಸಲಿಲ್ಲ'' ಎಂದು ಹೇಳಿದ ಮಾನಸ ಕೈಗೆ ಕಾಫಿ ಲೋಟ ಕೊಟ್ಟು ಕೂರಿಸಿದಳು. ಹಾಗೆ ಕಾಫಿ ಕುಡಿಯುತ್ತಿರುವಾಗ ದೇವರ ಮುಂದೆ ಹೂವಿನ ಜೊತೆಯಲ್ಲಿ ಎರಡು ಬಾಕ್ಸುಗಳು ಕಾಣಿಸಿದವು. ಏನು ಎಂಬ ಕುತೂಹಲದ ನೋಟಕ್ಕೆ ಸ್ವಾತಿಯ ಉತ್ತರ ರೆಡಿಯಾಗಿತ್ತು.

"ನೋಡಿ ಮನು ನಾನು ಹೇಳಿರಲಿಲ್ವ ಎಲ್ಲಾ ನೋಡ್ಕೋಳ್ತೀನಿ ಅಂತ, ಅಪ್ಪನ ದುಡ್ಡು ಪೋಲಾಗದ ಹಾಗೆ ಪ್ಲಾನ್ ಮಾಡಿದ್ದೀನಿ. ಮಾನಸಳ ಮಗಳ ಕಾಲಕ್ಕೂ ಅದು ದೊಡ್ಡ ಇನ್ವೆಸ್ಟ್ಮೆಂಟ್ ಆಗಬೇಕು ಅಂತ ಅವರ ಒಪ್ಪಿಗೆ ಪಡೆದೇ ನಮ್ಮಿಬ್ಬರಿಗೂ ಒಂದೇ ತರಹದ ಡೈಮಂಡ್ ಸೆಟ್ ತೆಗೆದಿದ್ದೇನೆ. ಎರಡು ಸೇರಿ ಎಂಟು ಲಕ್ಷ ಆಗಿದೆ. ಅಕ್ಕನೂ ಖುಷಿಯಾಗಿದ್ದಾರೆ. ಅದು ಮುಖ್ಯ ಅಲ್ವ. ನೋಡಿ ಹೇಗೆ ಹೊಳೀತಾ ಇದೇ ಅಂತಾ. ಹಾಗೆ ನೋಡ್ಬಿಟ್ಟು ಬೀರುವಿನಲ್ಲಿ ಇಟ್ಟುಬಿಡ್ತೀರ?'' ಎಂದು ಹೇಳಿ ಎರಡೂ ಬಾಕ್ಸ್‌ಗಳನ್ನೂ ಕೈಗೆ ಕೊಟ್ಟಳು.

ಅಪ್ಪನ ಶ್ರಮದ ಉಳಿತಾಯಕ್ಕೆ ಸರಿಯಾದ ಗೌರವ ಸಂದಾಯವಾಗಲಿಲ್ಲವೇನೋ ಎಂಬ ನೋವು ಮನುವಿನ ಮನದಲ್ಲಿ ಮೂಡಿತು. ಅವರ ಆದರ್ಶಗಳಿಗೆ ವಿರುದ್ಧವಾದ ಕೆಲಸವಾಯಿತೇನೋ ಎಂಬ ಶಂಕೆ ಮೂಡಿತು. ಆದರೆ ಈಗ ಏನೂ ಮಾಡುವಂತಿರಲಿಲ್ಲ. ಒಟ್ಟಿನಲ್ಲಿ ಹಣ ಬೇಡಾ ಎಂದಿದ್ದ ಮಾನಸ ಇದಕ್ಕೆ ಸಂತೋಷದಿಂದ ಒಪ್ಪಿದ್ದಾಳೆ. ಸ್ವಾತಿಯೂ ತಾನೇನೋ ಸಾಧಿಸಿದವಳಂತೆ ಖುಷಿಯಾಗಿದ್ದಾಳೆ.

ತಲೆಯಲ್ಲಿ ವಿಚಾರಗಳ ಮಂಥನ ನಡೆಯುತಿತ್ತು, ಹಾಗೆಯೇ ಮನು ಮತ್ತೊಮ್ಮೆ ಬಾಕ್ಸ್ ತೆಗೆದು ನೋಡಿದ. ಬಿಳೀ ಹರಳುಗಳು ನಕ್ಷತ್ರಗಳಂತೆ ಹೊಳೆಯುತ್ತಿದ್ದವು. ಮತ್ತೆ ಮತ್ತೆ ಬಗ್ಗಿ ನೋಡಿದ ಮನುವಿಗೆ ಅಲ್ಲಿ ಎಣ್ಣೆ ಇಳಿದು ಮಂಕಾಗಿದ್ದ ಬಿಳಿ ಹರಳಿನ ಓಲೆ ಹಾಕಿಕೊಂಡು ನಿಟ್ಟುಸಿರು ಬಿಡುತ್ತಿದ್ದ ಅಮ್ಮನ ಮುಖ ಕಂಡ ಹಾಗಾಯಿತು.

***

ಸಂ ದ ರ್ಶ ನ

ಎಲ್ಲ ಶಿಷ್ಟಪದ ಸೃಷ್ಟಿಗೂ
ಜನಪದವೇ ಮಾತೃ . . .

ಮೃತ್ಯುಂಜಯ ಹರ್ತಿಕೋಟೆ
ಕ್ಯಾಲಿಫ಼ೋರ್ನಿಯ

# ಡಾ. ಸಾ. ಶಿ. ಮರುಳಯ್ಯನವರೊಡನೆ

**ಮೃತ್ಯುಂಜಯ:** ನವೋದಯ, ಬಂಡಾಯಗಳ ಗಂಭೀರತೆಗಿಂತ ಲಲಿತ ಪ್ರಬಂಧಗಳ ರೀತಿಯ ಕಥೆ-ಕವನ ಇತ್ತೀಚೆಗೆ ಹೆಚ್ಚಾಗಿ ಬರುತ್ತಿವೆ. ನಿಮಗೂ ಹಾಗೆ ಅನಿಸಿದೆಯೆ? ಅನಿಸಿದ್ದರೆ ನಿಮ್ಮ ಅಭಿಪ್ರಾಯದಲ್ಲಿ ಅದಕ್ಕೆ ಕಾರಣವೇನು ?

**ಸಾಶಿಮ:** ಕನ್ನಡದಲ್ಲೇ ಆಗಲಿ, ಯಾವುದೇ ದೇಶವೇ ಆಗಲಿ, ಆಧುನಿಕ ಯುಗದಲ್ಲಿ ಬಹುಶಃ ಪ್ರಪಂಚದ ಅನೇಕ ವಿಷಯಗಳು ನಮಗೆ ವೇದ್ಯವಾಗುತ್ತ ಇವೆ. ಬಹು ವೇಗವಾಗಿ ನಮಗೆ ಸಿಗ್ತಾ ಇವೆ. ಮೊದಲು ಅದಕ್ಕೆಲ್ಲ ಅಷ್ಟು ವ್ಯವಸ್ಥೆ ಇದ್ದಿಲ್ಲ. ಸಮೂಹ ಮಾಧ್ಯಮಗಳಿಂದ ನಾವು ಸಾಕಷ್ಟು ಕಲೀತಾ ಇದ್ದೇವೆ ಮತ್ತು ಅದಕ್ಕೆ ತಕ್ಕಂತೆ ನಮ್ಮವರೆಲ್ಲರೂ ಅದಕ್ಕೆ ಪ್ರತಿಕ್ರಿಯೆಯನ್ನ ಕೂಡ ವ್ಯಕ್ತಪಡಿಸ್ತಾ ಇದ್ದಾರೆ. ಈಗಿನದ್ದು ಒಂದು ವೈಚಾರಿಕ ಯುಗ. ಒಂದು ರೀತಿಯಲ್ಲಿ ಭಾವನಾತ್ಮಕವಾಗಿ ಹೇಳ್ತಾ ಇದ್ದಂಥ ಭಾವಗೀತೆಗಳ ಯುಗ ಹೋಯಿತು ಈಗ. ಅದು ರಮ್ಯ, ಎಲ್ಲವೂ ಸುಂದರವಾಗಿದೆ ಎಂದು ಹೇಳಿಕೊಂಡು ಹೋದವರು, ವಾಸ್ತವಿಕ ನೆಲಗಟ್ಟಿನ ಮೇಲೆ ನಿಂತವರೇ ಅಲ್ಲ. ಅಂಗೈನಲ್ಲಿ ಆಕಾಶ ತೋರಿಸಿಬಿಟ್ಟವರು. 'ಆಹಾ ಚೆಲುವೆ, ಓಹೋ ಸುಂದರಿ' ಎಂದು ಕೈಗಳಲ್ಲಿ ಹೂವು ಇತ್ಯಾದಿಗಳನ್ನ ಹಿಡಿದುಕೊಂಡು ಹೋದವರು. ಸ್ವಲ್ಪ ಮಟ್ಟಿಗೆ ವಿಚಾರ ಶಕ್ತಿಯನ್ನು ತಂದುಕೊಟ್ಟವರು ಇತ್ತೀಚೆಗೆ ಬಂದಂತಹ ನವ್ಯ, ಪ್ರಗತಿಶೀಲ ಇತ್ಯಾದಿಗಳು ಬದುಕನ್ನ ಕೆಣಕತಾ ಇವೆ, ಬೆದಕತಾ ಇವೆ. ಈ ವಿಚಾರದಲ್ಲಿ ಈ ದಲಿತ ಬಂಡಾಯಗಾರರು ಸಂಪೂರ್ಣವಾಗಿ ನಮ್ಮ ಕನ್ನಡದ ಒಂದು ಸಾಹಿತ್ಯಾವಲೋಕನ ಮಾಡಿ ಅದರ ಜೊತೆಗೆ ತೌಲನಿಕವಾಗಿ ಇತರ ದೇಶದ ಇನ್ನಿತರ ಭಾಷೆಗಳಲ್ಲಿರುವ ಸಾಹಿತ್ಯದೊಡನೆ ನಿಲ್ಲಿಸಿ ನೋಡ್ತಾ ಇದ್ದಾರೆ. ಇದರಿಂದ ಏನಾಗ್ತದೆ ಅಂದರೆ ನಮ್ಮಲ್ಲಿರುವ ದೋಷಗಳೂ ಗೊತ್ತಾಗ್ತಾ ಇವೆ ಮತ್ತು ನಮ್ಮಲ್ಲಿರುವ ಗುಣಗಳೂ (ಮೆರಿಟ್) ಗೊತ್ತಾಗ್ತಾ ಇವೆ. ಅಂದರೆ ಗುಣ-ದೋಷಗಳನ್ನು ಹೆಕ್ಕಿ ತೆಗೆದು, ಗುಣಗಳನ್ನೂ ತೋರಿಸ್ತಾ, ನಮ್ಮಲ್ಲೂ ಇಂತಹದ್ದಿದೆ ಎಂದು ತೋರಿಸುತ್ತಿರುವದರಿಂದ ಇವರಲ್ಲಿ ವೈಚಾರಿಕತೆ ಜಾಸ್ತಿ ಆಗಿದೆ. ನಿಜವಾಗ್ಲೂ ಹೇಳಬೇಕೆಂದರೆ ನಿಜವಾದಂತಹ ವಿಚಾರಶಕ್ತಿ ಅದರಲ್ಲೂ ಈ ವೈಜ್ಞಾನಿಕ ದೃಷ್ಟಿ, ಬರವಣಿಗೆಯಲ್ಲಿ ಬಹಳ ಚೆನ್ನಾಗಿ ಬಂದಿದೆ. ವಿಮರ್ಶೆ ಇಷ್ಟರ ಮಟ್ಟಿಗೆ ಇರಲಿಲ್ಲ. ಈಗ ನಿಷ್ಪಕ್ಷಪಾತವಾದ ದೃಷ್ಟಿಯಿಂದ ಖಂಡತುಂಡವಾಗಿ ಹೇಳುವಂಥ ವಿಮರ್ಶೆ ಬರ್ತಾ ಇರೋದರಿಂದ ಸಣ್ಣ ಕಥೆಗಳಲ್ಲೂ ಹೊಸತನ ಬರ್ತಾ ಇದೆ. ಹಾಗೇ ತಾವು ಹೇಳಿದಂತೆ ಲಲಿತ ಪ್ರಬಂಧಗಳಲ್ಲೂ ಕೂಡಾ – ಹಾಗೆ ಹೇಳಬೇಕೆಂದರೆ ಪ್ರಬಂಧ ಯುಗ ಬಿದ್ದು ಹೋಗಿದೆ ಈಗ. ನವ್ಯದ ಬಗ್ಗೆ ನಾನು ಯಾತಕ್ಕೆ ಹೇಳ್ತಾ ಇದ್ದೆ ಅಂದರೆ, ನವ್ಯ ಸಾಹಿತ್ಯ ಸೃಷ್ಟಿಯ ನಂತರದಲ್ಲಿ ಈ ಪ್ರಬಂಧಗಳು, ನೀಳ್ಗವನಗಳೂ, ಕಥನ ಕವನಗಳು ಹಿಂದಕ್ಕೆ ಸರಿದುಬಿಟ್ಟವು. ಈಗ ಪ್ರಬಂಧಗಳು ಅಂತಂದರೆ ಹಿಂದೆಲ್ಲ ಈ ಸ್ಟೀಲ್, ಅಡಿಸನ್ ಇತ್ಯಾದಿಗಳು ಮಾಡ್ತಾ ಇದ್ದಂತಹದು. ನಮ್ಮಲ್ಲಿ ಕೂಡ ಪು. ತಿ. ನರಸಿಂಹಾಚಾರರೂ ಬರೆದಿದ್ದಾರೆ, ಅದರಲ್ಲಿ ಎ. ಎನ್. ಮೂರ್ತಿರಾಯರು ಅದ್ಭುತವಾಗಿರತಕ್ಕಂತಹ ಪ್ರಬಂಧಗಳನ್ನ ಬರೆದಿದ್ದಾರೆ. ಈ ಪ್ರಬಂಧ ಸಾಹಿತ್ಯ ಪ್ರಕಾರ ನಿಂತು ಹೋಗಿಬಿಟ್ಟಿತು ಹೆಚ್ಚಾಗಿ. ಅಂದರೆ ವೈಚಾರಿಕತೆಯನ್ನ ತರೋದಕ್ಕೆ ಕಷ್ಟವಾಗಿಬಿಡುತ್ತೆ ಅಂತ ಅಲ್ಲ, ಕಥೆ ಹೇಳಬೇಕು ಆದರೆ ಕಥೆ ಇಲ್ಲ ಅಂತ ಅಲ್ಲ. ಇದರಲ್ಲಿ ಏನಾಗುತ್ತೆ ಅಂದರೆ ಶುಷ್ಕ ಬರಹ ಆಗಿಬಿಡುತ್ತದೆ. ಅದರ ಬದಲಾಗಿ ತಾವು ನೈಜವಾದ ನೆಲಗಟ್ಟಿನ ಮೇಲೆ ನಿಂತು ಸಂಪೂರ್ಣವಾಗಿ ಅವಲೋಕಿಸ್ತಾರೆ. ಅವರಿಗೆ ಪೂರ್ವ ಪಶ್ಚಿಮಗಳ ಪರಿಚಯ ಇದೆ. ಈ ಒಂದು ಹೊಸ ಬೆಳಕಿನಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಹೀಗಾಗಿ ಹೊಸ ಪಥದಲ್ಲಿ ತಾವು ಸಾಗ್ತಾ ಇರುವದರಿಂದ ಅಲ್ಪ ಸ್ವಲ್ಪ ಅನುಕರಣೆ ಇರಬಹುದು. ಆದರೆ ಅನುಕರಣೆಗಿಂತ ಹೆಚ್ಚಾಗಿ ಸ್ವೋಪಜ್ಞತೆಯನ್ನು ತಾವು ಸಂಪೂರ್ಣವಾಗಿ ಮೆರೆದಿದ್ದಾರೆ. ಪ್ರಯತ್ನಪೂರ್ವಕವಾಗಿ ಅಲ್ಲದೆ ಇದ್ದರೂ ಅಪ್ರಯತ್ನ ಪೂರ್ವಕವಾಗಿ ಸಾಕಷ್ಟು ಮಟ್ಟಿಗೆ ಬಂದಿವೆ ಅಂತ ಅನಿಸುತ್ತದೆ.

**ಮೃ:** ನಿಮ್ಮ ಕಾಲಕ್ಕೂ, ಈಗಿನ ಕಾಲಕ್ಕೂ, ಬರವಣಿಗೆಯ ಶೈಲಿ, ಅಂದರೆ ರೂಪ ಮತ್ತು ತಂತ್ರಗಳಲ್ಲೂ, ಹಾಗು ವಿಷಯಗಳಲ್ಲೂ ಬದಲಾವಣೆ ಆಗಿದೆ ಎಂದು ಅನಿಸುತ್ತದೆಯೆ? ಆಗಿದ್ದರೆ ಯಾವ ರೀತಿಯಲ್ಲಿ.

**ಸಾ:** ಖಂಡಿತ ಆಗಿದೆ. ಒಂದು ರೀತಿಯಲ್ಲಿ ವಸ್ತುವಿನಲ್ಲಿ 'ಹಾಡಿದ್ದೆ ಹಾಡೋ ಕಿಸಬಾಯಿ ದಾಸ' ಎನ್ನುವಂತೆ ಒಂದರಲ್ಲೇ ಸುತ್ತುತ್ತಾ ಇತ್ತು. ಹಿಂದೆ ಕಂಡು ಬರ್ತಾ ಇದ್ದ ಕಥೆಗಳಲ್ಲಿ ಪ್ರಣಯ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಇತ್ಯಾದಿಗಳೆಲ್ಲ ಬರ್ತಾ ಇದ್ದವು. ಆದರೆ ಈಗ ಏನಾಗಿದೆ ಅಂದರೆ ವ್ಯಾಪಕ ದೃಷ್ಟಿಕೋನದಲ್ಲಿ ನಿಂತು ನೋಡ್ತಾ ಇದ್ದಾರೆ. ಮನುಷ್ಯನನ್ನ ಮನುಷ್ಯನ ನೆಲೆಯಲ್ಲಿ ನಿಂತು ನೋಡ್ತಾ ಇದ್ದಾರೆ. ಆವಾಗ ಒಂದು ರೀತಿಯಲ್ಲಿ ಯಾವದೋ ಒಂದು ಧಾರ್ಮಿಕ ಸಾಹಿತ್ಯವೋ, ಮತ್ತೊಂದೇನೋ ಬರ್ತಾ ಇದ್ದರೆ, ಈಗ ಅದರ ಒಂದಲ್ಲ ಒಂದು ಸೆಲೆ ಕಥೆಗಳಲ್ಲಿ ಬರುತ್ತದೆ, ಆದರೆ ಆ ಕಥೆಗಳಿಗಿಂತ ವೈಚಾರಿಕ ದೃಷ್ಟಿಯಿಂದ ನೋಡತಕ್ಕಂತಹ ಭಾವನೆ ಇತ್ತೀಚೆಗೆ (ಎಲ್ಲದರಲ್ಲೂ ಅಲ್ಲ, ಕೆಲವನ್ನು ಬಿಟ್ಟು) ಬರ್ತಾ ಇರೋದು ಬಹಳ ಸಂತೋಷದ ವಿಚಾರ. ತಂತ್ರದ ದೃಷ್ಟಿಯಿಂದ, ಹಿಂದೆ ಮೊದಲು ಸಣ್ಣ ಕಥೆಗಳು ಬಂದದ್ದು ಇಂಗ್ಲೀಷಿನಿಂದ, ಕಾದಂಬರಿಗಳು ಬಂಗಾಳದಿಂದ ಬಂತು, ಭಾವಗೀತೆಗಳು, ಪ್ರಬಂಧಗಳು, ಪ್ರವಾಸಕಥೆಗಳು, ಪತ್ತೆದಾರಿ

ಕಥೆಗಳು ಅಲ್ಲದೆ ಆತ್ಮ ಚರಿತ್ರೆಗಳು ಹೊರಗಿನಿಂದ ಬಂದಂತಹವೆ. ಇವೆಲ್ಲವುದರ ದೃಷ್ಟಿಯಿಂದ ಈಗ ಮಾರ್ಪಾಟಾಗಿರುವದನ್ನು ಕಾಣ್ತೇವಿ. ಟೆಕ್ನಿಕ್ಕಿನಲ್ಲಿ ಏನಾಗ್ತದೆ ಅಂದರೆ, ಸಧ್ಯ ತನ್ನ ಜೀವನದ ಗುರಿ ಯಾವುದು ಯಾವ ಕಡೆ ಸಾಗುತ್ತಾ ಇದೆ, ಪ್ರಪಂಚದ ಪರಿಸರಕ್ಕೆ ಸ್ಪಂದಿಸತಕ್ಕಂತಹ ಲೇಖಕ ಅದರ ಆಗು ಹೋಗುಗಳ ಕಡೆಗೆ ಎಚ್ಚರ ವಹಿಸಿದಾನೆ ಈಗ. ಯಾವದೋ ಒಂದು ಆದರ್ಶವನ್ನು ತೋರಿಸುವುದಕ್ಕೋಸ್ಕರ ತಾನು ಹೋಗ್ತಾ ಇಲ್ಲ. ಆದರ್ಶ ಅಲ್ಲಿರಲಿ, ಆದರೆ ನಡೆಯೋ ಮಾರ್ಗವನ್ನ ಕಲ್ಪಿಸಿ ಕೊಡ್ತಾ ಇದ್ದಾನೆ. ಕಲ್ಪಿಸಿ ಕೊಡೊ ಸಂದರ್ಭದಲ್ಲಿ ವ್ಯಾಪಕವಾದ ದೃಷ್ಟಿ ಅವನಲ್ಲಿ ಬೆಳೆದುಕೊಂಡು ಬಂದಿದೆ. ಸಂಕುಚಿತತೆಯನ್ನ ಕಳೆದುಕೊಂಡಿದೆ. ಆದ್ದರಿಂದ ಟೆಕ್ನಿಕ್ಕಿನಲ್ಲಿ ವಸ್ತುವಿನ ಆಯ್ಕೆ, ಹೇಳ್ತಕ್ಕಂತಹ ವಿಧಾನ ಇವು ಬದಲಾಗಿರುವದು ಗೊತ್ತಾಗ್ತದೆ. ತರಾಸು zero - zero = zero ಅಂತ ಶುರುಮಾಡಿದರು. ಅಲ್ಲಿಂದ ನಮ್ಮ ಸಣ್ಣ ಕಥೆಗಳಲ್ಲಿ ಒಂದು ಹೊಸ ತಂತ್ರ ಶುರುವಾಯಿತು. ಇತ್ತೀಚೆಗೆ ತುಂಬಾ ಚೆನ್ನಾಗಿ ಬೆಳೆದು ಬಂದಿರುವದನ್ನು ನಾವು ಕಾಣ್ತೇವೆ. ಹೀಗೆ ಸಣ್ಣ ಕಥೆಗಳಲ್ಲಿ ಹೊಸತನ ಆಧುನಿಕ ತಂತ್ರ ಬೆಳೆದುಕೊಂಡು ಬಂದಿದೆ. ಹಾಗೆ ಕಾದಂಬರಿಗಳಲ್ಲಿ ಹಳೆಯ ವಸ್ತುವನ್ನೇ ಹೊಸ ರೂಪದಲ್ಲಿ ನೋಡತಕ್ಕಂತಹ ದೃಷ್ಟಿ ಬಂದಿದೆ. ಹೊಸ ದೃಷ್ಟಿ ಅಷ್ಟೇ ಅಲ್ಲ, ಬೇರೆ ಬೇರೆ ಬೆಳಕಿನಲ್ಲಿ ತಮ್ಮನ್ನ ಗುರುತಿಕೊಳ್ಳುವ ಸಾಹಸ ಮಾಡ್ತಿದ್ದಾರೆ. ಪ್ರವಾಸಕಥನ, ಆತ್ಮ ಕಥನ ಮುಂತಾದವುಗಳಿಗಿಂತ ವಿಮರ್ಶೆಯಲ್ಲಿ ಬಹಳ ಮಟ್ಟಿಗೆ ಕೆಲಸವಾಗುತ್ತ ಇದೆ. ನಿಷ್ಪಕ್ಷಪಾತವಾದ, ನಿರ್ದಿಷ್ಟವಾದ ಮತ್ತು ಯಾವುದೇ ಪೂರ್ವಗ್ರಹವಿಲ್ಲದೆ ಹೇಳತಕ್ಕಂತಹದ್ದು ಬರ್ತಾ ಇದೆ. ಹೊಗಳಿಕೆ ತೆಗಳಿಕೆಗಳ ಹೊರಗೆ ನಿಂತು ಒಂದು ನಿಜವಾದ ನಿಲುವಿನಲ್ಲಿ ನೋಡುವ ವಿಮರ್ಶೆ ಕೂಡ ನಮ್ಮಲ್ಲಿ ಬಹಳ ಮಟ್ಟಿಗೆ ಪ್ರಚಲಿತವಾಗಿ ಬಂದಿದೆ.

**ವ್ಯ:** ಈ ಬದಲಾವಣೆಗಳಿಗೆ ಲೇಖಕರ, ಓದುಗರ ಅಭಿರುಚಿಗಳ ಬದಲಾವಣೆ ಕಾರಣವೋ ಅಥವಾ ಜಾಗತೀಕರಣದಿಂದ ಈ ಬದಲಾವಣೆಗಳು ಅನಿವಾರ್ಯವೋ?

**ಸಾ:** ಅಭಿರುಚಿಗಳ ಬದಲಾವಣೆ ಖಂಡಿವಾಗಿಯೂ ಒಂದು ಕಾರಣ. ಜಾಗತೀಕರಣವೂ ಸ್ವಲ್ಪ ಮಟ್ಟಿಗೆ ಕಾರಣವಾಗಿದೆ. ಆದರೆ ಜಾಗತೀಕರಣದಿಂದ ಹೆಚ್ಚಾಗಿ ಅನ್ಯಾಯವಾಗಿದೆ. ನ್ಯಾಯವಾಗಿ ಹೇಳಬೇಕೆಂದರೆ ಬೇಡಿಕೆ ಬಂದಾಗ ಮಾರ್ಕೆಟ್ಟಿಗೆ ಮಾಲು (ಸರಕು) ಬರುತ್ತದೆ. ಹಾಗೆ ಜನರಲ್ಲಿ ಅಪೇಕ್ಷೆ ಬಂದಿದೆ. ಇವತ್ತಿನ ದಿವಸ ಅಭಿರುಚಿ ಬದಲಾಗಿದೆ, ಮನೋಧರ್ಮ ಕೂಡ ಬದಲಾಗಿದೆ. ಅದನ್ನ ನೋಡಿಕೊಂಡು cater ಮಾಡ್ತಾನೆ ಲೇಖಕನಾದವನು. ಅಂದರೆ ಅವರಿಗಾಗಿ ಅದನ್ನ ಹುಡುಕಿಕೊಂಡೇ ಹೋಗ್ತಾನೆ ಅಂತ ಅಲ್ಲ. ತನಗೂ ಹಾಗೆ ಅನಿಸುತ್ತದೆ. Man is the product of social environment ಮನುಷ್ಯ ಪರಿಸರದ ಶಿಶು. ಪರಿಸರದ ಪ್ರಜ್ಞೆ ಇಲ್ಲದೆ ಯಾರೂ ಬರೆಯುವದಕ್ಕಾಗುವದಿಲ್ಲ. ಇತಿಹಾಸದ ಹಿನ್ನೆಲೆಯಿಲ್ಲದೆ ಯಾರೂ ಬರೆಯುವದಕ್ಕಾಗುವದಿಲ್ಲ. ಅಂತಹ ಸಂದರ್ಭದಲ್ಲಿ ಇಂದಿನದನ್ನ ನೋಡ್ತಾನೆ, ಹಿಂದಿನದನ್ನ ನೋಡ್ತಾನೆ. ಅದರಲ್ಲಿ ಯಾವುದಾದರೂ ದೋಷವಿದ್ದರೆ ಅದನ್ನು ಎತ್ತಿ ಹಿಡೀತಾನೆ. ಗುಣ ದೋಷಗಳನ್ನ ಎತ್ತಿ ಹಿಡಿಯುವ ಛಾತಿ ಈಗ ಬಂದುಬಿಟ್ಟಿದೆ. 'ನಾಯಿಮೊಲೆಯ ಹಾಲು ನಾಯಿ ಮರಿಂಗೆ ಸಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ' ಅಂತ ಬಸವಣ್ಣ ಹೇಳಿದ. ಆಗಿನ ಕಾಲದಲ್ಲಿ ಇತ್ತದು. ಈಗ ನಾಯಿ ಮೊಲೆ ಹಾಲೆ ಪಂಚಾಮೃತಕ್ಕೆ ಯಾಕೆ ಸಲ್ಲಬೇಕು? ನಾಯಿ ಮರಿಗೇ ಅದು ಬೇಕಾಗಿರೋದು. ಪಂಚಾಮೃತಕ್ಕೆ ಏನಾದರೂ ಹಾಕು, ಅದನ್ನ ತೊಗೊಂಡರೆಷ್ಟು ಬಿಟ್ಟರೆಷ್ಟು, ಬರೀ ನೀರು ಕುಡಿದರೂ ನೀನು ಬದುಕ್ತೀಯಾ, ಪೂಜೆ ಆಗುತ್ತದೆ. ಆದರೆ ನಾಯಿ ಮರಿ ಬದುಕಬೇಕು ಅಂದರೆ ಅದರ ತಾಯಿ ಹಾಲು ಬೇಕೇ ಬೇಕು ಅದಕ್ಕೆ. ಈ ತರಹದ ವೈಚಾರಿಕತೆ ಬಂದಿದೆ. ನಾನು ಹೇಳ್ತಿರೋದು ಅವರು ಬೇರೆ ತರಹದ ಅಭಿಪ್ರಾಯ ಇಟ್ಟುಕೊಂಡಿದಾರೆ ಅಂತ ಅಲ್ಲ. ಅವರ ನಿಲುವನ್ನ ಹೇಳ್ತಾ ಇದ್ದೇನೆ. ಈ ತರಹದ ಒಂದು ವೈಚಾರಿಕ ದೃಷ್ಟಿಯಿಂದ ಹಳೆಯ ಸಾಹಿತ್ಯವನ್ನೂ ನೋಡ್ತ ಇದ್ದಾರೆ, ಹೊಸ ಹಾದಿಯನ್ನೂ ತಾವು ಸೃಷ್ಟಿಸ್ತಾ ಇದ್ದಾರೆ. ಜಾಗತೀಕರಣದ ದೃಷ್ಟಿಯಿಂದ ನೋಡಿದರೆ, ನಮ್ಮ ಹಳೆಯ ಎಷ್ಟೋ ಕಸುಬುಗಳೆಲ್ಲ ಹೊರಟುಹೋಗಿಬಿಟ್ಟವು. ನನಗೆ ಅನಿಸ್ತಿತ್ತು, ಕಲೆ ಉಳಿಯಬೇಕಾದರೆ ಕಸುಬಾಗಿ ಉಳಿಯಬೇಕು. ಕಸುಬು ಯಾವಾಗ ಹೋಯಿತೋ, ಕಲೆಯೂ ಹೊರಟು ಹೋಯಿತು. ಹಿಂದೆಲ್ಲ ನೃತ್ಯವನ್ನ ಮಾಡುವ ದೇವದಾಸಿಯರು ದೇವಸ್ಥಾನದಲ್ಲಿ, ಅಲ್ಲಿಂದ ಅರಮನೆಗಳಲ್ಲಿ, ಆಸ್ಥಾನಗಳಲ್ಲಿ ಇರ್ತಾ ಇದ್ದರು. ಒಬ್ಬ ಕವಿ, ವಾಗ್ಮಿ, ವಾದಿ, ಮಂತ್ರಿಮಂಡಲ ಎಲ್ಲ ಇದ್ದಂತೆ ಒಬ್ಬ ನರ್ತಕಿಯೂ ಇರಲೇ ಬೇಕಾಗಿತ್ತು. ಅವರು ನಮ್ಮಲ್ಲಿ ಈ ನೃತ್ಯ ಕಲೆಯನ್ನ, ಸಂಗೀತ ಕಲೆಯನ್ನ, ಲಲಿತ ಕಲೆಯನ್ನ ಉಳಿಸಿಕೊಳ್ಳುತ್ತ ಬಂದರು. ವಿಜಯನಗರದ ಸಾಮ್ರಾಜ್ಯವನ್ನ ನೆನಸಿಕೊಂಡರೆ ಗೊತ್ತಾಗುತ್ತದೆ. ಒಬ್ಬ ಗಾಣದವನನ್ನು ನೋಡಿದರೂ ಇದೇ ಕಾಣುತ್ತದೆ. ಆದರೆ ಈಗ ಗಾಣ ಬಿದ್ದುಹೋಯಿತು, ಇಲ್ಲವೇ ಇಲ್ಲ. ಗಾಣ ಎಂದರೆ ಈಗಿನ ಹುಡುಗರಿಗೆ ಅರ್ಥ ಆಗಲಿಕ್ಕಿಲ್ಲ. ರಾಗಿ ಬೀಸೋದು, ಅಕ್ಕಿ ಕುಟ್ಟುವದು ಇವಕ್ಕೆಲ್ಲ ಬಳಸ್ತಿದ್ದ ಕಲ್ಲು ಹೇಗಿತ್ತು ಅನ್ನೋದನ್ನ ನಮ್ಮ ಮಕ್ಕಳು ಮೊಮ್ಮಕ್ಕಳಿಗೆ ಹೇಳಿ ಕೊಡಬೇಕು. ಮಡಕೆ ಕುಡಿಕೆ ಹೊರಟು ಹೋಯಿತು. ಯಾವಾಗ ಜೀವನಾಧಾರವಾಗಿದ್ದ ಕಸಬು ಹೊರಟು ಹೋಯಿತೋ, ಕಲೇನೂ ಬಿದ್ದು ಹೋಯಿತು.

**ವ್ಯ:** ಇದರಿಂದ ಸಾಹಿತ್ಯಿಕ ಮೌಲ್ಯಗಳು ಕುಂದಿ ಹೋಗಿರುವುದನ್ನ ಗಮನಿಸುತ್ತೀರಾ? ಎಷ್ಟು ಕೃತಿಗಳು ಸಾರ್ವಕಾಲಿಕವಾಗಿ ಉಳಿಯಬಲ್ಲವು ?

**ಸಾ:** ಜೀವನಮೌಲ್ಯಗಳು ಯಾವುದಿರುತ್ತದೋ ಅದು ಸಾಹಿತ್ಯಿಕ ಮೌಲ್ಯವಾಗಿ ಉಳಿಯುತ್ತದೆ. ಎರಡನ್ನು ಉಳಿಸಿಕೊಂಡು ಬೆಳೆಸಿಕೊಂಡಿರತಕ್ಕಂತಹ ಕೆಲವು ಕೃತಿಗಳು ಉಳಿಯೋದಕ್ಕೆ ಸಾಧ್ಯ. ಆದರೆ ಏನಾಗುತ್ತದೆ ಅಂದರೆ, ಈ ಒಂದು ಕಾಲ ಪರಿಧಿಯಲ್ಲಿ ಹೋಗ್ತಾ ಇರಬೇಕೆಂದರೆ ಯಾವದು ಜೊಳ್ಳೊ ಅದು ತೂರಿಹೋಗುತ್ತದೆ, ಯಾವದು ಗಟ್ಟಿ ಕಾಳೊ ಅದು ಉಳಿದುಕೊಳ್ಳುತ್ತದೆ.

**ಮೃ:** ಹಾಗಾದರೆ ಕುವೆಂಪು, ಕಾರಂತ, ಬೇಂದ್ರೆ, ತೇಜಸ್ವಿ, ದೇವನೂರು ಇವೇ ಹೆಸರುಗಳನ್ನೇ ಇಂದೂ ಪುನಃ ಪುನಃ ಕೇಳುತ್ತ ಇರುತ್ತೇವೆ. ಜಾಗತೀಕರಣ, ಜನಪದೀಕರಣ, ನಗರೀಕರಣ ಇತ್ಯಾದಿಗಳಿಂದ ಪ್ರಪಂಚ ಚಪ್ಪಟೆ ಎಂದು ಹೇಳುತ್ತಾರೆ. ಅದು ಸಾಹಿತ್ಯ ಕಲೆಗಳನ್ನು ನುಂಗಿ ಹಾಕಿದೆಯೇ? ಇಲ್ಲವಾದರೆ major poet ಅನ್ನುವವರು ಕಾಣುತ್ತಲೇ ಇಲ್ಲವೆ? ನೀವು ಹೇಳಿದಂತೆ ಈಗ ಬುಟ್ಟಿ ಮಾಡುವವರು, ಕಂಬಳಿ ನೇಯುವವರು, ಕುಂಬಾರರಾಗಲೀ ಇಲ್ಲ. ಕಸುಬಿನ ಜೊತೆಗೆ ಕಲೆ ಬರ್ತಾ ಇತ್ತು. ಉದಾಹರಣೆಗೆ Noam Choamski ಹೇಳ್ತಾನೆ, ಆಫ್ರಿಕಾದಲ್ಲಿ ಆಲೂಗಡ್ಡೆ ಬೆಳೆಯುವವರು ಬೆಳೆ ಒಣಗುತ್ತೆ ಅಂತ 'ಓಹೋ ಆಹಾ' ಎಂದು ಹಾಡು ಹೇಳುವದಕ್ಕೆ ಶುರು ಮಾಡಿದರಂತೆ. ಆ ರೀತಿ poetry ಶುರು ಆಯಿತು. ಅದೇ ರೀತಿ ನಮ್ಮಲ್ಲೂ ಅಕ್ಕಿ ಕುಟ್ಟುವಾಗ ಹಾಡುತ್ತಿದ್ದುದೂ ಇತ್ತು.

**ಸಾ:** (ನಗುತ್ತ) ಸರಿಯಾದ ಪ್ರಶ್ನೆ. ಆಗಿದೆ, ಇಲ್ಲಾ ಅಂತ ಅಲ್ಲ. ಎಲ್ಲ ಶಿಷ್ಟಪದ ಸೃಷ್ಟಿಗೂ ಜನಪದವೇ ಮಾತೃ. ಅಲ್ಲಿಂದಲೆ ಎಲ್ಲ ಬೆಳವಣಿಗೆ ಆಗಿರುವದು. ಮನುಷ್ಯ ಬರೀ ಅನ್ನಕ್ಕಾಗಿ ಬದುಕಿಲ್ಲ. ಆನಂದಕ್ಕಾಗಿ ಬದುಕಿದ್ದಾನೆ. ಆನಂದಕ್ಕೆ ಒಂದು ದಾರಿ ಲಲಿತಕಲೆಗಳು ಅಥವಾ ಕಲೆಗಳು. ಚಿತ್ರ, ಶಿಲ್ಪ, ಸಾಹಿತ್ಯ, ಸಂಗೀತ ಮತ್ತು ನೃತ್ಯ – ಈ ಐದು ಕಲೆಗಳನ್ನ ಲಲಿತ ಕಲೆಗಳು ಅಥವ Fine Arts ಅಂತ ಕರೀತೇವೆ. ಇನ್ನಿತರವನ್ನೆಲ್ಲ ಕಸುಬುಗಳು ಅಥವ Crafts ಅನ್ತೇವೆ. Craftsಗಳಲ್ಲಿ ಆಗುವುದು ಸಾಮೂಹಿಕವಾದ ರಚನೆಗಳು. ಲಲಿತ ಕಲೆಗಳು ಒಬ್ಬ ವ್ಯಕ್ತಿಯ ಏಕಾಂತ ಧ್ಯಾನದಿಂದ ಸೃಷ್ಟಿಯಾದ ಕಲೆ. ಆ ವ್ಯಕ್ತಿ ವಸ್ತುವನ್ನ ಕೊಡುತ್ತಾನೆ, ಬದುಕಿನಲ್ಲಿ ಏನೇನೊ ನೋಡ್ತಾನೆ. ನೋಡಿದಷ್ಟು ಅನುಭವ ಜಾಸ್ತಿ ಆಗ್ತದೆ, ಆಗ ಸಾಹಿತ್ಯ ಅನುಭವದ ಅಭಿವ್ಯಕ್ತಿಯಾಗ್ತದೆ. ಪ್ರಪಂಚದ ಪರಿಸ್ಥಿತಿಗೆ ತಾನು ಸ್ಪಂದಿಸ್ತಾನೆ, ಜೀವನದ ಗತಿ ಎತ್ತ ಸಾಗ್ತಿದೆ ಅನ್ನುವದನ್ನ ಗಮನಿಸ್ತಾನೆ. ಹೀಗಾಗಿ ಎಲ್ಲ ರೀತಿಯಿಂದ ತನ್ನನ್ನ ತಾನು ರೂಪಿಸುಕೊಳ್ಳುವಾಗ ಕೆಲವೊಮ್ಮೆ ತಪ್ಪಲೂ ಬಹುದು. ಹಾಗೆ ಕೆಲವೊಮ್ಮೆ ಅತಿರೇಕಕ್ಕೆ ಹೋದರೆ ಅನಾಹುತವೂ ಆಗಬಹುದು.

**ಮೃ:** ಹಾಗಾದರೆ, 'ರಾಮಾಯಣ ದರ್ಶನಂ' ಅಥವಾ ಎಸ್. ಎಸ್. ಭೂಸನೂರುಮಠರ 'ಏಕಭೂಮಿ ಮಾನವ' ಇವು epic ಅಂತ ಹೇಳ್ತೇವೆ, ಅದರಲ್ಲಿ ನಿಜವಾಗಿಯೂ ಯಾವುದು ಮಹಾಕಾವ್ಯ ಅನ್ನೋದನ್ನ ವಿಮರ್ಶಕರು ತೂಗಿದ್ದಾರೆ. ಅದೇ ರೀತಿ 'ಮಂಟೆ ಸ್ವಾಮಿ ಕಾವ್ಯ' ಇದೆ, 'ಮಲೆ ಮಹಾದೇಶ್ವರ ಕಾವ್ಯ' ಇದೆ, ಜಾನಪದ ಅನ್ನುವಂಥ ಮಹಾಕಾವ್ಯಗಳಿವೆ, ಅವುಗಳೂ ಏಳುನೂರು, ಎಂಟುನೂರು ಪುಟಗಳಷ್ಟು ವಿಸ್ತಾರವಾಗಿವೆ, ವಿಷಯ ವೈವಿಧ್ಯ ಹೊಂದಿವೆ, ಕ್ರಿಯಾಶೀಲತೆ ಇದೆ. ಅವುಗಳನ್ನೂ ಮಹಾಕಾವ್ಯ ಎಂದು ಹೇಳಬಹುದಾ?

**ಸಾ:** ತಮಗೆ ಗೊತ್ತಿರುವಂತೆ ಹಂಪಿ ವಿಶ್ವವಿದ್ಯಾಲಯದಲ್ಲಿ, ಈಗಾಗಲೆ ಹತ್ತು ಕೃತಿಗಳಾಗಿವೆ. ನಾವು ಗಿಲ್ಗಮಿಷ್‌ನ ಕಥೆಗೆ ಹೋಲಿಸಿ ನೋಡಿದರೆ, ನಮ್ಮ ಕಥೆಗಳಲ್ಲಿ ಇರುವಂತಹ ಕರ್ಣ–ದುರ್ಯೋಧನರ ಮೈತ್ರಿಯೇ ದೊಡ್ಡದು ಅಂದುಕೊಂಡವರಿಗೆ; ಗಿಲ್ಗಮಿಷ್–ಎಂಟಿಡೋರ ಸ್ನೇಹ ಅದ್ಭುತವಾದದ್ದು ಅನ್ನುವುದು ತಿಳಿಯುತ್ತದೆ. ಆ ರೀತಿಯಲ್ಲಿ ಮನುಷ್ಯ ಏನು ಬೇಕಾದರೂ ಸಾಧಿಸಬಹುದು, ಆದರೆ ಹುಟ್ಟು ಸಾವುಗಳನ್ನು ಹೊರತುಪಡಿಸಿ ಅನ್ನುವದನ್ನು ಆ ಕೃತಿಯಲ್ಲಿ ಕೊನೆಗೆ ತರುತ್ತಾನೆ ಕರ್ತೃ. ಅದನ್ನ ಕೊನೆಗೆ ಹೇಗೆ ತರುತ್ತಾನೆ ಅನ್ನುವದು ಬರೀ ಜಾನಪದ. ಬರೀ ಕ್ಲೇ ಪ್ಲೇಟುಗಳ ಮೇಲೆ ಬರೆದದ್ದು. ಹಾಗೆ ಜಾನಪದದಲ್ಲಿ ಇರೋ ಒಂದೂ ಕಥೆ ನಮ್ಮಲ್ಲಿ ಬರ್ತಾ ಇಲ್ಲ. ಯಾಕೆ ಅಂದರೆ ಹಾಡಿಗೋಸ್ಕರ ಮಾಡಿರುವ ಕೃತಿಗಳನ್ನ ಹಾಡಿ ಹಾಡಿ repeat ಮಾಡಿಕೊಳ್ತ ಹೋಗುವದರಿಂದ ಸ್ವಲ್ಪ ಮಟ್ಟಿಗೆ ಕಥೆಯ ಓಘ, ಓಟ ಕಡಿಮೆ ಆಗಿಬಿಡುತ್ತದೆ.

**ಮೃ:** ಕಂಬಾರರು ಜಾನಪದದ ಬಗ್ಗೆ ಹೇಳ್ತಾರೆ, ಯಾವದೋ ಒಂದು ಮೂಲ ಕೃತಿಯನ್ನ ಜಾನಪದದವರು, ಹೇಳ್ತಾ, ಹಾಡ್ತಾ, ತಮ್ಮದೇ ಭಾಗಗಳನ್ನ ಸೇರಿಸ್ತಾ ಹೊಸದೇ ಒಂದು ಕೃತಿಯನ್ನಾಗಿ ಮಾಡ್ತಾರೆ ಅಂತ.

**ಸಾ:** ಹೌದು. ಮೂಲ ಕೃತಿಯನ್ನ ಇಟ್ಟುಕೊಂಡೇ ಮುಂದಕ್ಕೆ ಹೋಗ್ತಾರೆ. ಈಗ ನಾನು ಹೇಳ್ತಿದ್ನಲ್ಲಾ, ರಾಮಾಯಣದಲ್ಲಿ ರಾಮ, ಸೀತೆ, ಲಕ್ಷ್ಮಣ, ರಾವಣ ಇಲ್ಲದೆ ರಾಮಾಯಣ ಆಗೋದಿಲ್ಲ. ಹಾಗೆ ಕಾಲ ಕಾಲಕ್ಕೆ 'ತಿಣಿಕಿದನು ಫಣಿರಾಯ' ಅಂತ ಹೇಳುವಷ್ಟು ರಾಮಾಯಣಗಳು ಬಂದವು. ಹಾಗೆ ಕಾಲಕಾಲಕ್ಕೆ ಸಾಮಾಜಿಕ ಪರಿಸ್ಥಿತಿಗೆ ತಕ್ಕಂತೆ, ರಾಜಕೀಯ ಪರಿಸ್ಥಿತಿಗೆ ತಕ್ಕಂತೆ ಬದಲಾವಣೆ ಪಡೀಲೆ ಬೇಕು. ಕವಿ ತನ್ನ ಸಮಕಾಲೀನತೆಯನ್ನ ಸೇರಿಸಲೇ ಬೇಕು. ಸಮಕಾಲೀನತೆಯನ್ನ ಸೇರಿಸಿದಾಗ ಹೊಸದಾಗೇ ಆಗುತ್ತದೆ. ಹಾಗಾಗೋದರಿಂದ ಜಾನಪದದಲ್ಲಿ ಹೆಚ್ಚಿನ ಜನರ ಆಸಕ್ತಿ ಕಡಿಮೆ ಆಗ್ತಾ ಇದೆ.

**ಮೃ:** ಕಾರಣ?

**ಸಾ:** ಉದಾಹರಣೆಗೆ ಕುವೆಂಪು ಅಥವ ಬೇಂದ್ರೆ ಅವರನ್ನ ಜನ ಹೇಗೆ ಆಸಕ್ತಿಯಿಂದ ಓದ್ತಾರೊ, ಹಾಗೆ ಜಾನಪದವನ್ನೂ ಕೂಡ ಆಸಕ್ತಿಯಿಂದ ಓದೋ ಅಂತಹವರು ಬೇಕು. ಈಗ ಕೇವಲ ಕೆಲವು ವಿಶ್ವವಿದ್ಯಾಲಯಗಳಲ್ಲಿ ಆಗ್ತಿರೋ ಹಾಗೆ ಜಾನಪದ ಪಠ್ಯಕ್ಕಷ್ಟೆ ಸೀಮಿತವಾಗಿಬಿಟ್ಟರೆ ಆಮೇಲೆ ಯಾರು ಓದ್ತಾರೆ. ಬರೀ ಡಿಗ್ರಿಗೋಸ್ಕರ ಓದ್ತಾರೆ. ಹೀಗಾಗಿ ಜಾನಪದದಲ್ಲಿ ಯಾರು ಕೆಲಸ ಮಾಡ್ತಾರೆ? ಒಂದು ವಿಶ್ವವಿದ್ಯಾಲಯ (ಹಂಪಿ) ವಿಶ್ವವಿದ್ಯಾಲಯ ಈ ಕೆಲಸ ಮಾಡ್ತಾ ಇದೆ. ಅದು ಸರಿ. ಆದರೆ ಅದನ್ನ ಜನಮನಕ್ಕೆ ಮುಟ್ಟಿಸಬೇಕು, ಜನ ತೊಗೊಳ್ಬೇಕು, ಪ್ರಚಾರ ಕೊಡಬೇಕು. ಆಗ ತರಿಕೆರೆ ಲಿಂಗಪ್ಪನವರಿದ್ದರು, ಕರೀಂಖಾನರಿದ್ದರು, ಬಳೆಗಾರ ಬರ್ತಾರೆ ಅದರಲ್ಲಿ, ರಾಮಾಯಣ ದರ್ಶನಂ ಪ್ರಚಾರಕ್ಕೆ ಗಮಕಿಗಳಿದ್ದರು. ಈ ಕೆಲಸ ಆಗ್ತಾ ಇಲ್ಲ. ಪುಸ್ತಕಗಳು ಬಂದ ಕ್ಷಣ ಪ್ರಚಾರಕ್ಕೆ ಬರ್ತಾ ಇಲ್ಲ. ಮಂಟೇ ಸ್ವಾಮಿದು ಎಲ್ಲಿದೆ ಅಂದರೆ, ಭಕ್ತರಲ್ಲಿ. ಅದೇ ರೀತಿ ಮಾದೇಶ್ವರಕ್ಕೂ ಭಕ್ತರಿದ್ದಾರೆ. ಅವರು ಹೇಳಿಕೊಂಡು ಹೋಗ್ತಾರೆ ಅದು ನಡೀತಾ ಹೋಗ್ತದೆ. ಇದು ಇವತ್ತು ವೃತ್ತಿಗಾಯಕರಲ್ಲಿಹೊರತು, ಜನಗಳ ಪ್ರವೃತ್ತಿಯಾಗಿ ಬರ್ತಾ ಇಲ್ಲ.

**ಮ್ಯ:** ಅದಕ್ಕೆ ಏನು ಮಾಡಬೇಕು ಅಂತ ನಿಮ್ಮ ಅಭಿಪ್ರಾಯ?

**ಸಾ:** ಅದಕ್ಕೆ ಪ್ರಚಾರ ಬೇಕು. ಇದು ಎಷ್ಟು ವಿಚಾರ ಯುಗವೊ ಅಷ್ಟೇ ಪ್ರಚಾರ ಯುಗವೂ ಹೌದು. ವಿಚಾರದ ಜೊತೆಗೆ ಪ್ರಚಾರ ಇಲ್ಲದೆ ಇದ್ದರೆ ಆಗೋದಿಲ್ಲ.

**ಮ್ಯ:** ಅಂದರೆ ಸರಿಯಾದ ಹಾಡುಗಾರರು ಬೇಕು.

**ಸಾ:** ನಾಗೇಗೌಡರು ಮಾಡಿದರು. ಸಾವಿರಾರು ರಾಗಗಳನ್ನ ರೆಕಾರ್ಡ್ ಮಾಡಿದರು. ಇವತ್ತಿನ ದಿವಸ ಆ ರಾಗಗಳನ್ನ ಹಾಡುವವರು ಇಲ್ಲವಲ್ಲ. ಇವತ್ತು ಇನ್ನೊಂದೇನಾಗಿದೆ ಅಂದರೆ, ಜಾನಪದವನ್ನು ಕೆಡಿಸುವವರೊಂದಿಷ್ಟು ಜನ ಹುಟ್ಟಿಕೊಂಡು ಬಿಟ್ಟರು. ಸಿನಿಮಾಗಳಲ್ಲಿ ಬಂದು ಅನೇಕರು ಹಾಳು ಮಾಡಿಬಿಟ್ಟರು.

**ಮ್ಯ:** ಹೌದು, ಪಿ.ಆರ್.ಪಿ (ಪ್ರಸನ್ನ) ಹೇಳ್ತಾ ಇದ್ದರು, ಸಿನಿಮಾಗಳಲ್ಲಿ ಹಾಡುಗಳು ಬಂದ ತಕ್ಷಣ ಇದು ಪ್ಯಾಟೆ ಕೇಸು ಬಂತು ಮುಚ್ಚರಿ ಅಂತ, ಅದೇ ಎಲ್. ಜಿ. ಗುಂಡಪ್ಪನವರ ಮೂರು ಮಕ್ಕಳ ಹಾಡುಗಳು ಬಂದರೆ ಇದು ಇರಲಿ, ಇವರು International Singers ಅಂತ ಹೇಳಿ ಅವರದನ್ನ ಕೇಳ್ತಾ ಇದ್ದರು.

**ಸಾ:** ಅವರು ಅಕ್ಕಾ ತಂಗಿಯರು ಮೂರು ಜನ ಸೊಗಸಾಗಿ ಹಾಡ್ತಾರೆ. ಅವರಲ್ಲಿ ಒಂದು ಸೊಗಡು, ಸೊಬಗು, ಆ ಒಂದು ನಾಡಿ ಹಿಡಿದು ಹೋಗಬೇಕು.

**ಮ್ಯ:** ನಿಜ. ಪ್ರ್ಯಾಕ್ಟೀಸ್ ಬೇಕು. ಈ ಭರತ ನಾಟ್ಯ, ಸಂಗೀತಕ್ಕೆ ಹೇಗೊ ಹಾಗೆ.

**ಸಾ:** ಹೌದು. ಪ್ರ್ಯಾಕ್ಟೀಸ್ ಇಲ್ಲದೆ ಹೇಗಾಗ್ತದೆ. ಈ ಗಣೇಶ, ರಾಜ್ಯೋತ್ಸವ ಆಗ್ತದೆ ನಮ್ಮಲ್ಲಿ. ಆದರೆ ಒಂದು ತಿಂಗಳು ರಾಜ್ಯೋತ್ಸವದಲ್ಲಿ ಒಂದು ಕನ್ನಡದ ಜಾನಪದ ಹಾಡನ್ನೂ ನಾವು ಕೇಳ್ಲಿಕ್ಕೆ ಸಿಗೋದಿಲ್ಲ. ಸಿನಿಮಾ ಟೋನ್ ಹಾಕಿಕೊಂಡು ಹಾಡೋದನ್ನೇ ಕೇಳ್ತೀವಿ. ಹೀಗಾದರೆ ನಮ್ಮ ಜನರಲ್ಲಿ ಸಾಹಿತ್ಯದ ಸ್ವತ್ತು, ಸತ್ವ, ಏನಿತ್ತೋ ಅದನ್ನ ಯಾರು ಮುಟ್ಟಿಸಬೇಕು? ಅದರಲ್ಲೂ ನಾವು ಪಾಠ ಮಾಡಬೇಕಾದರೆ ಕೆರೆಗೆ ಹಾರ ಹೇಳ್ತೀವಿ, ಗೋವಿನ ಕಥೆ ಹೇಳ್ತೀವಿ, ಅದರಲ್ಲಿ ಬರೋ ಸತ್ವ ಏನಿದೆ, ಎಂಥ poetic value ಏನಿದೆ, ಜೀವನ ದರ್ಶನ ಏನಿದೆ ಅದನ್ನ ನಾವು ಗಮನಿಸಿಕೊಂಡು ಜನಕ್ಕೆ ಮುಟ್ಟಿಸುವಂತಹ ವ್ಯವಸ್ಥೆ ಆಗಬೇಕಾಗಿದೆ.

**ಮ್ಯ:** ನೀವು ಸರಿಯಾಗಿ ಗುರ್ತಿಸಿದಿರಿ. ಗೋವಿನ ಹಾಡು ಮತ್ತು ಕೆರೆಗೆ ಹಾರ ಅವು ಪ್ರಪಂಚದ ಯಾವುದೇ ಶಿಷ್ಟ ಸಾಹಿತ್ಯದಲ್ಲೂ ಇಲ್ಲದೆ ಇರುವಂಥ ಜನಪದ ಸಾಹಿತ್ಯ ಅಂತ ಹೇಳಬಹುದು.

**ಸಾ:** ಉದಾಹರಣೆಗೆ ಗಲಗಲಿ ಅವರು ಗರತಿಯ ಹಾಡುಗಳನ್ನ ಒಟ್ಟಿಗೆ ಮಾಡಿದರಲ್ಲ ಅವು ಇವತ್ತಿಗೂ ಇದೆ. ನಾವು ಅಣುರೇಣುತೃಣಕಾಷ್ಠ ಹಾಗೇ ಹೀಗೇ ಅಂತೆಲ್ಲ ಜೋರಾಗಿ ಹೇಳಿಬಿಡ್ತೀವಿ, ಅರ್ಥವಾಗಲಿ, ಆಗದೇ ಇರಲಿ. ಜಾನಪದದ ತಾಯಿ ಹೇಳ್ತಾಳೆ ಭಗವಂತ ಹೇಗಿದಾನೆ ಅಂದರೆ, 'ಹೂವಾಗ ಹುದುಗ್ಯಾನೆ, ಮಾಲ್ಯಾಗ ಮಲಗ್ಯಾನೆ'. ನಾವೆಲ್ಲ ಸಂಸ್ಕೃತ ಮೊದಲಾದ ಭಾಷೇಲಿ ಹೇಳೊದನ್ನ ಆ ತಾಯಿ ಅವಳ ಸೀಮಿತವಾದಂತಹ ಅನುಭವಕ್ಕೆ ಎಷ್ಟು ಸೊಗಸಾಗಿ ಹೇಳ್ತಾಳೆ ನೋಡಿ. ಹೂವಾಗ ಹುದುಗ್ಯಾನ, ಪರಿಮಳವಾಗಿದ್ದಾನಂತೆ, ಮಾಲ್ಯಾಗ ಮಲಗ್ಯಾನಂತೆ. ಇಂಥ ಜಾನಪದವನ್ನ ಮುಟ್ಟಿಸಬೇಕು ಜನಗಳಿಗೆ, ಎಂಥ ರುಚಿ ಇದೆ ಇದರಲ್ಲಿ. 'ತೊಟ್ಟಿಲ ಹೊತ್ಕೊಂಡು, ತವರ್ಬಣ್ಣ ಉಟ್ಕೊಂಡು, ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು', ಯಾವ ಮಹಾಕವಿಗೂ ಈ ರೀತಿ ಹೇಳೋಕೆ ಹೊಳೆದಿಲ್ಲ. 'ತಿಟ್ ಹತ್ತಿ ತಿರುಗಿ ನೋಡ್ಯಾಳ', ಅವಳ ಅಣ್ಣ ಕೊಡಿಸಿದ ತೊಟ್ಟಲು, ತಾಯಿ ಉಡಿಸಿದ ಸೀರೆ, ಅಪ್ಪ ಕೊಟ್ಟ ಎಮ್ಮೆ ತೊಗೊಂಡು ಮೇಲಕ್ಕೆ ಹೋಗ್ತಾಳಲ್ಲ, ಕೊನೇಗೆ ಎರಡ್ಹೆಜ್ಜೆ ಇಟ್ಟರೆ ಗಂಡನ ಮನೆ. ಅಲ್ಲಿ ಅವಳ ಮನಸ್ಸು ತವರು ಮನೆ ಎಲ್ಲ ಓಡಾಡಿ ಬಿಡತ್ತೆ ಒಂದು ಕ್ಷಣಾರ್ಧದಲ್ಲಿ. ಅದು ಎಂಥ ಒಂದು ಸೊಗಸಾದ ಪ್ರತಿಮೆ ಮತ್ತು ಎಂಥ ಸೊಗಸಾದ ಧ್ವನಿ. ಇದನ್ನ ನಮ್ಮ ಜನಪದದ ತಾಯಿ ನಾವು ಯಾವುದಕ್ಕೂ dictionary ನೋಡುವ ಅಗತ್ಯ ಇಲ್ಲದಂತೆ ಸೊಗಸಾಗಿ, ಸರಳವಾಗಿ ಹೇಳಿ ಬಿಡ್ತಾಳೆ. ವಿಸ್ಮಯಕ್ಕೊಂದು ಉದಾಹರಣೆ ಕೊಡಬೇಕು ಅಂದರೆ, 'ನನ್ನಯ್ಯನಂಥೋರು ಹನ್ನೆರಡು ಮಕ್ಕಳು ಹೊನ್ನೆಯ ಮರದ ಅಡಿಯಲ್ಲಿ ಆಡುವಾಗ, ಸಂನ್ಯಾಸಿ ಜಪವ ಮರೆತ'. ಇದನ್ನ ಕೇಳಿದರೆ, 'ಅಬ್ಬಬ್ಬ, ಆ ತಾಯಿಗೆ ಹೆಂಗೆ ಹೊಳೀತೊ ಏನೋ' ಅನಿಸಿಬಿಡುತ್ತದೆ. ಮಕ್ಕಳ ಬಗ್ಗೆ ಹೇಳುವದೇ ಆಗಿರಲಿ ಇನ್ನೊಂದು ವಿಷಯವೇ ಆಗಿರಲಿ ಜೀವನದಲ್ಲಿ ಅನುಭವಿಸಿ ಹೇಳಿದ್ದಾರೆ.

**ಮ್ಯ:** ಅದು ಅವರಿಗೆ necessity ಆಗಿತ್ತೇನೋ ಅನಿಸುತ್ತದೆ. ತಾಯಿ ಮನೆಗೆ ಹೋಗಕ್ಕಾಗದೆ ಪಡೋ ಕಷ್ಟ, ಹೋದ ಮೇಲೆ ಮತ್ತೆ ಯಾವಾಗ ಬರ್ತೀನೋ ಅನ್ನುವ ತವಕ...

**ಸಾ:** Not only that ಎಲ್ಲವೂ ಕೂಡ ಅಷ್ಟೇನೆ. ಮಕ್ಕಳಿಲ್ಲದೆ ಇರೋದಾಗಲಿ, ಇನ್ನೊಂದು ಯಾವುದೇ ಆಗಲಿ, ಪ್ರತಿಯೊಂದು ಅವರ ಜೀವನದ ಅನುಭವದ ಸಾರ. ಕಾವ್ಯಕ್ಕಾಗಿ ಬರೆದವರಲ್ಲ. ಅನುಭವವನ್ನ ತೋಡಿಕೊಂಡಿದ್ದಾರೆ. ಇಂದು ನಾವು ಬರವಣಿಗೆಯಲ್ಲಿ ಅನುಭವಕ್ಕಿಂತ ಹೆಚ್ಚಾಗಿ ಮಸಾಲೆ ತುಂಬಿಸ್ತೀವಿ. ನಾವು ಜಾನಪದವನ್ನ ಕೈ ಬಿಟ್ಟರೆ ಈವತ್ತಿನ ದಿವಸದ ಸಾಹಿತ್ಯ ಮುಂದುವರೆಯೋದಿಕ್ಕೆ ಸಾಧ್ಯ ಇಲ್ಲ. ಹರಿಯುವ ನದಿಗೆ ಯಾರೂ ಕಾಲುವೆ ತೋಡಿ ಹೀಗೆ ಹರಿ ಅಂತ ಹೇಳಲ್ಲ. ತಾನು ಹರಿಯುತ್ತಲೆ ತನ್ನ ಪಾತ್ರವನ್ನ ನಿರ್ಮಿಸಿಕೊಳ್ಳುತ್ತ ಹೋಗುತ್ತದೆ. ಹರಿಯುವ ನದಿಯ ಪ್ರವಾಹ ಸ್ವಲ್ಪ ಕಡಿಮೆ ಆದಾಗ ಶಾಂತವಾಗಿ ಜುಳು ಜುಳು ಹರಿಯುತ್ತೆ. ತುಂಬಿ ಬಂದಾಗ ಇಕ್ಕೆಲಗಳನ್ನು ಕಡಿದು ನುಗ್ಗುತ್ತೆ. ಹಾಗೆ ಕಾಲ ಪ್ರತಿನಿಧಿಸುತ್ತದೆ ಅದು, ಇಲ್ಲ ಅಂತ ಅಲ್ಲ. ಇಪ್ಪತ್ತನೆ ಶತಮಾನದಲ್ಲಿ ಕನ್ನಡದಲ್ಲಿ ಆದಷ್ಟು ನಾನಾ ವಿಧಾನದ ಪ್ರಗತಿ ಇನ್ಯಾವತ್ತೂ ಆಗಿಲ್ಲ. ಯಾಕೆ ಆಗಿಲ್ಲ ಅಂದರೆ, ಕನ್ಯೆ ಭೂಮಿ ಅದಿತ್ತು ಆಗ. ಎಲ್ಲರೂ ಕೈ ಹಾಕಿದರು. ಅದನ್ನೇ ಬೆಳೆಸಿಕೊಳ್ಳಕ್ಕಂತಹವರು ವೈಚಾರಿಕ ಪ್ರಜ್ಞೆಯಿಂದ ಇನ್ನೂ ಮುಂದುವರೆಸಿಕೊಂಡರು. ಈ ಮುಂದುವರಿಸಿಕೊಂಡು

ಹೋಗಿರುವುದರಲ್ಲಿ ನಾವು ಮತ್ತೆ ಜಾನಪದವನ್ನ ನೋಡಲೇ ಬೇಕಾಗುತ್ತದೆ. ಇಂಗ್ಲೀಷು ಸಾಹಿತ್ಯದಿಂದ ಅಥವ ಬೇರೊಂದರಿಂದ ಬಂದ ಸಾಹಿತ್ಯ ಪ್ರಕಾರಗಳು ಇತ್ತೀಚಿನವು. ಜಾನಪದವನ್ನ ಮತ್ತೆ ತೆಗೆದು ನೋಡಿದಾಗ ನಮ್ಮ ನೈಜತೆ ಗೊತ್ತಾಗುತ್ತದೆ, ಸಂಸ್ಕೃತಿ ಗೊತ್ತಾಗುತ್ತದೆ. ಅದನ್ನ ಪ್ರಚಾರಕ್ಕೆ ತರಬೇಕು. ಪ್ರಚಾರಕ್ಕೆ ತರಬೇಕಾದರೆ ಪುಸ್ತಕದ ರೂಪದಲ್ಲಿ ಇದ್ದರಷ್ಟೇ ಆಗೊಲ್ಲ. ಸ್ವಲ್ಪ ಜನಕ್ಕೆ ಮುಟ್ಟಿಸೊ ಅಂಥವರು ಬೇಕು. ಒಂದು ರೀತಿಯಲ್ಲಿ ಜನರ ಮನೋಧರ್ಮಗಳು ಬೇರೆ ಆಗಿಬಿಟ್ಟಿವೆ ಈಗ. ಗಮಕದಂಥದ್ದರಲ್ಲಿ ಹಾಡಿದಾಗ ಕೇಳತಕ್ಕಂತಹ ವ್ಯವಧಾನವೂ ಕೂಡ ನಮ್ಮ ಜನಕ್ಕಿಲ್ಲ. ಈ ರಾಜ್ಯೋತ್ಸವ, ಗಣೇಶ ಹಬ್ಬ ಬಂದು ಬಿಟ್ಟರೆ ಕೇಳಿ ಬರೊ ಹಾಡುಗಳನ್ನ ನೆನಸಿಕೊಂಡರೆ ಮೈ ಎಲ್ಲ ಉರಿದ್ಹೋಗಿಬಿಡತ್ತೆ. ಎಸ್. ಪಿ. ಬಾಲಸುಬ್ರಮಣ್ಯಂ ಟೀವಿಲಿ ಮಾಡ್ತಾ ಇರೋ ಕಾರ್ಯಕ್ರಮ ಸಂಗೀತಕ್ಕೋಸ್ಕರ. ಆದರೆ ಅದರಲ್ಲಿ ಬರೀ ಸಿನೆಮಾ ಹಾಡುಗಳೆ ಇರುತ್ತೆ. ಯಾವಾಗಲೋ ಒಂದು ಚೂರು ಬೇರೆ ಇರುತ್ತೆ. ಅದೇ ರೀತಿ ಭಾವಗೀತೆಗಳನ್ನ ತೆಗೆದುಕೊಂಡರೆ ಪುಟ್ಟಪ್ಪ ಅಂದ್ರೆ ಯಾರು ಅಂತ ಗೊತ್ತಿರಲ್ಲ. ಬೇಂದ್ರೆ ಅಂದ್ರೆ ಏನದು ಅಂತ ಕೇಳ್ತಾರೆ! ನಮ್ಮ ಮಕ್ಕಳಲ್ಲಿ ಸಮೂಹ ಮಾಧ್ಯಮಗಳೇ ಕೆಲಸ ಮಾಡೊದು. ಅದಕ್ಕೆ ಹೇಳೋದು ಪ್ರಚಾರ ಬೇಕು ಅಂತ. ಬರೀ ವಿಚಾರವನ್ನ ಇಟ್ಟುಕೊಂಡು ಕೂತುಕೊಂಡರೆ ಏನೂ ಆಗಲ್ಲ. ಅದನ್ನ ಹೊರಗೆ ಮುಟ್ಟಿಸೊ ಅಂಥ ಒಂದು channel ಏರ್ಪಡಿಸಬೇಕು.

**ಮೃ:** ಒಂದು ಕೊನೇ ಪ್ರಶ್ನೆ ಸಾರ್. ಕುವೆಂಪು ಅವರನ್ನ ತೊಗೊಂಡರೆ ಅವರಿಗೊಂಡು continuity ಇತ್ತು, ಶ್ರದ್ಧೆ ಇತ್ತು. ಉದಾಹರಣೆಗೆ ಅವರು ಮೊದಲು ಕಿಂದರಿಜೋಗಿ ಬರೆದರು, ಆಮೇಲೆ ಹನುಮದ್ವಿಲಾಸ, ಚಿತ್ರಾಂಗದ ಆದಮೇಲೆ ರಾಮಯಣ ದರ್ಶನಂ ಬರೆದರು, ಆ ಮಟ್ಟ ಮುಟ್ಟಿದರು. ನಮ್ಮಲ್ಲಿ ಆ ಥರದ ತಪಸ್ಸು ಕಂಡು ಬರುವದಿಲ್ಲ ಇವತ್ತು.
**ಸಾ:** ಬಹಳ ಒಳ್ಳೆ ಮಾತು ಹೇಳಿದಿರಿ.


**ಮೃ:** ಇನ್ನೊಂದೇಂದರೆ ತೇಜಸ್ವಿ ಅವರಾಗಲಿ, ಕಾರಂತರಾಗಲಿ ಬರೆದ ಪ್ರತಿಯೊಂದು ಕಾದಂಬರಿ ಹೊಸ ವಿಷಯ ಮತ್ತು ದೃಷ್ಟಿಯಿಂದ ಕೂಡಿತ್ತು. ತೇಜಸ್ವಿಯವರಂತೂ ಒಂದು ಪರಂಪರೆ ಹಾಳಾಗೋದು, ಇನ್ನೊಂದು ಪರಂಪರೆ ಹುಟ್ಟೋದನ್ನ, ಹೊಸ ಪರಂಪರೆ ಅನಿವಾರ್ಯ ಅನ್ನೋದನ್ನ ಹೇಳ್ತಾರೆ.
**ಸಾ:** ಖಂಡಿತ. ಹಳೇದನ್ನೆ ಇಟ್ಟುಕೊಂಡು ಕುತ್ಕೊಳ್ಳೋದಲ್ಲ. ಚೆನ್ನಾಗಿ ಹೇಳಿದ್ದೀರ.

**ಮೃ:** ಈ ಎರಡು ವಿರುದ್ಧಗಳಿಗೆ ನಿಮ್ಮ ಉತ್ತರ ಏನು?
**ಸಾ:** ಹೌದು ಬೇಕೆ ಬೇಕು ಅದು. ಮೊಮ್ಮೊಗ ಅಜ್ಜನ ಹೆಗಲಿನ ಮೇಲೆ ಕೂತುಕೊಂಡು ಅಜ್ಜನಿಗಿಂತ ದೂರ ನೋಡ್ತಾನೆ ಅನ್ನೋ ಹಾಗೆ, ದೂರಕ್ಕೆ ನೆಗೀಬೇಕು ಅನ್ನೋವ್ರು ಹಿಂದಕ್ಕೆ ಹೋದಂತೆ ಜಾಸ್ತಿ ದೂರ ನೆಗೆಯೋ ಹಾಗೆ. ಅಂದ್ರೆ ಹಿಂದೆ ನೋಡಬೇಕು. ಹಿಂದೆ ನೋಡಿದರೆ ನಮಗೆ ಮುಂದೆ ಬೆಳೆಯೋದಕ್ಕೆ ದಾರಿ ಸಿಗುತ್ತೆ. ನೀವು ಕುವೆಂಪುರವರ ಸಾಧನೆ ಹೇಳಿದ್ರಲ್ಲ, ತಪಸ್ವಿ ಆತ. ಕವಿ ಋಷಿ, ಕವಿಯಾದ ಋಷಿ ಆತ. ಋಷಿಕನಿಗೆ ಕವಿತ್ವ ಬಂದುಬಿಟ್ಟಿದೆ. ಬೇಂದ್ರೆ ಕೂಡ ಅಷ್ಟೆ. ಋಷಿ ಕವಿ ಆಗ್ತಾರೆ. ಅವರೂ ಕೂಡ ಜಾನಪದೀಯವಾದಂತಹ ಹಿನ್ನೆಯೆಲ್ಲಿ ವಿಶೇಷವಾಗಿ ಬೆಳೆದು ಬಂದರು. ವಿಶೇಷವಾಗಿ ಪುಟ್ಟಪ್ಪನವರಲ್ಲಿ ಏನಾಯಿತು ಅಂದರೆ, ಸಾನೆಟ್ಟುಗಳಿಂದ ಶುರು ಮಾಡಿಕೊಂಡರು. ಅಲ್ಲಿ ಬಿಗಿ ಬಂದದ್ದು ಅವರಿಗೆ. ಛಂದಸ್ಸು ಬರಬೇಕಾದ್ರೆ, ರಾಮಾಯಣ ದರ್ಶನ ಮಾಡೋದಕ್ಕೆ ಮೊದಲು ಖಂಡ ಕಾವ್ಯಗಳನ್ನೇ ಮಾಡಿದ್ದು. ಚಿತ್ರಾಂಗದ ಕಾವ್ಯ ಮಹಾಛಂದಸ್ಸು ರೂಪಗೊಳ್ಳೋದಿಕ್ಕೆ ಅನುಕೂಲವಾಯ್ತು ಅವರಿಗೆ. ಖಂಡಕಾವ್ಯಗಳ ರೂಪದಲ್ಲೆ ಅವರು ಮೊದಲು ಆಲೋಚನೆ ಮಾಡಿದ್ದಾರೆ. ಪ್ರಬುದ್ಧ ಕರ್ನಾಟಕದಲ್ಲಿ ಬರ್ತಾ ಇದ್ದವು. 'ಶಬರಿ' ಅಷ್ಟನ್ನೆ ಬರೆಯೋರು. ಹಾಗೇನೆ 'ಶಿಲಾತಪಸ್ವಿನಿ', ಅಷ್ಟೆ. ಇವುಗಳನ್ನ ರಾಮಾಯಣದ ರೂಪದಲ್ಲೇ ಮುಂದುವರಿಸಿಕೊಂಡು ಹೋದರೆ ಹೇಗೆ ಅನ್ನೋ maturity ಬಂತು ನೋಡಿ. ಸಾಧನೆಯಿಂದ ಔನ್ನತ್ಯವನ್ನ ಪಡೆದುಕೊಂಡಿದ್ದಾರೆ. ಅವರು ವಿಶೇಷವಾಗಿ ಇಂಗ್ಲೀಷ್ ಸಾಹಿತ್ಯದ ಪ್ರಭಾವ ಪಡೆದಿದ್ದಾರೆ. ಬೇಂದ್ರೆ ಅವರು ಜಾನಪದದಲ್ಲಿ ಹೆಚ್ಚಿನ ಅಭಿರುಚಿ ತೊಗೊಂಡಿದ್ದರಿಂದ ಮಹಾಕಾವ್ಯಗಳನ್ನ ಬರೆಯೋದಕ್ಕೆ ಆಗಲಿಲ್ಲ. ಇನ್ನೊಂದು ಏನಾಯ್ತು ಅಂದರೆ, ಬೇಂದ್ರೆ ಅವರು ಸಂಖ್ಯಾ ದೃಷ್ಟಿಯಲ್ಲಿ ಬರೆಯೋದಕ್ಕೆ ಶುರುಮಾಡಿದರು. ಉದಾಹರಣೆಗೆ ನಾಕು ತಂತಿ. ಹಿಂದೆ ಒಮ್ಮೆ ಬೇಂದ್ರೆ ಅವರನ್ನೇ ಕೇಳಿದ್ದೆ, 'ಸರ್ ನಾಕು ತಂತಿ ಅರ್ಥ ಆಗಲ್ಲ' ಅಂತ. ಆಗ ಅದ್ಭುತವಾದ ಅರ್ಥ ಹೇಳಿದ್ದರು. ಒಂದು ಆಧ್ಯಾತ್ಮಿಕ ಲೋಕಕ್ಕೆ ನಮ್ಮನ್ನ ಎತ್ತಿಕೊಂಡು ಹೋದರು. ಸಂಖ್ಯೆಯಲ್ಲಿ ಅವರು ಮಾಡಿದಷ್ಟು ಸಾಧನೆ ಯಾರೂ ಮಾಡಕ್ಕಾಗಲ್ಲ. ಹೀಗಾಗಿ ಅವರನ್ನ follow ಮಾಡೊದಕ್ಕೆ ಕಷ್ಟ ಆಗ್ತಾ ಇತ್ತು. ಪುಟ್ಟಪ್ಪನವರದು ಸಂಸ್ಕೃತ ಭೂಯಿಷ್ಠವಾದ ಶೈಲಿ. ಬೇಂದ್ರೆಯವರದು ಜಾನಪದ ಶೈಲಿ. ಇತ್ತೀಚಿನವರು ಪುಟ್ಟಪ್ಪನವರನ್ನ ಬಿಟ್ಟರೂ ಸಂಸ್ಕೃತಕ್ಕೆ ಎಲ್ಲ ರೀತಿಯಲ್ಲೂ ಸೆರೆ ಸಿಗಬೇಕಾಗ್ತದೆ. ಅದನ್ನ ಬಿಡಿಸಿಕೊಂಡವರು ನವ್ಯದವರು. ಹೊಸ ಹೊಸ images ಅನ್ನ ತಂದರು. ನೂರು ಪದ್ಯ ಬರೆಯೋದಕ್ಕಿಂತ ಮೂರು image ಕಟ್ಟು ಸಾಕು ಅನ್ತಾನೆ, ಬಹುಶಃ ಲೆವಿಸ್ ಇರಬೇಕು. ಹೀಗಾಗಿ imagesಅನ್ನ ಹೊಸದಾಗ ರೂಪಿಸಿಕೊಳ್ಳೊ ಚೈತನ್ಯ ಬಂತು. ಹೀಗಾಗಿ image ಮುಖಾಂತರ ನಮ್ಮಲ್ಲಿ ಎಲಿಯೆಟ್ಟರ ಪ್ರಭಾವ ಆಗಿದೆ.

**ಮೃ:** ನಿಮ್ಮ ಸಂದರ್ಶನಕ್ಕೆ ಧನ್ಯವಾದಗಳು ಸಾರ್.
(ಬರಹಕ್ಕೆ : ಅನಿಲ್ ಜೋಶಿ)
***

ಸುಧಿ ಬೆಂಗಳೂರು
ಕ್ಯಾಲಿಫೋರ್ನಿಯ

# ಎನ್ನಾರೈ ಗಂಟು



ಇದು ಗೊತ್ತ ನಾನಾಗಿದ್ದೆ ಅಂದು ಒಬ್ಬ ಎಲೆಕ್ಟ್ರಾನಿಕ್ಸ್ ಸ್ಟೂಡೆಂಟು
ಓದುತ್ತಿದ್ದೆ ಬೀಯೀ ಚೆನ್ನಾಗಿ ತಿಂದು ಹೆಚ್ಚಾಗಿ ಎಳೆ ಸೊಪ್ಪಿನ ದಂಟು
ಮಾರ್ಕ್ಸಿದ್ದು ಸಕ್ಕತ್ತಾಗಿ ಕ್ಯಾಂಪಸ್ ಸಂದರ್ಶನವೊಂದರಲ್ಲಿ ಪ್ಲೇಯ್‌ಮೆಂಟು
ಹೇಗೊ ಬಿತ್ತು ಅಮೇರಿಕಾಗೆ ಹೋಗಲೆತ್ನಿಸುವ ಸ್ನೇಹಿತರ ನಂಟು
ಒಳ್ಳೆ ಕೆಲಸ ಕಷ್ಟ; ಹೆಚ್ಚು ಓದುವುದು ಆಯಿತಾಗ ಇಮ್ಪಾರ್ಟೆಂಟು
ಎಮ್-ಎಸ್ಗೆ ಇದ್ದಕ್ಕಿದ್ದಂತೆ ಹಾರಿ ಬಂದದ್ದು ಈವರೆಗಿನ ಪಾಯಿಂಟು
ಹೊರ ಧೈರ್ಯದಿ ಕ್ರಮೇಣ ಹೊಸ ವಿಧಿವಿಧಾನಕೆ ಆದೆ ಓರಿಯೆಂಟು
ಹಾಯ್-ಎಂದು ಬಾಯಿ ಸದಾ ಅಗಿದಿತ್ತು ಚುಯಿಂಗಮ್ಮು ಪೆಪ್ಪರ್ಮೆಂಟು
ಬಿಡುವಿಗೆ ನಮ್ಮ ದೇಶೀ ಸಂಘದ ಕಾರ್ಯಕ್ರಮಗಳ ಎಂಟರ್ಟೈನ್ಮೆಂಟು
ಸರಿಯಾಗಿ ಕಲಿಯಲರಿತಿದ್ದು, ಕಷ್ಟಪಟ್ಟಿದ್ದು ಇವು ಸ್ವಂತ ಕಾಂಪ್ಲಿಮೆಂಟು
ಸಾಲ ತೀರಲು ಪದವಿಯ ನಂತರ ಬೇಕಿತ್ತು ಹುದ್ದೆಗೊಂದು ಅಪಾಯಿಂಟ್ಮೆಂಟು
ಹಿಂದಿರುಗಿ ಹೋಗಿದ್ದೆ ಮನೆಯವರ ನೋಡಲು ಕೊಂಡು ಘಮ ಘಮ ಸೆಂಟು
ಹೆಮ್ಮೆಯ ಖುಶಿಯಿತ್ತು ಅವರಲ್ಲಿ ಓದು ಮುಗಿದು ಕೆಲಸ ಸೇರಿದ ಡೆವಲಪ್ಮೆಂಟು
ಓದಿದ್ದು ಬಳಸಲು ಹುದ್ದೆ ಬದಲಿಸಲು ಆಗಬೇಕಿತ್ತು ನಾ ಪರ್ಮನೆಂಟ್ ರೆಸಿಡೆಂಟು
ಮತ್ತೆ ಹೋಗಿದ್ದೆ ಮೂರೆ ವಾರಕ್ಕೆ, ಈಗ ಮದುವೆಯು ಮುಂದಿನ ಅಸೈನ್ಮೆಂಟು
ಹೋದಾಗಲೆಲ್ಲ ಬೆಂಗಳೂರಲ್ಲಿ ಸಂಚಾರದ ಬವಣೆ ಧೂಳು ಇನ್ನೂ ರ್‍ಯಾಮ್ಪೆಂಟು
ನನ್ನವಳ ಜೊತೆ ಬಂದಿದ್ದೆ ತಡ ಗ್ರೀನ್ಕಾರ್ಡಿಗೆ ಸಿಕ್ಕಿತೊ ನೋಡಿ ರಿಯಿನ್ಫೋರ್ಸ್ಮೆಂಟು
ಅಗೊಳಪ್ಪ ದುಬಾರಿ ಆಗಿಬಿಡುತ್ತಿದೆಯಲ್ಲ ಈ ಕಣಿವೆಯಲ್ಲಿ ಅಪಾರ್ಟ್ಮೆಂಟು ರೆಂಟು
ಎಷ್ಟಾದರೂ ಖಚಿತವು ಬರುವ ಸಂಬಳದಲ್ಲಿ ಸಣ್ಣಪುಟ್ಟ ಉಳಿತಾಯ ಸಾಧ್ಯವುಂಟು
ಕೊಂಡೆ ಕೊನೆಗು ಹಿಡಿಸಿದ ಮನೆಯೊಂದ ಹಾಕಿ ಕೂಡಿಟ್ಟಿದ್ದ ಪ್ರತಿಯೊಂದು ಸೆಂಟು
ಇನ್ನು ನಾನಾಗಬೇಕು ಮುಖ್ಯಸ್ಥನು ನೋಡಿಕೊಳ್ಳಲು ಸಂಸ್ಥೆಯೊಂದರ ಡಿಪಾರ್ಟ್ಮೆಂಟು
ಹರಟೆಗೆ, ಹವ್ಯಾಸಕೆ, ಜನಜಾಲದ ಗುರಿಗೂ ಆಗಬೇಕು ಕನ್ನಡ ಕೂಟದ ಪ್ರೆಸಿಡೆಂಟು
ಇವೆಲ್ಲವು ಇದ್ದರು, ಅದೆ ಇಲ್ಲೇ ತಂದಿಟ್ಟರು ಆಗಿದೆಯೆನೊ ನನ್ನ ಐಡೆಂಟಿಟಿಗೆ ಡೆಂಟು
ಮನನಕೆ ಬಿಡುವಿರದೆ ಪ್ರಜೆ ಇಲ್ಲಿ ಆಗಿಬಿಟ್ಟಿರುವನೆ ಕಾರ್ಪೊರೆಟು ಬ್ರ್ಯಾಂಡು ಏಜೆಂಟು
ಓಡಿ ಬಂದೆ ಬರುವುದಲ್ಲವೆ ನಿಮಗೂ ನನಗೂ ಒಂದು ದಿನ ದೂರದ ರಿಟೈರ್‌ಮೆಂಟು
ಎಷ್ಟೊ ಸಾಧಿಸೊ ಆಸೆ, ತಕ್ಕಮಟ್ಟಿಗೆ ಬೇಕೆಬೇಕಲ್ಲವೆ ಕೊನೆವರೆಗು ಬ್ಯಾಂಕಿನ ಅಕೌಂಟು
ಪೂರ್ಣ ಪ್ರಮಾಣದ ಒಳ್ಳೆ ಪ್ರಜೆಯಾಗಬೇಕಾದರೆ ಬೇಕಾಗಿದೆಯಲ್ಲ ರಿ-ಅಡ್ಜಸ್ಟ್‌ಮೆಂಟು
ಹೋಗಿ ಹಿಂದಿರುಗಿ ಬಂದಾಗಲೆಲ್ಲ ಸಿಗುವುದೊ ಹೇಳಲಾಗದ ಒಂದು ತರದ ನರಿಶ್ಮೆಂಟು
ಹಿಡಿಸಿದಂತಿದ್ದರು ಇಲ್ಲಿ ಕೈಯಿಂದ ಬಾಯ್ಗೆ ಸುತ್ತಿದಂತಿದೆಯೆನೊ ಚಿನ್ನದ ಸರ್ಪೆಂಟು
ತಂದೆತಾಯ್ಗೆ ಹತ್ತಿರವಿರದ ಅಜ್ಜಿತಾತ ಮೊಮೊಕ್ಕಳ ಬಾಂಧವ್ಯವಿರದ ಹಸಿರು ಸಿಮೆಂಟು
ಇಲ್ಲಿ ಶಾಲೆಗಳೊ ಬೊಂಬಾಟು ಜೋಕೆ ಆಪರೂಪಕೊಮ್ಮೆ ಸುರಿಯಬಹುದು ಗುಂಡೇಟು
ಇಲ್ಲಿ ಮಾತಿದೆ ಕಡಿಮೆಯಿಲ್ಲಲೀಗ ಕಾದಿವೆ ಇವೂ ಮೀರಿಸೊ ನೂರೆಂಟು ತೊಂದರೆ ಗಂಟು
ಕೈಮುಗಿದು ಒಮ್ಮೆಲೆ ಹಾಕಬೇಕಿದೆ ನಾ ಬ್ರೇಕು ಸಾಕಿಷ್ಟು ನಿಲ್ಲಲಿಲ್ಲಿಗೆ ಈ ಸೆಟಲ್‌ಮೆಂಟು
ಇಲ್ಲಿ ಜನ ಮುಗಿಬೀಳುತಿರುವಾಗ ಪೌರತ್ವ ಪಡೆಯಲು ಹೋಗುವುದೆಂತದೊ ಸೆಂಟಿಮೆಂಟು,
ಹೇಳಿಬಿಡಲೆ ನನ್ನಮಟ್ಟಿಗಾದಾರಿದು ಆ ತಿಳಿ ನೀಲಿ ಆಗಸದಡಿ ಸಿಕ್ಕ ಪುಟ್ಟ ಎನ್ಲೈಟನ್ಮೆಂಟು!

***

ಹ
ರ
ಟೆ

ಅಭಿನವ ಮತ್ಸ್ಯಗಂಧಾವೃತ ಕಥನ

ಜ್ಯೋತಿ ಮಹದೇವ
ಕ್ಯಾಲಿಫೋರ್ನಿಯ



# ಸತ್ತ ಮೀನಿನ ಸುತ್ತ


ಅಂದು– 'ಎಪ್ರಿಲ್ ಒಂದು', ಎರಡು ಸಾವಿರದ ನಾಲ್ಕು. ಜಾಗತಿಕವಾಗಿ ಮೂರ್ಖರ ದಿನ. ಯಾರ್ಯಾರೋ ಇನ್ಯಾರನ್ನೋ ಮೂರ್ಖರನ್ನಾಗಿಸುವ ಸುದ್ದಿ ಹೊಸದೇನಲ್ಲ. ಹಾಗೆಂದು ಇತರರನ್ನು ಛೇಡಿಸಿ, ಪೀಡಿಸಿ, ಫೂಲ್ ಮಾಡಿ ಪಡೆವ ಥ್ರಿಲ್ ಹಳೆಯದಾಗುವುದೂ ಇಲ್ಲ. ಇಂಥ ಸುದಿನವಾದ ಅಂದು ನನ್ನ ಪ್ರತೀ ಉಸಿರಾಟವೂ ಸತ್ತ ಮೀನಿನ ಸುತ್ತಲೇ ಸುತ್ತಿದ್ದು ಕಾಕತಾಳೀಯವೋ ಗೊತ್ತಿಲ್ಲ. ಅಂದು ಬೆಳಗ್ಗೆ ಏಳರಿಂದ ನಾನೇ ಮತ್ಸ್ಯಗಂಧಿಯಾಗಬೇಕಾದ ಕಥನ ಕೋಲಾಹಲ ಕೇಳುವಿರಾ? ಆದರೆ, ಅದಕ್ಕೆ ಮುನ್ನ ಒಂದು ಉಪಸೂಚನೆ; ಈ ಸಂದರ್ಭದಲ್ಲಿ ಯಾವುದೇ ಮನುಷ್ಯ ಮಾತ್ರರನ್ನು ದೂಷಿಸದೇ ನಾಯಿಯೋ, ಬೆಕ್ಕೋ, ಹದ್ದೋ, ಕಾಗೆಯೋ ಈ 'ವಾಸನಾವತಾರ'ಕ್ಕೆ ಕಾರಣೀಭೂತರೆಂದು ಹೇಳಿಕೊಂಡು ನನ್ನ 'ಮತ್ಸ್ಯ ಪುರಾಣ' ಆರಂಭಿಸುತ್ತೇನೆ.

ಕನಸಿನರಮನೆಯಲ್ಲದಿದ್ದರೂ ಮಣಿಪಾಲದಲ್ಲಿರುವ ನಮ್ಮ ಮನೆಯಲ್ಲಿ, ಅಂದು ಬೆಳಗ್ಗೆ ಏಳುತ್ತಿದ್ದಂತೆಯೇ ತಲೆ ಓಡಿತು– "ಹಾ! ಇವತ್ತಿನಿಂದ ಎರಡು ತಿಂಗಳು ಮಕ್ಕಳನ್ನು ಶಾಲೆಗೆ ಹೊರಡಿಸಬೇಕಾದ ಗಡಿಬಿಡಿಯಿಲ್ಲ. ಬೇಸಗೆ ರಜೆಯ ಕೆಲದಿನ ನಮ್ಮೊಡನೆ ಕಳೆಯಲು ಬಂದಿರುವ ಸೊಸೆಯರಿಬ್ಬರನ್ನೂ (ನನ್ನ ನಾದಿನಿಯ ಮಕ್ಕಳು), ನನ್ನ ಮಕ್ಕಳನ್ನೂ ಎಲ್ಲಾದರೂ ಬಹುಶಃ ಮಲ್ಪೆ ಸಮುದ್ರತೀರಕ್ಕೆ ಕರೆದೊಯ್ಯಬೇಕು. ನಾಲ್ಕಾರು ದಿನಗಳ ಮೇಲೆ ಈ ನಾಲ್ವರನ್ನೂ ಊರಿಗೆ ಕರೆದೊಯ್ದು ಬಿಟ್ಟು ಬರಬೇಕು. ಮತ್ತೆ, ಹದಿಮೂರನೇ ತಾರೀಖು ನನ್ನವರು ಅಮೆರಿಕಾದಿಂದ ಬಂದ ಮೇಲೆ, ಅತ್ತೆಯವರನ್ನೊಮ್ಮೆ ಒಳ್ಳೆಯ ಡಾಕ್ಟರರ ಹತ್ತಿರ ಕರೆದುಕೊಂಡು ಹೋಗಬೇಕು, ಅವರ ಕಾಲುನೋವು ಹೆಚ್ಚಾಗುತ್ತಿದೆ...." ಲೆಕ್ಕಾಚಾರ ಹಾಕಿದೆ; ಅಷ್ಟೇ! ಸಿಹಿತಿಂಡಿ ಅತಿಯಾಗಿ ಮೆದ್ದ ಆಸೆಬುರುಕ ಮಗುವಿಗೆ ಅಜೀರ್ಣವಾಗುವ ಹಾಗೆ ನನ್ನ ನಸೀಬು ತಿರುಗಿದ್ದು ನನಗೆ ಅರಿವಾಗಲು ತುಸು ಹೊತ್ತು ಹಿಡಿಯಿತು. ಕೋಣೆಯಿಂದ ಹೊರಬಂದು ಮುಖ ತೊಳೆದು ಕಾಫಿಗೆ ಶಾಂತಕ್ಕನ ಮುಂದೆ ನಿಂತಾಗ ಅವರ ಮುಖ ಶಾಂತವಾಗಿರಲಿಲ್ಲ. "ಏನಾಯ್ತು ಶಾಂತಕ್ಕ?" ಎಂದೆ. "ನೀವು ಕಾಫಿ ಕುಡೀರಿ, ಮತ್ತೆ ಹೇಳ್ತೇನೆ." ಅಂದರು. ನನಗೆ ಗಾಬರಿ ಹತ್ತಿತು. "ಯಾಕೆ? ಏನಾಯ್ತು? ಹೇಳಿ..." ಒತ್ತಾಯಿಸಿದೆ. ಅವರೂ ಪಟ್ಟು ಬಿಡಲಿಲ್ಲ, "ನೀವು ಮೊದ್ಲು ಕಾಫಿ ಕುಡೀರಿ, ಮತ್ತೆ ಹೇಳ್ತೇನೆ..." ಸರಿ, ಹಿರಿಯರಾದ ಅವರ ಮಾತಿಗೆ ಬೆಲೆ ಕೊಟ್ಟೆ, ಕಾಫಿ ಹೊಟ್ಟೆಗೆ ಇಳಿಬಿಟ್ಟೆ.

ಈಗ ಶಾಂತಕ್ಕನ ಮುಖದ ಬಣ್ಣ ಬದಲಾಯಿತು, ಅಸಹ್ಯ ಕಂಡಂತೆ ಇದ್ದರು. ಮತ್ತೊಮ್ಮೆ ಕೇಳಿದೆ, "ಏನಾಯ್ತು, ಈಗ್ಲಾದರೂ ಹೇಳಿ..." "ಹೊರಗೆ ಬನ್ನಿ, ನೋಡಿ..." ಅನ್ನುತ್ತಾ ಮುಂಬಾಗಿಲಿಗೆ ಕರೆದೊಯ್ದರು. ವೆರಾಂಡದ ಮೆಟ್ಟಿಲುಗಳ ಮೇಲೆ ಮೂರ್‍ನಾಲ್ಕು ಕಡೆ ಹೊಲಸು ಬಿದ್ದಿತ್ತು. ಕೆಟ್ಟನಾತ! ಏನೆಂದು ನೋಡುತ್ತಿರುವಾಗಲೇ ಶಾಂತಕ್ಕನ ವಿವರಣೆ ಬಂತು, "ಇವತ್ತು ಏಕಾದಶಿ. ನನ್ನ ಸ್ನಾನ ಮುಗಿಸಿ, ಹೊಸ್ತಿಲು ಬರೆದು ತುಳಸಿಗೆ ನೀರು ಹಾಕಲಿಕ್ಕೆ ಬರುವಾಗ ನೋಡಿದೆ. ವಾಂತಿ ಬರುವ ಹಾಗಾಯ್ತು. ಹಿಂದಿನ ಬಾಗಿಲಿಂದ ಬಂದು ತುಳಸಿಗೆ ನೀರು ಹಾಕಿದೆ. ನನ್ನ ಸ್ನಾನ ಆಗಿಲ್ಲದಿದ್ದರೆ ನಾನೇ ತೆಗೆಯುತ್ತಿದ್ದೆನೋ ಏನೋ..." ದನಿ ಅಡಗುತ್ತಿತ್ತು. ಅವರನ್ನು ಮನೆಯೊಳಗೆ ಕರೆತರುತ್ತಾ ಹೇಳಿದೆ, "ಅದನ್ನು ನಾನು ತೆಗೀತೇನೆ, ಅದೇನೂ ಪರವಾಗಿಲ್ಲ. ನೀವು ಕಾಫಿ ಕುಡ್ದಿದ್ದೀರಾ? ಏಕಾದಶಿ ಅಂತ ಇವತ್ತು ಇಡೀ ದಿನ ಬೇರೇನೂ ತಿನ್ನುದಿಲ್ಲ ನೀವು..." "ಸೇರುದಿಲ್ಲ ಈಗ." ಅಂದರು. ನಾನೇ ಒತ್ತಾಯಿಸಿ ಕಾಫಿ ಮಾಡಿ ಕೊಟ್ಟೆ, ಕುಡಿದರು. "ಬೆಳಗ್ಗಿನ ತಿಂಡಿಗೆ ತಯಾರು ಮಾಡ್ತೇನೆ." ಅಂದರು. ಸರಿಯೆಂದು ನಾನು ಮತ್ತೆ ಹೊರಗೆ ಬಂದೆ, ಒಂದಿಷ್ಟು ಸಲಕರಣೆಗಳೊಂದಿಗೆ.

ಎಂಟ್ಹತ್ತು ಬಕೆಟ್ ನೀರು, ಅರ್ಧ ಬಾಟಲ್ ಡೆಟ್ಟಾಲ್, ಮತ್ತೊಂದಿಷ್ಟು ಹವಾ–ಸುಗಂಧಕಾರಕ (ಅಮೆರಿಕಾದಿಂದ ಒಯ್ದಿದ್ದ ಏರ್–ಫ್ರೆಶ್‌ನರ್)... ಎಲ್ಲವನ್ನೂ ಬಳಸಿ ಅಲ್ಲಿದ್ದ 'ಪ್ರಾಣಿ–ಮುಖ–ವಿಸರ್ಜಿತ'ವನ್ನು ತೊಳೆಯುವಷ್ಟರಲ್ಲಿ ನನಗೂ ಅದೇ ವಾಸನೆ ಹತ್ತಿಕೊಂಡಂತಿತ್ತು. ಎಲ್ಲಿಯೋ ಮೀನಿನ ಊಟ ತಿಂದ ಬೀಡಾಡಿ ನಾಯಿಗೆ (ಅಥವಾ ಬೆಕ್ಕಿಗೂ ಇರಬಹುದು) ನಮ್ಮ ಅಮೃತಶಿಲೆಯ ಮೆಟ್ಟಲ ಮೇಲೆ ಯಾಕೆ ಕಣ್ಣು ಬಿತ್ತೋ ತಿಳಿಯಲಿಲ್ಲ. ಎಪ್ರಿಲ್ ಒಂದರ ಮಹಿಮೆ, ಅಂದುಕೊಂಡು ಸ್ನಾನಕ್ಕೆ ಹೋದೆ. ಅಲ್ಲಿಯೂ ನೀರಿಗೆ ಮೀನಿನ ವಾಸನೆಯಿದೆಯೇನೋ ಅನಿಸುತ್ತಿತ್ತು. ನಾನು ಹೊರಗೆ ಬರುವಷ್ಟರಲ್ಲಿ ಇನ್ನೊಂದು ಬಚ್ಚಲುಮನೆಯಿಂದ ಮಗ ಸ್ನಾನ ಮುಗಿಸಿ ಬಂದ. "ಅಮ್ಮ, ನೀರು ಒಂಥರಾ ಉಂಟು. ಏನೋ ವಾಸನೆ...." ಮುಖ ಕಿವುಚುತ್ತಾ ದೇವರ ಮನೆಗೆ ನಡೆದ. ಅದಾಗಲೇ ಎದ್ದು ಮುಖ ತೊಳೆದ ನಾದಿನಿಯ ಮಕ್ಕಳು ಮತ್ತು ನನ್ನ ಮಗಳ ಕಡೆ ನೋಡಿದೆ. ಹೆಣ್ಣು ಮಕ್ಕಳು ಕಣ್ಣು ತಪ್ಪಿಸಿದರು; ಗೋಡೆ, ಟೀವಿ ನೋಡಿದರು. ಅಷ್ಟಕ್ಕೇ ಬಿಟ್ಟೆ.

ಸುಮಾರು ಒಂಭತ್ತು ಘಂಟೆಯ ಹೊತ್ತಿಗೆ ಹೆಣ್ಣು ಮಕ್ಕಳೂ ಸ್ನಾನ ಮುಗಿಸಿದರು. ಮಗಳು ನನ್ನನ್ನು ಕೋಣೆಗೆ ಕರೆದೊಯ್ದು ಗುಟ್ಟಿನಲ್ಲಿ "ಅಮ್ಮ, ನೀರು ವಾಸನೆ ಬರ್ತದೆ, ಮೀನಿನ




ವಾಸನೆ.... ವಾಂತಿ ಬರುವ ಹಾಗಾಯ್ತು ಸ್ನಾನ ಮಾಡುವಾಗ....” ಅಂದಳು. ದೊಡ್ಡ ಹೆಣ್ಣುಮಕ್ಕಳಿಬ್ಬರೂ ಮೆತ್ತಗೆ ಇದನ್ನು ಒಪ್ಪಿಕೊಂಡರು. ನೀರಿಗೆ ಏನೋ ಆಗಿದೆ, ಖಚಿತವಾಯ್ತು. ನಳ್ಳಿಯ ತುದಿಗಿದ್ದ ತಿರುಪು ಬಿಚ್ಚಿ ಅದರ ಜಾಲರಿ ಪರೀಕ್ಷಿಸಿದೆ. ಅಡುಗೆ ಮನೆಯ ನಳ್ಳಿ ಸ್ವಚ್ಛವಾಗಿತ್ತು. ಮುಖ್ಯ ಬಚ್ಚಲುಮನೆಯ ನಳ್ಳಿ ಮತ್ತು ಕೈ–ತೊಟ್ಟಿಯ ನಳ್ಳಿ, ಎರಡರಲ್ಲೂ ಒಂದಿಷ್ಟು ಬಿಳಿ–ಬಿಳಿ ಕಸ ಸಿಕ್ಕಿತು. ಜೀವಶಾಸ್ತ್ರ ಪದವೀಧರೆಯ ಕಣ್ಣಿಗೆ ಮೀನಿನ ಮೂಳೆಯ ಚೂರುಗಳು ಕಂಡವು. ಮಕ್ಕಳ ಕೋಣೆಯ ಬಚ್ಚಲುಮನೆಯ ನಳ್ಳಿಯಲ್ಲೂ ಕೆಲವು ಚೂರುಗಳು ಸಿಕ್ಕಿದವು. ನೀರಿನಲ್ಲಿ ಮೀನಿನ ಮೂಳೆಯಿದೆ... ಖಾತ್ರಿಯಾಯ್ತು. ಎಲ್ಲಿಂದ? ಗೊತ್ತಾಗಲಿಲ್ಲ. ತಾರಸಿ (ಟೆರೇಸ್) ಹತ್ತಿ ನೀರಿನ ಸಿಂಟೆಕ್ಸ್ ಟ್ಯಾಂಕ್ ಇಟ್ಟಿದ್ದ ಹತ್ತಡಿ ಎತ್ತರದ ಅಟ್ಟಳಿಗೆ ಹತ್ತಿ ನಾಲ್ಕಡಿ ಎತ್ತರದ ಟ್ಯಾಂಕಿನ ಮುಚ್ಚಳ ತೆರೆದು ಹಾಗೂ ಹೀಗೂ ಕೈ–ಕಾಲು ನಡುಗಿಸಿಕೊಳ್ಳುತ್ತಾ ಒಳಗೆ ಬಗ್ಗಿ ನೋಡಿದೆ, ಸ್ವಚ್ಛವಾಗಿತ್ತು. ಅಂದರೆ, ಇಲ್ಲಿ ಏನೂ ಇಲ್ಲ. ಹಾಗಾದ್ರೆ, ಮತ್ತೆಲ್ಲಿಂದ ಮೀನುಮೂಳೆ ಬಂತು? ಸೋಲಾರ್–ವಾಟರ್–ಹೀಟರ್ ಕಡೆ ಗಮನ ಹೋಯ್ತು. ಸಾಧ್ಯವಿಲ್ಲ ಅಂತಲೂ ಅಂದುಕೊಂಡೆ. ಸೋಲಾರ್ ಹೀಟರಿನ ಟ್ಯಾಂಕ್ ಎರಡೆರಡು ಪದರ ಇನ್ಸುಲೇಶನ್ ಪಡೆದಿದೆ. ಅದಕ್ಕೆ ನೀರು ಒಳಹೋಗುವ ಮತ್ತು ಅಲ್ಲಿಂದ ಹೊರಬರುವ ಕೊಳವೆಗಳು ಎಲ್ಲೂ ತೆರೆದುಕೊಂಡಿಲ್ಲ. ಹಾಗಾದ್ರೆ ಇದೇನು ವಿಚಿತ್ರ? ಗೋಜಲು ಹರಿಯಲಿಲ್ಲ. ಮತ್ತೆ ಮನೆಯೊಳಗೆ ಹೋಗಿ ಎಲ್ಲ ನಳ್ಳಿಗಳಲ್ಲೂ ತಣ್ಣೀರು ಮಾತ್ರ ಹರಿಸಿದೆ. ಒಂದು ಹತ್ತು ನಿಮಿಷಗಳ ಹರಿವಿನ ನಂತರ ನಳ್ಳಿಗಳ ಜಾಲರಿ ನೋಡಿದಾಗ, ಎಲ್ಲವೂ ಕ್ಲೀನ್. ಮತ್ತೊಮ್ಮೆ ಎಲ್ಲದರಲ್ಲೂ ಬಿಸಿನೀರು ಮಾತ್ರ ಹರಿಯಬಿಟ್ಟೆ. ಜಾಲರಿಗಳಲ್ಲಿ ಕಳ್ಳ ಸಿಕ್ಕಿಬಿದ್ದ. ಅಂದರೆ ಬಿಸಿನೀರಿನಲ್ಲಿ ಮೀನಿನ ಕಸ. ಹೇಗೆ? ಗೊತ್ತಾಗಲಿಲ್ಲ. ಆದರೆ, ಇಷ್ಟರಲ್ಲಿ ಮನೆಯೆಲ್ಲ ಅದರ ವಾಸನಾಭರಿತವಾಗಿದ್ದು ಗೊತ್ತಾಗದಿರಲಿಲ್ಲ. ಯಾರೂ ಈಗ ಮನೆಗೆ ಬಾರದಿರಲಪ್ಪ ದೇವರೇ, ಅಂತ ಬೇಡಿಕೊಂಡೆ.

ನಮ್ಮ ಪ್ಲಂಬರ್ ಶಂಕರನಿಗೆ ಫ಼ೋನ್ ಮಾಡಿದೆ, ಅವನಿರಲಿಲ್ಲ. ಸರಿ; ನನ್ನ ಪತ್ತೇದಾರಿಕೆಯನ್ನೇ ಮುಂದುವರಿಸಿದೆ, ತಾರಸಿಯಲ್ಲಿ. ಸೋಲಾರ್ ಹೀಟರಿಗೆ ಎಷ್ಟನೆಯದೋ ಪ್ರದಕ್ಷಿಣೆ ಬರುತ್ತಿರುವಾಗ ಮತ್ಸ್ಯರಾಜ ದರ್ಶನ ಕೊಟ್ಟ. ಹೀಟರಿನಿಂದ ಬಿಸಿನೀರು ಕೆಳಗೆ ಮನೆಗೆ ಬರುವ ಕೊಳವೆಯ ಇನ್ನೊಂದು

ತುದಿಯನ್ನು 'ಏರ್-ವೆಂಟ್' ಎಂದು ಹದಿನೈದಡಿ ಎತ್ತರಕ್ಕೆ ಏರಿಸಿ, ಟಿ-ಕೊಳವೆ ಜೋಡಿಸಿ, ಗಾಳಿಯಾಡಲು ಬಿಟ್ಟಿದ್ದರು. ಆ 'ಟಿ'ಯ ಒಂದು ತುದಿಯಲ್ಲಿ ಏನೋ ಇಣುಕುತ್ತಿರುವುದು ಕಂಡಿತು. ಅಷ್ಟರಲ್ಲಿ ಸುಮಾರು ಹತ್ತೂವರೆ ಗಂಟೆ. ಬಿಸಿಲು ಕಣ್ಣಿಗೆ ರಾಚುತ್ತಿತ್ತು. ಆದರೂ ಕಂಡದ್ದನ್ನು ಪರಾಂಬರಿಸದೆ ಬಿಡಬಾರದು. ಕೊಳವೆಯನ್ನು ಅಲುಗಾಡಿಸಿಯಾಯ್ತು, ಪ್ರಯೋಜನವಾಗಲಿಲ್ಲ. ಇನ್ನೊಂದು ಪ್ಲಾಸ್ಟಿಕ್ ಕೊಳವೆ ತಂದು ಅದರಿಂದ ಕುಟ್ಟಿ ಬೀಳಿಸುವ ಪ್ರಯತ್ನವೂ ಆಯ್ತು, ಉಪಯೋಗವಾಗಲಿಲ್ಲ. ಬಿಸಿಲಿಗೆ ಕೆಂಪಾದ, ವಿಫಲಯತ್ನಕ್ಕೆ ಕಪ್ಪಾದ ದುಮು-ದುಮು ಮುಖದಿಂದ ಕೆಳಗಿಳಿದು ಬಂದೆ. ತಣ್ಣೀರಲ್ಲಿ ಮುಖ ತೊಳೆದು, ಕೋಣೆಗೆ ಹೋಗಿ ನೈಟಿ ತೆಗೆದಿರಿಸಿ, ಚೂಡಿದಾರ್ ಹಾಕಿಕೊಂಡೆ. ಶಾಲನ್ನು ಸೊಂಟಕ್ಕೆ ಸುತ್ತಿ ಬಿಗಿದೆ. ಹತ್ತಡಿ ಎತ್ತರದ ಅಲ್ಯೂಮಿನಿಯಮ್ ಏಣಿಯನ್ನು ಹೊತ್ತು ಮೇಲೆ ತಂದೆ. ಇಷ್ಟಾಗುವಾಗ ಮಕ್ಕಳೆಲ್ಲ ನನ್ನನ್ನು ಬೆರಗಾಗಿ ನೋಡುತ್ತಿದ್ದರೆ, ಶಾಂತಕ್ಕ ಸರ್ಕಸ್ ಪ್ರಾಣಿಯನ್ನು ನೋಡುವಂತೆ ನೋಡಿದರು. "ಇದೆಂಥಾ ಹೆಣ್ಣಪ್ಪಾ?" ಅನ್ನುವ ಭಾವ ಅವರ ಕಣ್ಣಲ್ಲಿತ್ತು. ನನ್ನ ಹಿಂದೆ ತಾರಸಿಗೆ ಬರುತ್ತಿದ್ದ ಅವರನ್ನು ಬೇಡವೆಂದು ತಿರುಗಿ ಕಳುಹಿದೆ.

ತಾರಸಿಯಲ್ಲಿ, ಏಣಿಯನ್ನು ಬೇರೆಲ್ಲೂ ಆಧರಿಸಿ ನಿಲ್ಲಿಸುವಂತಿರಲಿಲ್ಲ, ಸೋಲಾರ್ ಹೀಟರಿಗೇ ಆನಿಸಿಟ್ಟೆ. ಎರಡು ಮೆಟ್ಟಿಲು ಹತ್ತುವಷ್ಟರಲ್ಲಿ ಸೋಲಾರ್ ಟ್ಯಾಂಕ್ ಒಂದಿಂಚು ಅತ್ತ ಜರುಗಿತು. ಇನ್ನು ಅದನ್ನು ನಂಬುವಂತಿರಲಿಲ್ಲ. ಮತ್ತೆ ಕೆಳಗೆ ಹೋಗಿ ನಾಲ್ಕು ಮಕ್ಕಳನ್ನೂ ಬರಹೇಳಿದೆ. ಅಂಜುತ್ತಾ ಬಂತು ಮಕ್ಕಳ 'ಮರಿ'ಸೈನ್ಯ. ಏಣಿಯನ್ನು ನಾನು ಆಧರಿಸಿ ಹಿಡಿದು, ಮಗನನ್ನು ಏಣಿ ಹತ್ತಿ ಅದನ್ನು ಪೇಪರಿನಲ್ಲಿ ಹಿಡಿದು ತೆಗೆಯಲು ಹೇಳಿದೆ. ನಡುಗುತ್ತಿರುವ ಏಣಿಯನ್ನು ಇನ್ನೂ ನಡುಗುತ್ತಾ ಹತ್ತಿ, ಮೂರನೇ ಮೆಟ್ಟಲಿಗೇ ಸಾಕಾಗಿ ಕೆಳಗಿಳಿದ. ಎಷ್ಟಾದರೂ ಅತಿಥಿಗಳಾಗಿ ಬಂದ ಮಕ್ಕಳೆಂದು ಉಳಿದಿಬ್ಬರಿಗೂ ಇಂಥಾ ಕೆಲಸ ಹೇಳಲು ನನಗೇ ಸಂಕೋಚ. ಆದರೂ ಅವರಲ್ಲಿ ಕಿರಿಯಳು ಹತ್ತುತ್ತೇನೆಂದಳು. ಅಷ್ಟಕ್ಕೆ ನನ್ನ ಮಗಳಿಗೆ ಉತ್ಸಾಹ ಉಕ್ಕಿತು. ತಾನೇ ಹತ್ತಿದಳು. ಏಳನೇ ಮೆಟ್ಟಿಲು ಹತ್ತಿದಾಗ ತನಗೆ ಸಿಗದೆಂದು ಅರಿವಾಗಿ ಕೆಳಗಿಳಿದಳು. ಅಷ್ಟರಲ್ಲಿ ಫೋನ್ ಕರೆ ಬಂತೆಂದು ಶಾಂತಕ್ಕ ಕರೆದರು. ಮಕ್ಕಳನ್ನು ಒತ್ತಾಯದಿಂದ ಮನೆಯೊಳಗೆ ಕರೆದುಕೊಂಡು ಬಂದದ್ದಾಯ್ತು. ಗಂಟೆ ಹನ್ನೊಂದೂಕಾಲು.

ಫೋನಿಗೆ ಉತ್ತರಿಸಿ, ಒಂದೊಂದು ಟೀ ಕುಡಿದೆವು. ಶಾಂತಕ್ಕನ ಹೊರತಾಗಿ ಎಲ್ಲರೂ ಮತ್ತೊಮ್ಮೆ ತಾರಸಿಗೆ ಹೋದೆವು. ಇಬ್ಬಿಬ್ಬರು ಮಕ್ಕಳು ಒಂದೊಂದು ಕಡೆ ನಿಂತು ಏಣಿ ಹಿಡಿಯುವಂತೆ ಅಪ್ಪಣೆಯಾಯ್ತು. ಆಗಷ್ಟೇ ಸಿಕ್ಕಿದ ಉದ್ದದ ಸರಿಗೆಯೊಂದನ್ನು ಹಿಡಿದು ನಾಲ್ಕು ಮೆಟ್ಟಿಲು ಹತ್ತಿದೆ. ಮಕ್ಕಳ ತಲೆಯ ಮಟ್ಟದಲ್ಲಿ ನನ್ನ ಕಾಲ್ಗಳು. ಮಕ್ಕಳು ಕೋರಸ್‌ನಲ್ಲಿ "ಹೋ.... " ಅಂದರು. ಗಾಬರಿಯಾಯ್ತು. "ಇಳೀಬೇಕಾ?" ಅಂದೆ. "ಕಾಲು ವಾಸನೆ ಬರ್ತದಾ?" ಪ್ರಶ್ನೆ ಬಾಯಿಂದ ಹೊರಗೆ ಬರಲಿಲ್ಲ. "ಇಲ್ಲ, ಪರವಾಗಿಲ್ಲ; ಆಚೆ-ಈಚೆ ಅಲ್ಲಾಡಬೇಡಿ. ಏಣಿ ಗಟ್ಟಿಯಾಗಿ ಹಿಡಿದಿದ್ದೇವೆ.... ಆದ್ರೆ ಇನ್ನು ಹತ್ತಬೇಡಿ...." ಅಂದರು. ಸರಿ ಅಲ್ಲಿಂದಲೇ ಕೈ ಎತ್ತರಿಸಿ ಸರಿಗೆಯನ್ನು ಚಾಚಿದಾಗ ಒಂದಿಷ್ಟು ತಗಲಿದ ಹಾಗಾಯ್ತು. "ಇನ್ನೊಂದೇ ಮೆಟ್ಟಲು ಹತ್ತಿದ್ರೆ, ಆಚೆಯಿಂದ ಕುಟ್ಟಿ ಬಿಡಬಹುದು, ಈಚೆ ಬದಿಗೆ ಅದು ಬಿದ್ದರೂ ಬೀಳಬಹುದು, ಹತ್ತಲಾ....?" ಕೇಳಿದೆ. "ಸ್ವಲ್ಪ ಇಳೀರಿ...." ಅಂದಿತು ಕೋರಸ್. ಇಳಿದೆ. ಹತ್ತು ನಿಮಿಷ ಸುಧಾರಿಸಿಕೊಂಡಿತು ಸೈನ್ಯ. "ಜೂಸ್ ಬೇಕು...." "ನೀರು ಬೇಕು...." "ಬಾತ್‌ರೂಮಿಗೆ ಹೋಗಬೇಕು...." ಕೋರಿಕೆಗಳು ಬಂದವು. ಸರಿ, ಎಲ್ಲರೂ ಮತ್ತೆ ಕೆಳಗೆ ಬಂದೆವು.

ಇನ್ನೊಮ್ಮೆ ಪ್ಲಂಬರ್ ಶಂಕರನಿಗೆ ಫೋನ್ ಮಾಡಿದೆ. ಅವನಿರಲಿಲ್ಲ, ಆದರೆ ಅವನ ಸೆಲ್-ಫೋನಿನ ಸಂಖ್ಯೆ ಸಿಕ್ಕಿತು. ಕರೆ ಮಾಡಿದೆ. ಎಲ್ಲೋ ಒಂದು ಕಡೆ, ಇಪ್ಪತ್ತು ಮೈಲಿಯಾಚೆ ಕೆಲಸದಲ್ಲಿದ್ದ. ಸಂಜೆ ಸುಮಾರು ಆರರ ಹೊತ್ತಿಗೆ ಬರುತ್ತೇನೆಂದ. ಸರಿಯೆಂದೆ, ಬೇರೇನೂ ದಾರಿಯಿಲ್ಲದೆ. ಮತ್ತೆ ನಮ್ಮ ಮರಿಸೈನ್ಯ ತಾರಸಿಗೆ ದಂಡಯಾತ್ರೆ ಹೊರಟಿತು. ಊಟಕ್ಕೆ ಮೊದಲು ಈ ಕೆಲಸ ಮುಗಿಸಬೇಕು ಅಂತ ಸೈನ್ಯಕ್ಕೆ ಆಜ್ಞೆ ಮಾಡಿದೆ. ಮುಖ-ಮುಖ ನೋಡಿಕೊಂಡವು ಮರಿಗಳು. ಇಬ್ಬಿಬ್ಬರು ಒಂದೊಂದು ಬದಿಗೆ ನಿಂತು ಏಣಿಯನ್ನು ಹಿಡಿದರು, ಐದನೇ ಮೆಟ್ಟಲಿಗೆ ನಾನೇರಿದೆ. ಸರಿಗೆಯ ತುದಿಯನ್ನು ಅಂಕೆ-ಏಳರ ಹಾಗೆ ಬಗ್ಗಿಸಿದ್ದೆ. ಹದವಾಗಿ 'ಟಿ' ಸಂಧಿಯ ಆಚೆ ಕಡೆಯಿಂದ ಕುಟ್ಟಿದೆ, ತುಣುಕು ಈ ಕಡೆಗೇ ಬೀಳಬಹುದೆಂದು. ಸಫಲವಾಗಲಿಲ್ಲ; ಏನೂ ಆಗಲಿಲ್ಲ. ಇಲ್ಲಿ ಕಾಣುವ ತುಣುಕಿಗೆ ಸರಿಗೆಯ ತುದಿ ತಗಲುತ್ತಿದೆಯೋ ಇಲ್ಲವೋ ತಿಳಿಯಲಿಲ್ಲ. ಇಲ್ಲಿಂದಲೇ ದೂಡಿಬಿಡೋಣವೆಂದು ಇನ್ನೇನು ಕೊಳವೆಯ ತುದಿಯಲ್ಲಿ ಕಾಣುವ ತುಣುಕಿಗೆ ಕುಟ್ಟಬೇಕು.... ಒಂದು ಮರಿಗೆ ಸೀನು ಬಂತು... ಏಣಿ ಓಲಾಡಿತು. ಬೀಳುವ ಮೊದಲು ಹೇಗೋ ಕೆಳಗೆ ಹಾರಿದೆ. ಎಲ್ಲ ಸ್ಥಿರವಾದ ಮೇಲೆ ಮತ್ತೊಮ್ಮೆ ಹತ್ತಿದೆ. ಈ ಬಾರಿ, ಅಂದಾಜು ಮಾಡದೆ, ಸರಿಗೆಯ ತುದಿಯಿಂದ ಜೋರಾಗಿ ಕುಟ್ಟಿಬಿಟ್ಟೆ. ತುಣುಕು ಸರಿಯಾಗಿ ಒಳಗೆ ಸೇರಿಹೋಯಿತು. ಆ ಕಡೆಯಿಂದ ಹೊರಗೆ ಬರಲೇ ಇಲ್ಲ. ಕೆಲಸ ಇನ್ನಷ್ಟು ಕೆಟ್ಟಿತು.

ಎಲ್ಲರೂ ಪೆಚ್ಚುಮುಖ ಮಾಡಿಕೊಂಡು ಕೆಳಗೆ ಬಂದೆವು. ಎಲ್ಲ ನಳ್ಳಿಗಳಲ್ಲಿ ಮತ್ತೊಮ್ಮೆ ಬಿಸಿನೀರು ಹರಿಸಿದೆ. ಅಡುಗೆ ಮನೆಯಲ್ಲಿ ತಣ್ಣೀರು ಮಾತ್ರ ಬರುವ ಹಾಗೆ, ಬಿಸಿನೀರಿನ ನಳ್ಳಿಯನ್ನು ಹೊರಗಿನಿಂದಲೇ ತಿರುಪು ಮುಚ್ಚಿ ಇರಿಸಿದೆ. ಹಾಗೇ ಎಲ್ಲ ಕೈ-ತೊಟ್ಟಿಗಳಿಗೂ ಬಿಸಿನೀರು ನಿಲ್ಲಿಸಿದೆ. ಎರಡು ಬಚ್ಚಲುಮನೆಗಳಲ್ಲಿ ಮಾತ್ರ ಬಿಸಿನೀರು ಬರುತ್ತಿತ್ತು. ಸೋಲಾರ್ ತೊಟ್ಟಿಯ ನೀರನ್ನು ಪೂರ್ತಿ ಹೊರಗೆ ಹರಿಸುವ ಯೋಚನೆಗೆ ಬಲವಂತವಾಗಿ ಕಡಿವಾಣ ಹಾಕಬೇಕಾಯಿತು. ಬೇಸಗೆಯ ದಿನಗಳಲ್ಲಿ ಇನ್ನೂರು ಲೀಟರ್ ನೀರನ್ನು ಹಾಗೇ ಹರಿಸಿ ವ್ಯಯ ಮಾಡಲು ನನಗಾವ ಹಕ್ಕಿದೆ? ಮನಸ್ಸಿಗೆ ಕಡಿವಾಣ ಹಾಕಿ ಮೂಲೆಗೆ ನೂಕಲಾಯಿತು. ಮನೆ, ಮೈ ಮಾತ್ರವಲ್ಲ ಮನದೊಳಗೂ ಮತ್ಸ್ಯಗಂಧ ಆವೃತವಾಯಿತು. ಸಂಜೆ ಮಲ್ಪೆಗೆ ಹೋಗುವ ಸಾಧ್ಯತೆಗೂ ಕಲ್ಲು ಬಿದ್ದಿತ್ತು. ಊಟ ಮಾಡಿ ಮಕ್ಕಳು ತಮ್ಮಷ್ಟಕ್ಕೆ ಏನೇನೋ ಆಡಲು ತೊಡಗಿಕೊಂಡರು.

ನನ್ನ ತಲೆಯಲ್ಲಿ ಕೊರೆತ, ಇದನ್ನು ಹೇಗೆ ಪರಿಹರಿಸುವುದು? ಸಂಜೆ ಶಂಕರ್ ಬಂದಾಗ ಸಮಸ್ಯೆ ಪರಿಹಾರವಾಗದಿದ್ದಲ್ಲಿ, ಮರುದಿನದಿಂದ ಮನೆಮಂದಿಯೆಲ್ಲರ ಸ್ನಾನಕ್ಕೆ ಬಚ್ಚಲೊಲೆಗೆ ಬೆಂಕಿ ಹಾಕುವ ತೀರ್ಮಾನಕ್ಕೆ ಬಂದೆ. ಹಂಡೆಗೆ ನೀರು ತುಂಬಿಸಿಟ್ಟೆ. ಹಾಗೂ ಹೀಗೂ ಸಂಜೆ ಐದಾಗುತ್ತಿದ್ದಂತೆ, ಶಂಕರನಿಗೆ ಮತ್ತೆ ಫೋನ್ ಮಾಡಿ ನೆನಪಿಸಿದೆ.

ಶಂಕರ್ ಅವನ ಸಹಚರ ಗೋಪು ಜೊತೆ ಆರೂಮುಕ್ಕಾಲಿಗೆ ಬಂದ. ಗೋಪು ಆರಡಿ ಎತ್ತರದ ತುಂಬಾ ಸಣಕಲ ವ್ಯಕ್ತಿ. ಅವನು ಬೆಳಗ್ಗೇನೇ ಬರಬಾರದಿತ್ತೇ ಅನ್ನಿಸಿ ಅವನ ಮೇಲೇ ಕೋಪ ಬಂತು. ಆದದ್ದನ್ನೆಲ್ಲ ವಿವರಿಸಿ, ನನ್ನ ಕೋಪವನ್ನೂ ತೋರಿಸಿಕೊಂಡೆ. “ಬೆಳಗ್ಗೆನೇ ನೀವಿಬ್ಬರು ಬಂದಿದ್ದರೆ ನಾವು ಕಸರತ್ತು ಮಾಡಿ ಆ ತುಣುಕನ್ನು ಕೊಳವೆಯೊಳಗೆ ಬೀಳಿಸುತ್ತಿರಲಿಲ್ಲ” ಅಂದೆ. “ನಾವು ಬರುತ್ತೇವೇಂತ ಹೇಳಿದ ಮೇಲೂ ನೀವೇ ಏನೋ ಮಾಡಬೇಕೂಂತ ನಿಮಗಿದ್ದರೆ ನಾವೇನು ಮಾಡ್ಲಿಕ್ಕೆ ಆಗ್ತದೆ? ನಮಗೆ ಬೇರೆ ಕೆಲಸ ಇಲ್ವ?” ಗೋಪು ದಬಾಯಿಸಿದ. ಶಂಕರ ಮೆತ್ತನೆಯ ಹುಡುಗ, ಸುಮ್ಮನೆ ನಕ್ಕ. ಇಬ್ಬರೂ ಮಸುಕು ಬೆಳಕಿನಲ್ಲಿ ತಾರಸಿಗೆ ಹೊರಟಾಗ, ಅವರಿಗೆ ಟೀ ಮಾಡಲು ಶಾಂತಕ್ಕನಿಗೆ ಹೇಳಿ, ನಾನೂ ಹೋದೆ. ಸೋಲಾರ್ ಹೀಟರಿನ ‘ಟಿ’ ಸಂಧಿಯಲ್ಲಿ ತುಣುಕು ಇಣುಕುತ್ತಿದ್ದ ರೀತಿಯನ್ನೂ, ನಮ್ಮ ಸಾಹಸವನ್ನೂ ಮತ್ತೆ ವಿವರಿಸಿದೆ. ಏಣಿ ಪುನಃ ಮೇಲೆ ಬಂತು. ಶಂಕರ ಮತ್ತು ನಾನು ಹಿಡಿದೆವು. ಗೋಪು ಮೇಲೆ ಹತ್ತಿ ಕೊಳವೆಯೊಳಗೆ ಬೆರಳು ತೂರಿಸಿ ಒಂದು ಚೂರು ಮೀನನ್ನು ಹೊರಗೆಳೆದ. ಇನ್ನೊಂದು ಚೂರು ತುಂಡಾಗಿ ಕೊಳವೆಯೊಳಗೇ ಬಿತ್ತು ಅಂದ. ಬೆಳಗ್ಗೇನೇ ಇವನು ಬಂದಿದ್ದರೆ ಪೂರ್ತಿ ತೆಗೆಯಲು ಸಿಗುತ್ತಿತ್ತು– ಅಂದುಕೊಂಡೆ. ನನ್ನನ್ನು ನಾನೇ ಶಪಿಸಿಕೊಂಡೆ (ಬೇರೆ ಯಾರೂ ಸಿಗಲಿಲ್ಲ).

ಮೀನಿನ ಚೂರು ಅಲ್ಲಿಗೆ ಹೋಗಿ ಸೇರಿದ್ದು ಹೇಗೆ ಅನ್ನುವ ಸಿದ್ಧಾಂತವನ್ನು ಚರ್ಚಿಸುತ್ತಾ ಮೂವರೂ ಕೆಳಗೆ ಬಂದೆವು. ಚಹಾದಲ್ಲಿ ನನ್ನ ಪಾಲೂ ಇತ್ತು. ಹೀರುತ್ತ, ಚರ್ಚೆ ಮುಂದುವರಿದಾಗ, ಶಂಕರ “ಮೇಡಮ್, ಅದು ಮೀನು ಅಂತ ನಿಮಗೆ ಗೊತ್ತಾದದ್ದು ಹೇಗೆ?” ಕೇಳಿದ. “ಮೂಗು ಸರಿಯಾಗಿದೆಯಪ್ಪಾ...” ಅಂದೆ. ಮತ್ತೊಮ್ಮೆ ಎಲ್ಲ ಬಿಸಿನೀರಿನ ನಳ್ಳಿಗಳ ಜಾಲರಿಗಳಲ್ಲಿ ಬಿಳಿ ಕಸಗಳಿದ್ದದ್ದನ್ನು ತಿಳಿಸಿದೆ. ಗೋಪು ಬಚ್ಚಲುಮನೆ ನಳ್ಳಿಯ ಜಾಲರಿ ತೆಗೆಯಲು ಹೋದ. ಶಂಕರನೆಂದ, “ಮೇಡಮ್, ನೀವು ಬ್ರಾಹ್ಮಣರು. ಮೀನು ತಿನ್ನುದಿಲ್ಲ. ಆದ್ರೆ, ಇವತ್ತು ಎಲ್ಲರೂ ಮೀನಿನ ಸಾರಿನಲ್ಲೇ ಸ್ನಾನ ಮಾಡಿದ್ರಲ್ಲ....” ಅಂತ ನಕ್ಕ. “ಅದು ಸಾರಲ್ಲ, ಅದರಲ್ಲಿ ಮಸಾಲೆ ಇರಲಿಲ್ಲ.” ಅಂದೆ ನಾನು (‘ಕೆಳಗೆ ಬಿದ್ದರೂ ಮೀಸೆಗೆ ಮಣ್ಣಾಗಲಿಲ್ಲ’ ಅಂತ ಸಾಧಿಸುವ ಅಪ್ಪನ ಮಗಳು, ತಮ್ಮಂದಿರ ಅಕ್ಕ, ಗಂಡನ ಹೆಂಡತಿ, ಮಗನ ಅಮ್ಮ... ಈ ಎಲ್ಲವೂ ನಾನೇ). “ಕುದಿಯುವ ಮಸಾಲೆ ನೀರಿಗೆ ಮೀನು ಹಾಕಿದ್ರೆ ಮೀನಿನಸಾರು ತಯಾರು, ನನಗ್ಗೊತ್ತು. ಆದ್ರೆ, ಇವತ್ತು ಸೋಲಾರ್ ಟ್ಯಾಂಕಿನ ಬಿಸಿನೀರಿಗೆ ಮಸಾಲೆ ಯಾರೂ ಹಾಕಿರಲಿಲ್ಲ. ಅಥವಾ.... ನೀವೇನಾದ್ರೂ.... ನಿನ್ನೆ ರಾತ್ರೆ ಆ ಕೆಲಸ ಮಾಡಿದ್ದೀರ...?” ಶಂಕರನ್ನೇ ಛೇಡಿಸುತ್ತಾ ಕೇಳಿದೆ. ನನ್ನ ಧ್ವನಿ ತುಂಟವಾಗಿತ್ತು. ಅವನು ನನ್ನನ್ನು ಛೇಡಿಸಿದ್ದಕ್ಕೆ ಪ್ರತಿಯೇಟಿದು. “ಇಲ್ಲ, ಮೇಡಮ್. ಹಾಗೆಲ್ಲ ಮಾಡುದಿಲ್ಲ ನಾವು.” ಅಂದ. ಅಷ್ಟರಲ್ಲಿ ಗೋಪು, ಮತ್ತೊಂದಿಷ್ಟು ಬಿಳಿ ಕಸ ಅಂಗೈಯಲ್ಲಿ ಹಾಕಿಕೊಂಡು ಬಂದ. ಮೀನಿನ ಮೂಳೆಗಳೇ ಎಂದು ಪರಿಣತರಿಬ್ಬರೂ ಪ್ರಮಾಣೀಕರಿಸಿದರು. ಇನ್ನೂ ಒಂದೆರಡು ದಿನಗಳಲ್ಲಿ ಎಲ್ಲ ಚೂರುಗಳೂ ಹೊರಬರಬಹುದು. ನಳ್ಳಿಯೇನಾದರೂ ಕಟ್ಟಿಕೊಂಡರೆ, ನೀರೇ ಬರದಿದ್ದರೆ, ಮತ್ತೆ ಕರೆಯಲು ಹೇಳಿ ಇಬ್ಬರೂ ಹೊರಟರು. ಗೇಟು ದಾಟುತ್ತಾ ಶಂಕರ ಗೋಪಿಯೊಡನೆ, “ಇಂಥಾ ಹೆಂಗಸನ್ನು ಎಲ್ಲೂ ನಾನು ನೋಡಿಲ್ಲ... ಎಲ್ಲರ ಹಾಗಲ್ಲ ಇವರು, ಅಸಾಧ್ಯ ಜನ.” ಅಂದದ್ದು ಕೇಳಿ ಮೆಟ್ಟಲಿಂದ ನಾನು “ಥಾಂಕ್ಸ್” ಅಂತ ಕೂಗಿಕೊಂಡೆ. “ಓಯ್, ನೀವು ಒಳಗೆ ಹೋಗ್ಲಿಲ್ವಾ?” ಅಂದ. ಗೋಪು ಕಡೆ ತಿರುಗಿ, “ಹೀಗೇ...” ಅನ್ನುತ್ತಾ ಏನೋ ಹೇಳಿಕೊಂಡು ಅವನನ್ನೂ ಕೂರಿಸಿಕೊಂಡ ಸ್ಕೂಟರ್ ಚಲಾಯಿಸಿಕೊಂಡು ಹೋಗಿಬಿಟ್ಟ.

ಮತ್ತೂ ನಾಲ್ಕು ದಿನಗಳವರೆಗೆ ಬಿಸಿನೀರಿನ ನಳ್ಳಿಯಿಂದ ದಿನಕ್ಕೆರಡು ಬಾರಿ ಹತ್ತತ್ತು ನಿಮಿಷ ಬಿಸಿನೀರು ಹರಿಸಿ ಜಾಲರಿ ಬಿಡಿಸಿ ಮೀನುಮೂಳೆಗಳನ್ನು ತೆಗೆಯುವ ಜಾಡಮಾಲಿ ಕೆಲಸ ಮಾಡಿದೆ. ಐದನೆಯ ದಿನ ನೀರಿನ ವಾಸನೆಯೂ ಬಹಳಷ್ಟು ಕಡಿಮೆಯಾಗಿತ್ತು. ಮಕ್ಕಳನ್ನೆಲ್ಲ ಊರಲ್ಲಿ, ಅವರೆಲ್ಲರ ಅಜ್ಜಿ ಮನೆಯಲ್ಲಿ ಬಿಟ್ಟು ಬಂದಿದ್ದೆ. ಶಾಂತಕ್ಕನ ಮುಖ ಮತ್ತೆ ಶಾಂತವಾಗತೊಡಗಿತ್ತು (ಈ ಐದು ದಿನಗಳಲ್ಲಿ ಏನೋ ಅಸಮಾಧಾನ ಕಾಣಿಸುತ್ತಿತ್ತು, ಅದು ಸಹಜ ಅಂದುಕೊಳ್ಳುತ್ತೇನೆ). ಕೊನೆಗೂ ಒಂದು ವಾರದ ಮೇಲೆ, ಎಲ್ಲ ಬಿಸಿನೀರಿನ ನಳ್ಳಿಗಳೂ ಮತ್ತೆ ತೆರೆದುಕೊಂಡವು. ಅಡುಗೆಮನೆಗೆ ಮೀನಿನ ನೀರು ಪ್ರವೇಶಿಸಿರಲಿಲ್ಲ ಅಂತ ಶಾಂತಕ್ಕ ನಂಬಿದ್ದರು. ನಾನಂತೂ ಮತ್ತೂ ಒಂದೆರಡು ದಿನ ಹೊರಗೆ ಹೋಗುವ ಮೊದಲು ಮತ್ತೆ ಮತ್ತೆ ಮೈ ವಾಸನೆ ಇದೆಯೇ ಎಂದು ನೋಡಿಕೊಳ್ಳುತ್ತಿದ್ದೆ. ಧಾರಾಳವಾಗಿ, ಮೈತುಂಬ ಶ್ರೀಗಂಧದ ಪೌಡರನ್ನು ಸುರಿದುಕೊಳ್ಳುತ್ತಿದ್ದೆ. ಹಲ್ಲುಜ್ಜಲು, ಮುಖ ತೊಳೆಯಲು ಬಿಸಿನೀರು ಬಳಸುತ್ತಿರಲಿಲ್ಲ (ಕೊರೆಯುವ ಛಳಿ ಹೇಗೂ ಇರಲಿಲ್ಲ).

ಇದೆಲ್ಲ ಘಟಿಸಿ ನಾನಿದನ್ನು ಬರೆಯುವ ಹೊತ್ತಿಗೆ, ಮೂವತ್ತಮೂರು ತಿಂಗಳುಗಳೇ ಕಳೆದರೂ ಒಮ್ಮೊಮ್ಮೆ ಆ ಮೀನಿನ ವಾಸನೆ ಮೂಗಿಗೆ ಅಡರುತ್ತದೆ. ನೆನಪು ಹಿಂದೆ ಹೋಗುತ್ತದೆ. ಏಣಿಯಲ್ಲಿ ನಿಂತಾಗಿನ ಕಾಲ್ನಡುಕ ಎದೆ ನಡುಗಿಸುತ್ತದೆ. ಪ್ರಶ್ನೆ ಹೆಡೆಯಾಡುತ್ತದೆ: “ಕೊಳವೆಯ ಆ ತುದಿಯೊಳಗೆ ಸತ್ತ ಮೀನು ಸೇರಿಕೊಂಡದ್ದು ಹೇಗೆ?” ಈ ಯಕ್ಷ ಪ್ರಶ್ನೆಗೆ (ಬೇತಾಳ ಪ್ರಶ್ನೆಯೆಂದರೂ ಸರಿ, ಸತ್ತ ಮೀನಿನ ಬಗ್ಗೆಯಲ್ಲವೆ...!) ಉತ್ತರ ತಿಳಿದವರು ಹೇಳದೇ ಇದ್ದರೆ ನೀವು ವಾಸನಾವತಾರದ ಪ್ರಕೋಪಕ್ಕೆ ಗುರಿಯಾಗುವಿರೆಂದು ತಿಳಿಯಪಡಿಸುತ್ತೇನೆ. ಇಲ್ಲಿಗೆ ‘ಅಭಿನವ ಮತ್ಸ್ಯಗಂಧಾವೃತ ಕಥನ’ ಪರಿಸಮಾಪ್ತವಾದುದು.

***

ಲೇ ಖ ನ

"No, let's go threegether" ಅನ್ನಬೇಕೆ?

ಮಧು ಅಸುತಿ
ಕ್ಯಾಲಿಫ಼ೋರ್ನಿಯ

# ಮುಗ್ಧ ಮಾತು

ನಮ್ಮ ಮಕ್ಕಳು ರೇಣು ಮತ್ತು ಪವನ, ಚಿಕ್ಕವರಿರುವಾಗ ನಾವು ಸಿಂಗಪೂರಿನಲ್ಲಿದ್ದೆವು. ಸಿಂಗಪೂರ ತುಂಬಾ ಚಿಕ್ಕ ದೇಶವಾದ್ದರಿಂದ ಜನರ ವಸತಿಗೆ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ಗಳೇ ಹೆಚ್ಚು. ನಾವೂ ಒಂದು ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸಿನಲ್ಲಿ ಇದ್ದೆವು. ನಮ್ಮ ಹಾಗೆ ಭಾರತದಿಂದ ಬಂದ ಇನ್ನೂ ಹಲವಾರು ಮಕ್ಕಳಿದ್ದ ಕುಟುಂಬಗಳು ಆ ಕಾಂಪ್ಲೆಕ್ಸಿನಲ್ಲಿದ್ದವು. ಹೀಗಾಗಿ ಮಕ್ಕಳಿಗೆ ಆಡಲು ಯಾವಾಗಲೂ ಯಾರಾದರೂ ಸಮ ವಯಸ್ಸಿನ ಮಕ್ಕಳು ಸಿಗುತ್ತಿದ್ದರು ಮತ್ತು ದೊಡ್ಡವರಿಗೂ ಟೈಮ್‌ಪಾಸ್ ಮಾಡಲು ತುಂಬಾ ಒಳ್ಳೆಯ ಕಂಪನಿ ಇತ್ತು.

ಈ ಬೇಸಿಗೆ ರಜೆಯಲ್ಲಿ ಸಿಂಗಪೂರದಿಂದ ನಮ್ಮ ಆತ್ಮೀಯ ಸ್ನೇಹಿತರೊಬ್ಬರು ಬೇ ಏರಿಯಾಗೆ ಬಂದು ಹೋದರು. ಅವರೊಂದಿಗೆ ಹಳೆಯ ಸವಿನೆನಪುಗಳನ್ನು ಹಂಚಿ ಕೊಂಡೆವು. ಆಗ ನಮ್ಮ ಚಿಕ್ಕ ಮಗ ಪವನನ ಮುಗ್ಧ ಮನದ ಮಾತುಗಳು ನೆನಪಿಗೆ ಬಂದವು. ಅವುಗಳಲ್ಲಿ ಕೆಲವನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

ನಮ್ಮ ಮಗ ಪವನ ಮಾತಾಡಲು ಕಲಿತಿದ್ದು ತುಂಬಾ ಲೇಟು. ಅವನಿಗೆ ಇನ್ನೇನು ಎರಡು ವರುಷಗಳಾಗುತ್ತಿದ್ದರೂ ಸರಿಯಾಗಿ ವಾಕ್ಯ ಮಾಡಿ ಮಾತಾಡಲು ಬರುತ್ತಿರಲಿಲ್ಲ. ಯಾವಾಗ ಮಾತಾಡಲು ಕಲಿಯುತ್ತಾನಪ್ಪಾ ಇವನು ಅನಿಸುತಿತ್ತು. ದಿನ ಬೆಳಗಾದರೆ ಕುಣಿದು ಕುಪ್ಪಳಿಸಿ ಆಟವಾಡಲು 'ಧ್ರುವ ಎಂಬ ಗೆಳೆಯನಿದ್ದುದ್ದರಿಂದ ಪವನನಿಗೆ ಮಾತು ಕಲಿಯಲು ಟೈಮ್ ಇರಲಿಲ್ಲವೋ ಅಥವಾ ಅದರ ಅವಶ್ಯಕತೆಯಿದೆ ಎಂದು ಅನಿಸಲಿಲ್ಲವೋ – ಅಂತೂ ಕೆಲವು ಶಬ್ದಗಳನ್ನು ಬಿಟ್ಟರೆ ಮಾತೇ ಇಲ್ಲ. ಮಾತಾಡಲು ಶುರು ಮಾಡಿದ ಮೇಲೂ 'ಚಟ ಪಟಾ' ಅಂತ ರೈಲು ಬಿಟ್ಟಂತೆ ಮಾತಾಡುತ್ತಿರಲಿಲ್ಲ. ಆದರೆ ಶಬ್ದಗಳ ಉಪಯೋಗವನ್ನು ತನ್ನದೇ ಆದ ಶೈಲಿಯಲ್ಲಿ ಮಾಡುತ್ತಿದ್ದ.

ಅವನ ಅಕ್ಕನಿಗೆ ಚಿಕ್ಕವಳಿರುವಾಗ ಮಲಗುವುದಕ್ಕಿಂತ ಮುಂಚೆ ಒಂದು ದೇವರ ಶ್ಲೋಕವನ್ನು ಜೋರಾಗಿ ಹೇಳಿ ಮಲಗುವ ಅಭ್ಯಾಸ. ಇವನಿಗೋ ಅವನ ಅಕ್ಕ ಏನು ಮಾಡುತ್ತಾಳೋ ಅದನ್ನು ತಾನೂ ಮಾಡಬೇಕು. ಹಾಗೇ ಒಂದು ದಿನ ಮಲಗುವದಕ್ಕಿಂತ ಮೊದಲು ಅವಳು ಶ್ಲೋಕವನ್ನು ಜೋರಾಗಿ ಹೇಳುತ್ತಿದ್ದಳು. ಅದನ್ನು ಕೇಳಿ ಪವನ ತಾನೂ ಕೈ ಜೋಡಿಸಿ, ಕಣ್ಣು ಮುಚ್ಚಿ "one, two, three, four, five ...... " ಅಂತ ಜೋರಾಗಿ ಹೇಳಲು ಶುರು ಮಾಡಿದ. ಅವನು ಏನು ಮಾಡುತ್ತಿದ್ದಾನೆ ಎಂದು ತಿಳಿದ ಮೇಲೆ ನಮಗೆ ನಗು ತಡೆಯಲಾಗಲಿಲ್ಲ.

ಹೀಗೇ ಇನ್ನೊಮ್ಮೆ ಪವನ, ಅವನ ಅಕ್ಕ ಹಾಗೂ ಅವನ ಅಪ್ಪ ಮೂವರೂ ಜೊತೆಯಾಗಿ ಎಲ್ಲಿಗೋ ಹೋಗಲು ಪ್ಲಾನ್ ಹಾಕಿದ್ದರು. ಮೂವರೂ ಹೊರಡಲು ತಯಾರಾದ ಮೇಲೆ ಅವರ ಅಪ್ಪ "Okay..... let's go together" ಅಂತ ಅಂದರು. ಅದಕ್ಕೆ ಪವನ ತಕ್ಷಣ "No, let's go threegether" ಅನ್ನಬೇಕೆ?

ಇನ್ನೊಂದು ದಿನ ಸಾಯಂಕಾಲ ಎಲ್ಲರೂ ಲಿವಿಂಗ್ ರೂಮನಲ್ಲಿ ಮಾತನಾಡುತ್ತಾ ಕುಳಿತಿದ್ದೆವು. ಪವನ ಆಗ ತಾನೆ ಅಂಕಿಗಳನ್ನು ಎಣಿಸಲು ಕಲಿಯುತ್ತಿದ್ದ. ಎಷ್ಟು ನೆನಪಿಟ್ಟಿದ್ದಾನೋ ನೋಡೋಣ ಅಂತ ಅವನಿಗೆ ಅಂಕಿಗಳನ್ನು ಎಣಿಸಲು ಹೇಳಿದೆವು. ಶುರು ಮಾಡಿದ "one, two, three, four, five, ........, nineteen, twenty ". ಶಾಭಾಷ್ ಎಂದೆವು. ಅದರ ಮುಂದಿನ ಅಂಕಿಗಳನ್ನು ಎಣಿಸಲು ಪ್ರೋತ್ಸಾಹಿಸಲು ನಾವು "twenty-one " ಅಂತ prompt ಮಾಡಿದೆವು. ಅವನು "twenty-one, twenty-two" ಅಂತ ಪ್ರಾರಂಭಿಸಿದ. "twenty-nine" ವರೆಗೂ ಎಣಿಸಿದ. ಮುಂದಿನ ಅಂಕಿ ಅವನಿಗೆ ಗೊತ್ತಿಲ್ಲ ಅಂತ ನಮಗೆ ಗೊತ್ತಿತ್ತು. "twenty-nine"ಗೆ ನಿಲ್ಲಿಸುತ್ತಾನೆ ಅಂದುಕೊಂಡಿದ್ದೆವು. ಆದರೆ ಪವನ ಒಂದು ಕ್ಷಣ ಸಹ ಯೋಚನೆ ಮಾಡದೆ "twenty-nine, twenty-ten" ಅಂದುಬಿಟ್ಟ!!

ನೆನಪಿನ ಸುರುಳಿ ಬಿಟ್ಟು ಈಚೆ ಬಂದಾಗ ಚಿಕ್ಕ ಮಕ್ಕಳು ಎಲ್ಲವನ್ನೂ ಹೇಗೆ ತಮ್ಮದೇ ಆದ ಹೊಸ ಹಾಗೂ ವಿಶೇಷ ದೃಷ್ಟಿಯಿಂದ ನೋಡುತ್ತಾರೆ ಅಂತ ಅನಿಸಿತು. ದೊಡ್ಡವರಾದ ಹಾಗೆ ಆ ದೃಷ್ಟಿಕೋನ ಹೇಗೋ ಕಳೆದು ಹೋಗುತ್ತದೆ ಅಲ್ಲವೆ?

***

**'ಎಲ್ ಏ' ಮೀರಿತೋ . . .**

ಲಾಸ್ ಏಂಜಲೀಸ್ ನಗರದ ಮೂಲ ಹೆಸರು "*El Pueblo de Nuestra Señora la Reina de los Ángeles de Porciúncula*" ಅಂತೆ!

***

ಕಪ್ಪಿನಿಯ*
ಕ್ಯಾಲಿಫೋರ್ನಿಯ

## ಕಾಲ್ಬೆರಳಿಲ್ಲದ್ ಪಾಬ್ಲಿ ಕತೆ



(ಇದು ಎಡ್ವರ್ಡ್ ಲಿಯರನ The Pobble who has no toes ಪದ್ಯದ ಸ್ಥೂಲ ಭಾಷಾಂತರ)


ಕಾಲ್ಬೆರಳಿಲ್ಲದ್ ಪಾಬ್ಲೀಗ್ ಹಿಂದೆ
ನಮ್ಗಿದ್ದಷ್ಟೇ ಬೆರಳಿತ್ತಂತೆ
ಯಾರೋ "ಮುಂದೊಂದ್ ದಿವಸ ನೀನು
ಬೆರೆಳೆಲ್ಲಾನೂ ಕಳಕೋಳ್ಳೋನು"
ಅಂದಾಗವನು "ಲೊಟ್ಟಂಬಟ್ಟೆ,
ನೀನೇ ಕೆಟ್ಟೆ, ನೋಡಿಕೊ ನಾನು
ಹೊರಟೇ ಬಿಟ್ಟೆ" ಅಂತಂದ್ಬಿಟ್ಟು
ಹೊರ್ಟ್‌ಬಿಟ್ನಂತೆ

ಪಾಬ್ಲಿ ಅತ್ತೆ ಪಾರ್ವತಮ್ಮ
ಕೆಂಪು ಕಾಫ್ಫಿ ಕಷಾಯಾನ
ಕೊಟ್ಬಿಟ್ಟವನಿಗ್ ಹೇಳಿದರಂತೆ
"ಲೋಕಕ್ಕೆಲ್ಲಾ ಗೊತ್ತೇ ಗೊತ್ತು
ಪಾಬ್ಲಿ ಕಾಲಿಗ್ ಕಷಾಯದಷ್ಟು
ಒಳ್ಳೇದ್ಬೇರೆ ಏನೂ ಇಲ್ಲ
ತಿಂದ್ರೆ ಜೊತೇಗ್ ಉಂಡೆ ಬೆಲ್ಲ"

ಕಾಲ್ಬೆರಳಿಲ್ಲದ್ ಪಾಬ್ಲಿ ಒಮ್ಮೆ
ರಾಮೇಶ್ವರಕ್ ಹೋಗಿದ್ನಂತೆ
ಹೋಗಲ್ ನೀರ್ನಲ್ ಈಜಿದ್ನಂತೆ
ಮೊದಲೇ ಚೆಕ್‌ಚೆಕ್ ಕರ್ಚೀಫ್ನಿಂದ
ಚೆನ್ನಾಗ್ ಮೂಗನ್ ಸುತ್ಕೊಂಡ್ನಂತೆ
ಯಾಕೇಂತಂದ್ರೆ ಪಾರ್ವತಮ್ಮ
"ಮೂಗನ್ ಚೆನ್ನಾಗ್ ಸುತ್ತಿಟ್ಕೊಂಡ್ರೆ
ಕಾಲ್ಬೆರಳೇನೂ ಆಗೋದಿಲ್ಲ
ಲೋಕಕ್ಕೆಲ್ಲಾ ಗೊತ್ತೇ ಗೊತ್ತು
ಪಾಬ್ಲಿ ಕಾಲಿನ್ ಎಲ್ಲಾ ಬೆರಳು
ಕಾಪಾಡಿಟ್ಕೊಳ್ಳೋದರ ತಿರುಳು
ಮೂಗೊಂದ್ ಚೆನ್ನಾಗ್ ನೋಡ್ಕೋಬೇಕು
ಕರ್ಚೀಫ್ ಗಂಟ್ಕಟ್ ಹಾಕ್ಕೋಬೇಕು"
ಅಂತ ಪಕ್ಕದ್ ಮನೇವ್ರ್ಗೆಲ್ಲಾ
ದಿನಬೆಳಗಾಗ್ತಾ ಹೇಳ್ತಿದ್ರಂತೆ

ಪಾಬ್ಲಿ ಜೋಕಾಗೀಜಿದ್ನಂತೆ
ದೋಣಿ ಹಡಗು ಏನಾದ್ರೂನು
ಹತ್ರ ಹತ್ರ ಬಂದಾಗ್ ಔನು
ಠಣ್ಣ-ಢಣ್ಣ-ಠಣ್ಣ ಅಂತ
ಗಂಟೆ ಇಟ್ಕೊಂಡ್ ಹೊಡದ್ಬಿಟ್ನಂತೆ
ಎಲ್ಲಾರೂನೂ "ನೋಡಿ! ನೋಡಿ!
ಪಾಬ್ಲಿ ಮೀನನ್ ಹಿಡಿಯೋದ್ ನೋಡಿ!
ಪಾರ್ವತಮ್ಮಾವ್ರ್ ಬೆಕ್ಕಿಗ್ ನಾಳೆ
ಹಬ್ಬದೂಟ ಮಾಡ್‌ಹಾಕ್ತಾಳೆ"
ಅಂತ ಘನವಾಗ್ ಕಿರಚಿದ್ರಂತೆ

ಆದ್ರೆ ಪಾಬ್ಲಿ ದಡಕ್ ಸೇರೋ
ಅಷ್ಟ್ರಲ್ ಸರ್ರಂತ್ ಒಂದ್ಬಿಳಿ ಶಾರ್ಕು
ಪರ್ರಂತ್ ಪಾಬ್ಲಿ ಚೆಕ್‌ಚೆಕ್ ಕರ್ಚೀಫ್
ಎಳಕೊಂಡ್ ಎಲ್ಲೋ ಹೋಗೇ ಬಿಡ್ತು
ಪಾಬ್ಲಿ ನೀರಿಂದ್ ಹೊರಗ್ಬಂದ್ ಬಗ್ಗಿ
ನೋಡ್ದಾಗ್ ಸಾಲಾಗಿದ್ ಕಾಲ್ಬೆರಳು
ಒಂದ್ನೆ ಬೆರಳು ಎರಡ್ನೆ ಬೆರಳು
ಮೂರ್ನೆ ನಾಕ್ನೆ ಐದ್ನೆ ಬೆರಳು
ಆರ್ನೆ, ಏಳ್ನೆ, ಎಂಟ್ನೆ ಬೆರಳು
ಒಂಬತ್ನೇದು ಹತ್ನೇ ಬೆರಳು
ಎರಡ್ಕಾಲ್ನಲ್ಲಿದ್ ಮಣಿಮಣಿ ಬೆರಳು
ಒಂದೂ ಇಲ್ದೆ ಮಂಗಮಾಯ
ಇದ್ಯಾವ್ ನ್ಯಾಯ? ಏನನ್ಯಾಯ!




ಆವತ್ತಿಂದ ಈವತ್ವರ್ಗೂ
ಯಾರ್ಗೂ ಪಾಬ್ಲಿ ಮಣಿಮಣಿ ಬೆರಳು
ಯಾರ್ಕಚ್ಕೊಂಡ್ಬಿಟ್ ಹೋಗ್ಬಿಟ್ರೊನ್ನೋದ್
ಗೊತ್ತೆ ಇಲ್ಲ ಪತ್ತೆ ಇಲ್ಲ
ಮೀನ್ಕಚ್ಕೊಂಡ್ಳೊ, ಮೊಸಳೆ ತಿಂದ್ಳೋ
ಹನುಮಂತನ್ ಹಿಡ್ದ್ ಸುರಸೆ ಉಂಡ್ಳೋ,
ಯಾರ್ಗೂನೂನೂ ಗೊತ್ತೇ ಇಲ್ಲ,
ಹೇಗದ್‌ಹೋಯ್ತೋ ದೇವ್ರೇ ಬಲ್ಲ.

ಬೆರಳೇ ಇಲ್ಲದ್ ಪಾಬ್ಲೀನ್ ಯಾರೋ
ದೋಣೀಲ್ ವಾಪಸ್ ಮನೇಗ್ ಕಳ್ಸಿ
ಪಾರ್ವತಮ್ಮ ಅಡಿಗೆ ಮಾಡ್ಸಿ
ಶಾವ್ಗೆ ಉಪ್ಪಿಟ್, ಖೀರನ್ ಬಡ್ಸಿ
ಹೇಳಿದ್ರಂತೆ, "ಪಾಬ್ಲಿ! ಮುತ್ತು!
ಲೋಕಕ್ಕೆಲ್ಲಾ ಗೊತ್ತೇ ಗೊತ್ತು
ಚಂದದ್ ಮೂಗಿಗ್ ಮೂಗ್ತಿ ಬೇಕೆ?
ಪಾಬ್ಲಿ ಕಾಲಿಗ್ ಕಾಲ್ಬೆರ್ಳ್ ಯಾಕೆ?"

*ಕಪಿನಯ್ಯ ಅಲ್ಲ

***

ಕ ಥೆ

ಹೆದ್ದಾರಿಯ ತಿರುವಿನಲ್ಲೊಂದು ಅಪಘಾತ. ಬಗೆಹರಿದ ಗೊಂದಲ.

ಗಣೇಶ್ ಕಡಬ
ಕ್ಯಾಲಿಫೋರ್ನಿಯ



# ಗೊಂದಲ

ಪ್ರಕಾಶ ಸ್ಯಾನ್ ಫ್ರ್ಯಾನ್ಸಿಸ್ಕೋದಲ್ಲಿ ಪ್ರಖ್ಯಾತ ವೈದ್ಯನಾಗಿದ್ದ. ಸುಮಾರು ಮೂವತ್ತು ವರ್ಷದ ಹಿಂದೆಯೇ ಬೆಂಗಳೂರಿನ ಪ್ರತಿಷ್ಠಿತ ಬಿ.ಎಂ.ಸಿ ಕಾಲೇಜಿನಲ್ಲಿ ವೈದ್ಯಶಿಕ್ಷಣ ಪಡೆದ ನಂತರ ಅಮೆರಿಕೆಗೆ ಉನ್ನತ ಅಭ್ಯಾಸಕ್ಕೆ ಬಂದು, ನಂತರ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದ. ಅವನ ಪತ್ನಿ ಸವಿತ ಇಂಜಿನಿಯರ್ ಆಗಿದ್ದಳು. ಅವರ ಇಬ್ಬರು ಹೆಣ್ಣು ಮಕ್ಕಳು ಸುಮಾ ಮತ್ತು ಗೀತಾ ಹೈಸ್ಕೂಲಿನಲ್ಲಿ ಓದುತ್ತಿದ್ದರು.

ಅಮೆರಿಕೆಗೆ ಬಂದಾಗ ಇಲ್ಲಿಯ ಶಿಸ್ತಿನ ಜೀವನ, ಲಂಚ ಗಿಂಚ ಇಲ್ಲದೆಯೇ ದೈನಂದಿನ ಜೀವನಕ್ಕೆ ಬೇಕಾದ ಎಲ್ಲಾ ಸೌಕರ್ಯಗಳು ಸಿಗುವಂತಿರುವುದು, ಶಿಫಾರಸ್ಸಿನ ಅಗತ್ಯವಿಲ್ಲದೆ ಸ್ವಂತ ಪ್ರತಿಭೆಯ ಬಂಡವಾಳವನ್ನಿಟ್ಟುಕೊಂಡೇ ವಿದ್ಯೆ ಮತ್ತು ವೃತ್ತಿಯಲ್ಲಿ ಮುಂದುವರಿಯುವ ಅವಕಾಶ, ಇವನ್ನೆಲ್ಲ ಮೆಚ್ಚಿದ್ದ. ಅವನು ಇಲ್ಲಿಯ ವಿಶ್ವವಿದ್ಯಾಲಯಕ್ಕೆ ಆದೇ ತಾನೆ ಭಾರತದಿಂದ ಬಂದಿದ್ದಾಗ ಒಂದು ಅಮೇರಿಕನ್ನರ ಮನೆಯವರು ಇವನಿಗೆ ಆತಿಥೇಯ ಸಂಸಾರವಾಗಿ ಇವನಿಗೆ ಬೇಕಾದ ಮಂಚ, ಹಾಸಿಗೆ, ಮೇಜು ಇತ್ಯಾದಿಯನ್ನೆಲ್ಲ ತಂದುಕೊಟ್ಟು ಸಹಾಯ ಮಾಡಿದ್ದರು, ಅಲ್ಲದೇ ಅವನಿಗೆ ಪ್ರತಿವಾರ ಮನೆಗೆ ಊಟಕ್ಕೆ ಕರೆಯುತ್ತಿದ್ದರು. ಆಗ ಅವನಿಗೆ ಹಳ್ಳಿಯ ಮನೆಯಲ್ಲಿ ವಾರಾನ್ನಕ್ಕೆ ಬರುತ್ತಿದ್ದ ಅನೇಕ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದ ತಾತನವರ ನೆನಪಾಗುತ್ತಿತ್ತು.

ಕ್ಯಾಲಿಫೋರ್ನಿಯನ್ನರು ಚೀನೀಯರು, ಭಾರತೀಯರು, ಮೆಕ್ಸಿಕನ್ನರು ಎಂದು ಬೇಧಭಾವ ಮಾಡದೆ ಎಲ್ಲರನ್ನೂ ಸರಿಸಮಾನವಾಗಿ ನೋಡುವುದನ್ನು ಕಂಡಾಗ, ಅವನಿಗೆ ಎಲ್ಲಾ ಭಾಷೆಯ ಮತ್ತು ಪ್ರಾಂತ್ಯಗಳ ಜನರನ್ನು ಸ್ವಾಗತಿಸುವ ಕನ್ನಡಿಗರ ಔದಾರ್ಯದ ಮನೋಭಾವದಂತೆ ಕಂಡಿತ್ತು.

ಆದರೆ ಅಮೆರಿಕದಲ್ಲೇ ಕೆಲವು ವರ್ಷ ವಾಸಿಸಿದ ಮೇಲೆ ಅಲ್ಲಿಯ ಜೀವನದ ಕೆಲವು ಕೆಟ್ಟ ಅಂಶಗಳು ಅವನ ಗಮನಕ್ಕೆ ಬಂದಿದ್ದವು. ಅಮೆರಿಕೆಯ ದಕ್ಷಿಣ ಪ್ರಾಂತ್ಯದ ಕೆಲವು ರಾಜ್ಯಗಳಲ್ಲಿದ್ದ ರೇಸಿಸಂ ಬಗ್ಗೆ ಅಸಹ್ಯವಾಗಿತ್ತು. ಅಮೆರಿಕನ್ನರು ತಮ್ಮ ವೈಯುಕ್ತಿಕ ಸುಖ ಮತ್ತು ಸ್ವಾರ್ಥಕ್ಕೋಸ್ಕರ ಕ್ಷುಲ್ಲಕ ಕಾರಣಗಳಿಗೂ ಮಾಡುವ ವಿವಾಹ ವಿಚ್ಛೇದನಗಳು, ಮತ್ತು ಅದರಿಂದ ಆ ಕುಟುಂಬಗಳ ಮಕ್ಕಳ ಮೇಲೆ ಆಗುತ್ತಿದ್ದ ಪ್ರಭಾವಗಳನ್ನೂ ನೋಡಿ ಬೇಸರಗೊಂಡಿದ್ದ.

ಅಮೆರಿಕೆಯಲ್ಲಿ ಶ್ರೀಮಂತರ ಮತ್ತು ಬಡವರ ಮಧ್ಯೆಯಿದ್ದ ಅಗಾಧ ಕಂದರವನ್ನು ನೋಡಿದ್ದ. ಒಮ್ಮೆ ಯಾವುದೋ ವೈದ್ಯಕೀಯ ಸಮ್ಮೇಳನಕ್ಕೆಂದು ಡೆಟ್ರಾಯಿಟ್‌ಗೆ ಹೋಗಿದ್ದಾಗ, ಅಲ್ಲಿಯ ಡೌನ್‌ಟೌನಿನಲ್ಲಿ ಬರೀ ಬಡ ಕಪ್ಪು ವರ್ಣೀಯರೇ ವಾಸಿಸುತ್ತಿದ್ದ ಜಾಗಗಳಿಗೆ ಹೋಗಿದ್ದ. ಅವರ ಶಿಥಿಲವಾದ ಮನೆಗಳಲ್ಲಿ ಡೆಟ್ರಾಯಿಟ್‌ನ ಮೈಮರಗಟ್ಟುವ ಚಳಿಗಾಲದಲ್ಲಿ ಇವರುಗಳು ಹೇಗೆ ಬದುಕುತ್ತಾರೆ ಎಂದು ಖಿನ್ನನಾದ. ಆಗ ಅವನಿಗೆ ತಾನು ನೋಡಿದ್ದ ಬೆಂಗಳೂರಿನ ಕೊಳಚೆ ಪ್ರದೇಶಗಳ ನೆನಪಾಯಿತು.

ಏಶಿಯಾದಲ್ಲಿ ಸುನಾಮಿ ದುರಂತ ನಡೆದಾಗ, ಅಮೆರಿಕನ್ನರು ಬಿಲಿಯನ್‌ಗಟ್ಟಲೆ ಡಾಲರುಗಳನ್ನು ದಾನವಾಗಿ ಕೊಟ್ಟಾಗ ಅವನು ಚಕಿತನಾದ. ಕಂಡರಿಯದ ಯಾವುದೋ ದೇಶದಲ್ಲಿರುವ ಜನರ ಕಷ್ಟ ನಿವಾರಣೆಗೆ ಅಮೆರಿಕನ್ನರ ಮನ ಕರಗಿದ್ದನ್ನು ಕಂಡು ಅವನಿಗೆ ಸಂತೋಷವಾಯಿತು. ಇಲ್ಲಿಯ ಶಾಲೆಗಳಲ್ಲಿ ಮತ್ತು ಮನೆಗಳಲ್ಲಿ ಚಿಕ್ಕ ವಯಸ್ಸಿನಿಂದಲೇ ಮಕ್ಕಳು ಸ್ವಯಂಸೇವೆ ಮತ್ತು ದಾನ ಮಾಡುವುದನ್ನು ಕಂಡು ಮೆಚ್ಚಿ, ತನ್ನ ಮಕ್ಕಳಿಗೂ ಆ ಸೇವಾ ಮನೋಭಾವವನ್ನು ಬೆಳೆಸಲು ಪ್ರಯತ್ನಿಸಿದ.

ಆದರೆ ಅದೇ ಸಮಯದಲ್ಲಿ ತಪ್ಪು ಕಾರಣಗಳಿಂದ ಅಮೆರಿಕ ಇರಾಕನ್ನು ಆಕ್ರಮಿಸಿ ಅಲ್ಲಿ ಸಾವಿರಾರು ಜನರು ಮಡಿದಾಗ ಇದೇ ಕರುಣಾಮಯಿ ಜನರು ರಕ್ತಪಿಪಾಸುಗಳಂತೆ ವರ್ತಿಸಿದಾಗ ಅವನು ಗೊಂದಲಗೊಂಡ. ಮಾನವೀಯತೆಯಲ್ಲಿ ತನ್ನ ನಾಡಿನ ಜನರು ಉತ್ತಮರೋ ಅಥವ ಅಮೆರಿಕನ್ನರು ಉತ್ತಮರೋ ಎಂದು ಅವನ ಮನಸ್ಸಿನಲ್ಲಿ ಆಗಾಗ್ಗೆ ದ್ವಂದ್ವಯುದ್ಧವಾಗುತ್ತಿತ್ತು. ಯಾವ ದೇಶದ ನಿವಾಸಿಯಾದರೆ ತನಗೆ ಹೆಚ್ಚು ಶಾಂತಿ ಸಿಗುತ್ತದೆಯೆಂದು ಅವನಿಗೆ ಗೊತ್ತಾಗುತ್ತಿರಲಿಲ್ಲ.

ಪ್ರಕಾಶನಿಗೆ ತನ್ನ ಹುಟ್ಟೂರು, ತನ್ನ ಜನರೆಂದರೆ ಅತೀವ ಪ್ರೀತಿ ಮತ್ತು ಹೆಮ್ಮೆ. ಅವನು ಹುಟ್ಟಿ ಬೆಳೆದದ್ದು ಕೋಲಾರದಾಚೆ ಇರುವ ಕುಂಬಾರಹಳ್ಳಿ ಎಂಬ ಚಿಕ್ಕ ಹಳ್ಳಿಯೊಂದರಲ್ಲಿ. ಎಲ್ಲದಕ್ಕಿಂತ ಅವನಿಗೆ ತನ್ನ ನಾಡಿನ ಹಳ್ಳಿಯ ಜನರ ಮುಗ್ಧತೆ ಮತ್ತು ಆಮಾಯಕತನದ ಬಗ್ಗೆ ಅತೀವ ಮಮತೆಯಿತ್ತು. ಅವನು ಪ್ರತಿ ನಾಲ್ಕೈದು ವರ್ಷಕ್ಕೊಮ್ಮೆ ಎರಡು ತಿಂಗಳ ರಜೆ ತೆಗೆದುಕೊಂಡು 'ಡಾಕ್ಟರ್ಸ್ ವಿತ್‌ಔಟ್ ಬಾರ್ಡರ್ಸ್' ಎಂಬ ಸಂಘಟನೆಯ ಮೂಲಕ ತನ್ನ ಹಳ್ಳಿಗೆ ಹೋಗಿ ಅಲ್ಲೊಂದು ಉಚಿತ ಮೆಡಿಕಲ್ ಶಿಬಿರವೊಂದನ್ನು ಏರ್ಪಡಿಸುತ್ತಿದ್ದ. ಅದಕ್ಕೆ ಅವನ ಹಳ್ಳಿಯಿಂದ ಮಾತ್ರವಲ್ಲದೇ, ಸುತ್ತಮುತ್ತಲ ಹತ್ತಾರು ಹಳ್ಳಿಗಳಿಂದಲೂ ಜನರು ಬರುತ್ತಿದ್ದರು ಮತ್ತು ಪ್ರಕಾಶನನ್ನು ಸಾಕ್ಷಾತ್ ದೇವರೆಂದೇ ಕೊಂಡಾಡುತ್ತಿದರು.

ಹೀಗೆ ಭಾರತಕ್ಕೆ ಹೋದಾಗಲೆಲ್ಲ ತನ್ನ ಹೆಂಡತಿ ಮಕ್ಕಳನ್ನೂ ಸ್ವಲ್ಪ ಒತ್ತಾಯದಿಂದಲೇ ಕರೆದುಕೊಂಡು ಹೋಗುತ್ತಿದ್ದ. ಅಮೇರಿಕೆಯಲ್ಲಿ ಹುಟ್ಟಿ ಬೆಳೆದ ಮಕ್ಕಳಿಗೆ ಭಾರತದ ಪಟ್ಟಣಗಳ ಜನಜಂಗುಳಿ ಮತ್ತು ಹಳ್ಳಿಗಳ ಕೆಸರು, ಗಲೀಜಗಳನ್ನು ಕಂಡರೆ ಇಷ್ಟವಾಗುತ್ತಿರಲಿಲ್ಲ. ಪ್ರಕಾಶ ಭಾವುಕ ಜೀವಿಯಾಗಿದ್ದರೆ ಸವಿತ ಭಾವೋದ್ವೇಗವಿಲ್ಲದೆ ತಣ್ಣನೆಯ ಮನಸ್ಸಿನಿಂದ ತರ್ಕಬದ್ಧವಾಗಿ ಯೋಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವ ವ್ಯಕ್ತಿತ್ವವುಳ್ಳವಳಾಗಿದ್ದಳು. ಆಕೆ ತಮ್ಮೆಲ್ಲಾ ರಜೆಯನ್ನೂ ಕುಂಬಾರಹಳ್ಳಿಗೆ ಹೋಗಲು ಉಪಯೋಗಿಸುವುದು ವ್ಯರ್ಥವೆಂದು ತಿಳಿದಿದ್ದಳು. ತನ್ನ ಗಂಡ ಮಕ್ಕಳೊಡನೆ ಯೂರೋಪು, ಆಫ್ರಿಕಾ ಮುಂತಾದ ಕಡೆಯೆಲ್ಲ ಸುತ್ತುವ ಅವಳ ಆಸೆಯು ಪೂರ್ಣಗೊಂಡಿರಲಿಲ್ಲ.

ಅಮೆರಿಕೆಗೆ ಬಂದು ಕೆಲವು ದಶಕಗಳಾಗಿದ್ದರೂ ಪ್ರಕಾಶ ಅಮೆರಿಕದ ಪೌರತ್ವವನ್ನು ತೆಗೆದುಕೊಂಡಿರಲಿಲ್ಲ. ಅವನಿಗೆ ಮುಂದೆ ಭಾರತಕ್ಕೆ ಶಾಶ್ವತವಾಗಿ ತೆರಳಿ ತನ್ನ ಹಳ್ಳಿಯಲ್ಲೇ ಆಧುನಿಕವಾದ ಉಚಿತ ಆಸ್ಪತ್ರೆಯನ್ನೊಂದು ಸ್ಥಾಪಿಸಬೇಕೆಂಬ ಮಹತ್ವಾಕಾಂಕ್ಷೆಯಿಟ್ಟುಕೊಂಡಿದ್ದ. ಇದಕ್ಕೆ ಸವಿತಳ ಆಕ್ಷೇಪಣೆಯಿತ್ತು. ಆಕೆಗೆ ತನ್ನ ಮಕ್ಕಳು ದೊಡ್ಡವರಾಗಿ ಎಲ್ಲಿ ವಾಸಿಸುತ್ತಾರೋ, ಅಲ್ಲೇ ಆ ದೇಶದಲ್ಲೇ, ಆ ಊರಿನಲ್ಲೇ ಇರುವ ಆಸೆ. ಈ ವಿಷಯದಲ್ಲಿ ಪ್ರಕಾಶ ಸವಿತಳ ಮಧ್ಯೆ ಆಗಾಗ ವಾಗ್ಯುದ್ಧ ಕೂಡ ನಡೆಯುತ್ತಿತ್ತು. ಅವರ ಸುಖೀ ಸಂಸಾರದಲ್ಲಿ ಹೀಗೆ ಒಂದು ಅಪಸ್ವರ ತಲೆಯೆತ್ತಿತ್ತು.

ಈ ವರ್ಷ ಕೂಡ ಪ್ರಕಾಶ ಭಾರತಕ್ಕೆ ಬಂದು ಸಂಬಂಧಿಕರ ಮದುವೆಯೊಂದಕ್ಕೆ ತನ್ನ ಕುಟುಂಬದೊಡನೆ ಬೆಂಗಳೂರಿಗೆ ಹೋಗಿದ್ದ. ಬೆಂಗಳೂರಿನಿಂದ ಒಂದು ಟ್ಯಾಕ್ಸಿಯನ್ನು ಮಾಡಿಕೊಂಡು ಹಳ್ಳಿಯೆಡೆಗೆ ಬರುತ್ತಿದ್ದ. ಸಮಯ ಮಧ್ಯರಾತ್ರಿಯ ಎರಡು ಘಂಟೆಯಾಗಿತ್ತು. ಆ ಟ್ಯಾಕ್ಸಿಯ ಚಾಲಕ ಒಬ್ಬ ಚಿಕ್ಕ ವಯಸ್ಸಿನ ಹೆಚ್ಚು ಅನುಭವವಿರದ ಯುವಕನಾಗಿದ್ದ. ಹಳೆಯದಾಗಿದ್ದ ಆ ಅಂಬಾಸಿಡರ್ ಕಾರಿನ ಟಯರ್ರುಗಳು ಸವೆದು ನುಣುಪಾಗಿದ್ದವು. ಆ ಹೊತ್ತಿನಲ್ಲಿ ಹೆದ್ದಾರಿಯಲ್ಲಿ ಬೇರೆ ವಾಹನಗಳೂ ಇರಲಿಲ್ಲ. ಪ್ರಕಾಶ ನಿಧಾನವಾಗಿ ಓಡಿಸೆಂದರೂ ಅವನು ವೇಗದಿಂದ ಕಾರನ್ನು ಓಡಿಸುತಿದ್ದ. ಕುಂಬಾರಹಳ್ಳಿಗೆ ಸುಮಾರು ಇಪ್ಪತ್ತು ಕಿಲೋಮೀಟರುಗಳಿರಬೇಕಾದರೆ ಹೆದ್ದಾರಿಯಲ್ಲೊಂದು ತಿರುವಿತ್ತು. ಆ ಪ್ರದೇಶದಲ್ಲಿ ಹೆದ್ದಾರಿಯ ಎರಡೂ ಬದಿಯಲ್ಲಿ ಹೆಚ್ಚು ನೇರಳೆ ಹಣ್ಣಿನ ಮರಗಳಿದ್ದವು. ತುಂಬ ನೇರಳೆ ಹಣ್ಣುಗಳು ಉದುರಿದ್ದರಿಂದ ರಸ್ತೆಯ ತಿರುವು ಜಾರುವಂತಿತ್ತು. ಆತ ವೇಗದಿಂದಲೆ ತಿರುವನ್ನು ಕ್ರಮಿಸಿದಾಗ ಕಾರು ಹತೋಟಿ ತಪ್ಪಿ ರಸ್ತೆಯಿಂದ ಜಾರಿ ನೇರವಾಗಿ ಹೆಮ್ಮರವೊಂದಕ್ಕೆ ಕರ್ಕಶವಾಗಿ ಗುದ್ದಿ ಜಜ್ಜಿಯಾಯಿತು. ಎಷ್ಟು ರಭಸವಾಗಿ ಗುದ್ದಿತೆಂದರೆ ಸುತ್ತ ಮುತ್ತಲೂ ಅನೇಕ ಕಿಲೋಮೀಟರಿನವರೆಗೂ ಕೇಳುವಂತೆ 'ದಿಢೀಲ್' ಎಂದು ಶಬ್ದವಾಯಿತು.

ಕಾರಿನ ಮುಂದುಗಡೆ ಕೂತಿದ್ದ ಪ್ರಕಾಶನಿಗೆ ಪ್ರಜ್ಞೆ ತಪ್ಪಿತು. ಕೆಲ ಕ್ಷಣಗಳ ನಂತರ ಜ್ಞಾನ ಬಂದಾಗ ಅವನ ಬಲ ಕೈಯಲ್ಲಿ ಅತೀವ ಯಾತನೆಯಿತ್ತು ಮತ್ತು ಹಣೆಯಿಂದ ರಕ್ತ ಧಾರೆ ಸುರಿಯುತ್ತಿತ್ತು. ದೂರದಿಂದ "ದೊಡ್ಡ ಆಕ್ಸಿಡೆಂಟು ಕಣ್ರೋ.." ಎಂದು ಕೂಗುತ್ತ ಜನಗಳ ಗುಂಪು ಓಡಿ ಬರುವ ಸದ್ದು ಅಸ್ಪಷ್ಟವಾಗಿ ಕೇಳಿಸಿತು. ಪಕ್ಕಕ್ಕೆ ತಿರುಗಿ ನೋಡಿದರೆ ಚಾಲಕನು ಕಾಣಿಸಲಿಲ್ಲ. ಜಾಸ್ತಿಯೇನೂ ಪೆಟ್ಟಾಗದ ಅವನು ಯಾವ ಕಾರಣಕ್ಕೋ ಓಡಿ ಹೋಗಿದ್ದ. ಅರ್ಧ ಪ್ರಜ್ಞೆಯಲ್ಲಿದ್ದ ಅವನಿಗೆ ತನ್ನ ಹೆಂಡತಿ ಮಕ್ಕಳು ಹೇಗಿದ್ದಾರೆ ಎಂಬುದೊಂದೇ ಮುಖ್ಯವಾಗಿತ್ತು. ಅವನಿಗೆ ಹಿಂದಿನಿಂದ ಯಾರೊ ಮುಲುಗಿದ ಸದ್ದು ಕೇಳಿಸಿತು. ಪ್ರಕಾಶ ಕಷ್ಟ ಪಟ್ಟು ಕತ್ತು ತಿರುಗಿಸಿ ಹಿಂದೆ ನೋಡಿದ.

ಅಲ್ಲಿ ಕಂಡ ತನ್ನ ಕುಟುಂಬದ ವಿಷಮ ಪರಿಸ್ಥಿತಿ ಕಂಡು ಅವನಿಗೆ ಪೂರ್ಣ ಪ್ರಜ್ಞೆ ಬಂತು. ಸವಿತಳ ಭುಜದ ಮೂಳೆಯು ಮುರಿದು ಕುತ್ತಿಗೆಯ ಬಳಿ ಹೊರಗಡೆ ಬಂದಿತ್ತು. ಗೀತೆಯ ಕಾಲು ಮುರಿದು ನೋವನ್ನು ತಡೆದುಕೊಳ್ಳಲಾರದೆ ಅಳುತ್ತಿದ್ದಳು. ಸುಮಾಳಿಗೆ ಅದೃಷ್ಟವಶಾತ್ ಹೆಚ್ಚೇನು ಪೆಟ್ಟಾಗದಿದ್ದರೂ, ಅಪಘಾತದ ಶಾಕಿನಿಂದ ಮೂರ್ಛೆ ಹೋಗಿದ್ದು ನಿಧಾನವಾಗಿ ಪ್ರಜ್ಞೆ ಬರುತ್ತಿದಳು. ಅಸಾಧ್ಯ ನೋವಿನಲ್ಲಿದ್ದ ಸವಿತ "ರೀ, ಈಗೇನು ಮಾಡೋದು?" ಎಂದಳು. ಪ್ರಕಾಶ "ಏನೂ ಯೋಚಿಸಬೇಡ ಸವಿ. ನಾವೆಲ್ಲ ಜೀವಂತವಾಗಿದ್ದೀವಲ್ಲ ಅಷ್ಟೇ ಸಾಕು. ನನ್ನ ಹತ್ತಿರ ಮೊಬೈಲು ಫ಼ೋನಿದೆ. ನಾನು ಬೆಂಗಳೂರಿನಿಂದ ಆಸ್ಪತ್ರೆಗೆ ಫ಼ೋನು ಮಾಡಿ ಆಂಬ್ಯುಲೆನ್ಸ್ ತರಿಸುತ್ತೇನೆ. ನನಗೆ ದೂರದಲ್ಲಿ ಹಳ್ಳಿಗರು ಬರುವಂತೆ ಕೇಳಿಸುತ್ತಿದೆ. ಅವರು ನಮಗೆ ಖಂಡಿತ ಸಹಾಯ ಮಾಡುತ್ತಾರೆ" ಎಂದು ಭರವಸೆ ನೀಡಿದ.

ಆದರೆ ನಂತರದ ಕೆಲ ನಿಮಿಷಗಳಲ್ಲಿ ನಡೆದದ್ದು ಪ್ರಕಾಶನ ಜೀವನವನ್ನೇ ಬದಲಾಯಿಸಿತು. ಧಡ ಧಡ ಲಾಟೀನು, ಟಾರ್ಚುಗಳನ್ನು ಹಿಡಿದು ಓಡಿ ಬಂದ ಹಳ್ಳಿಯವರು ಕಾರನ್ನು ಸುತ್ತುವರೆದರು. ಜಜ್ಜಿಯಾಗಿದ್ದ ಕಾರಿನ ಕಿಟಕಿಗಳು ಮತ್ತು ಬಾಗಿಲುಗಳನ್ನು ಕಿತ್ತು ಒಗೆದರು. ಪ್ರಕಾಶ ಇದೇನಾಗುತ್ತಿದೆ ಎಂದು ದಿಗ್ಭ್ರಮೆಯಿಂದ ನೋಡುತ್ತಿದ್ದಂತೆಯೇ ಒಬ್ಬ ಪ್ರಕಾಶನ ಕೈಯಿಂದ ವಾಚನ್ನು ಕಿತ್ತುಕೊಂಡ. ಇನ್ನೊಬ್ಬ ಕಾರಿನೊಳಗೆ ತನ್ನ ಅರ್ಧ ಮೈಯನ್ನು ತೂರಿ ರಕ್ತಸಿಕ್ತಳಾಗಿದ್ದ ಸವಿತಳ ಕೊರಳಿನಿಂದ ಮುತ್ತಿನ ನೆಕ್ಲೇಸನ್ನೂ, ಕೈಗಳಲ್ಲಿದ್ದ ಚಿನ್ನದ ಬಳೆಗಳನ್ನೂ ರೋಷದಿಂದ ಚೀರಾಡುತ್ತಿದ್ದ ಸವಿತಳಿಂದ ಕಿತ್ತುಕೊಂಡ. ಬೇರೆ ಕಡೆಯಿಂದ ಮತ್ತಿಬ್ಬರು ಕೈಗಳನ್ನು ಚಾಚಿ ಇಬ್ಬರು ಮಕ್ಕಳ ಮೈಮೇಲಿದ್ದ ಒಡವೆಗಳನ್ನು ಕಿತ್ತರು. ಸುಮಳ ಓಲೆಗಳನ್ನು ಕಿತ್ತ ರಭಸಕ್ಕೆ ಅವಳ ಕಿವಿ ಹರಿದು ಬಂತು. ಭಯದಿಂದ "ಮಮ್ಮೀ, ಡ್ಯಾಡೀ.." ಎಂದು ಮಕ್ಕಳು ರೋದಿಸುತ್ತಿದ್ದರು. ತನ್ನ ಕುಟುಂಬದ ರಕ್ಷಣೆಗೆ ಬರಲು ಪ್ರಕಾಶ ಪ್ರಯತ್ನಿಸುತ್ತಿದ್ದ.

ಆಗ ಇನ್ನೊಬ್ಬನು ಪ್ರಕಾಶನ ಪ್ಯಾಂಟು ಶರ್ಟಿನ ಜೇಬಲ್ಲೆಲ್ಲಾ ಕೈ ಹಾಕಿ ಹುಡುಕಿ ಪರ್ಸನ್ನು ಮತ್ತು ಮೊಬೈಲನ್ನು ತೆಗೆದುಕೊಂಡ. ಪ್ರಕಾಶ "ಏನಾದ್ರೂ ತೊಗೊಳ್ರೊ ಆದರೆ ನನ್ನ ಮೊಬೈಲನ್ನು

ತೊಗೋಬೇಡಿ" ಎಂದು ಬೇಡಿದರೂ ಅವರು ಬಿಡಲಿಲ್ಲ. ಕಾರಿನಲ್ಲಿದ್ದ ಬ್ಯಾಗು ಸೂಟುಕೇಸುಗಳನ್ನೂ ಹಾರಿಸಿಕೊಂಡು ಬಂದ ವೇಗದಲ್ಲಿಯೇ ಎಲ್ಲರೂ ಮಾಯವಾದರು. ಇದೆಲ್ಲವೂ ಒಂದೆರಡು ನಿಮಿಷದೊಳಗೆ ಮಾತ್ರವೇ ಆಗಿ ಹೋಯಿತು. ಮತ್ತೆ ಸುತ್ತಲೂ ನಿಶ್ಶಬ್ದದ ಆವರಣ. ಸುತ್ತಲೂ ಕತ್ತಲು. ನೋವಿನಿಂದ ಮುಲುಗಾಡುವ, ಅಳುವ ಸದ್ದು ಮಾತ್ರ. ಪ್ರಕಾಶ ಕಷ್ಟಪಟ್ಟು ಕಾರಿನಿಂದ ಹೊರಗೆ ಬಂದು ಸವಿತಳಿಗೆ ಹೇಳಿದ "ಸವಿ, ನೀನು ಮಕ್ಕಳು ಇಲ್ಲೇ ಇರಿ, ನಾನು ರಸ್ತೆಗೆ ಹೋಗಿ, ಯಾವುದಾದರು ವಾಹನವನ್ನು ನಿಲ್ಲಿಸಿ ಸಹಾಯ ತರುತ್ತೇನೆ" ಎಂದು ಹೋದ.

ಹತ್ತಿಪ್ಪತ್ತು ನಿಮಿಷಕ್ಕೊಮ್ಮೆ ಯಾವುದೋ ಕಾರೋ, ಲಾರಿಯೋ ಹೋಗುತ್ತಿತ್ತು. ಇವನು ಕೈಯನ್ನು ಚಾಚಿ ಸಹಾಯಕ್ಕೆ ಬೇಡುತ್ತಿದ್ದರೂ ಎಲ್ಲರೂ "ಇದ್ಯಾವುದೋ ಆಕ್ಸಿಡೆಂಟಿನ ಕೇಸು. ಪೋಲೀಸರ ಹತ್ರ ಎಲ್ಲ ಯಾಕೆ ತಲೆನೋವು" ಎಂದು ನಿಲ್ಲಿಸದೇ ಹೋಗಿ ಬಿಡುತ್ತಿದ್ದರು. ಕಡೆಗೆ ಯಾವನೋ ಒಬ್ಬ ಪಂಜಾಬಿ ಟ್ರಕ್ಕಿನ ಸರ್ದಾರ್ಜಿಯೊಬ್ಬನು ನಿಲ್ಲಿಸಿ ಎಲ್ಲರನ್ನೂ ಲಾರಿಯಲ್ಲಿ ತುಂಬಿಸಿ ಪ್ರಕಾಶನಿಗೆ ಗುರುತಿದ್ದ ಬೆಂಗಳೂರಿನ ದೇಸಾಯಿ ನರ್ಸಿಂಗ್ ಹೋಮಿಗೆ ಕರೆತಂದು ಬಿಟ್ಟ.

ಎಲ್ಲರೂ ಚೇತರಿಸಿಕೊಳ್ಳಲು ಒಂದು ವಾರವಾಯಿತು. ಸವಿತಳು "ಒಡವೆ ದುಡ್ಡು ಹಾಳಾದ್ದು ಹೋಗಿದ್ದು ಹೋಗಲಿ. ಆ ಗುಂಪು ನಮ್ಮ ಮಾನ, ಪ್ರಾಣ ಹಾನಿ ಮಾಡದೇ ಬಿಟ್ಟಿದ್ದೇ ಹೆಚ್ಚು" ಎಂದು ದೇವರಿಗೆ ಕೃತಜ್ಞಳಾಗಿದ್ದಳು. ಮಕ್ಕಳು "ನಾವಿಲ್ಲಿರೋದಿಲ್ಲ, ವಾಪಸ್ಸು ಕ್ಯಾಲಿಫೋರ್ನಿಯಾಗೆ ಈ ಕ್ಷಣವೇ ಹೋಗೋಣ" ಎಂದು ಹಠ ಹಿಡಿದರು. ಎಲ್ಲರೂ ವಾಪಸ್ಸು ಅಮೇರಿಕೆಗೆ ಬಂದರು. ತನ್ನ ಜನರ ವರ್ತನೆಯನ್ನು ಕಂಡ ಪ್ರಕಾಶನಿಗೆ ಮನೋಘಾತವಾಗಿತ್ತು. ತಾನು ಯಾರನ್ನು ಮುಗ್ಧರೂ, ಅಮಾಯಕರೂ ಎಂದುಕೊಂಡಿದ್ದನೋ ಅವರು ಏಕೆ ಹೀಗೆ ಅಮಾನುಷವಾಗಿ ವರ್ತಿಸಿದರು? ಪ್ರಕಾಶನ ಜೀವನದಲ್ಲಿ ನಂಬಿದ್ದ ಅನೇಕ ಮೂಲಭೂತ ನಂಬಿಕೆಗಳೇ ತಲೆಕೆಳಗಾಗಿದ್ದವು. ಕಾರಿಗೆ ಮುತ್ತು ಹಾಕಿದ್ದ ಹಳ್ಳಿಗರಲ್ಲಿ ಒಂದಿಬ್ಬರನ್ನು ತನ್ನ ಉಚಿತ ವೈದ್ಯಕೀಯ ಶಿಬಿರಗಳಲ್ಲಿ ಚಿಕಿತ್ಸೆಗೆ ಬಂದದ್ದು ನೋಡಿದಂತೆ ಅವನಿಗೆ ಅನ್ನಿಸಿತ್ತು. ತಾನು ತೀವ್ರವಾಗಿ ಪ್ರೀತಿಸಿದ್ದ ತನ್ನ ಹಳ್ಳಿ ಕಡೆಯ ಜನರಲ್ಲಿದ್ದ ಮುಗ್ಧತೆಯ ಸಾವನ್ನು ಕಣ್ಣಾರೆ ಕಂಡಿದ್ದ ಅವನ ಮನ ಮೂಕವಾಗಿ ಯಾರಿಗೂ ಕಾಣದಂತೆ ಅತ್ತಿತ್ತು.

ಅವನು ಅಮೆರಿಕೆಗೆ ಬಂದ ತಕ್ಷಣ ಮಾಡಿದ ಮೊದಲ ಕೆಲಸವೆಂದರೆ ತನ್ನ ಭಾರತೀಯ ಪೌರತ್ವವನ್ನು ತೊರೆದು ಅಮೆರಿಕೆಯ ಪೌರತ್ವವನ್ನು ಪಡೆದ. ಇಷ್ಟು ದಿವಸ ಅವನ ಮನದಲ್ಲಿದ್ದ ಗೊಂದಲವೆಲ್ಲಾ ತಿಳಿಯಾಗಿತ್ತು. ತನ್ನ ಸಂಸಾರದೊಂದಿಗೆ ನೆಮ್ಮದಿಯಿಂದ ಅಮೆರಿಕೆಯಲ್ಲೇ ಬಾಳಿದ.
***



ರಾಮಪ್ರಸಾದ್ ಕೆ. ವಿ.
ಕ್ಯಾಲಿಫೋರ್ನಿಯ



## ಇಹನೋ? ಇಲ್ಲವೋ?

ಇರಲಿಲ್ಲ ಇದ್ದದ್ದು, ಇಲ್ಲ ಇಲ್ಲದ್ದು
ಇರಲಿಲ್ಲ ಗಾಳಿ ಬಲು ದೂರದಾಗಸ
ಸುತ್ತಿತ್ತು ಏನನ್ನು? ಯಾರದನು ಕಾಯ್ದವರು?
ಇತ್ತೇನು ಅಲ್ಲಿ ಆಳದ ಕರಿನೀರು?

ಇರಲಿಲ್ಲ ಸಾವು, ಇರಲಿಲ್ಲ ಬದುಕು
ಇರಲಿಲ್ಲ ಹಗಲು ಇರಲಿಲ್ಲ ಇರುಳು
ಉಸಿರಿಲ್ಲದೇ ಉಸಿರೆಳೆವ ಭಾವ
ಅದನೊಂದ ಬಿಟ್ಟು ಇರಲಿಲ್ಲ ಏನೂ

ಕರಿ ಕತ್ತಲ ಕಟ್ಟಿಟ್ಟ ಹಿರಿಗತ್ತಲು
ಎಲ್ಲವನಾವರಿಸಿದ ಅರಿಯದಾ ನೀರು
ಶೂನ್ಯವೇ ಮುಚ್ಚಿ ತೆರೆದಿಟ್ಟ ಮನಸು
ಅದನು ಹೊರತರುವ ಆ ಮಹಾತಪಸು

ಹುಟ್ಟಿತ್ತು ಅದು, ಹರಡಿತ್ತು ಎಲ್ಲೆಲ್ಲು
ಮನದ ಮೂಲೆಯಲಿ ಮೊಳೆತಂಥ ಪ್ರೀತಿ
ಎದೆಯ ಬಯಲೊಳಗೆ ಆಡಗಿದ್ದ ರೀತಿ
ಅರಿತರೇ ಇಲ್ಲದಕು ಇದ್ದುದಕು ನಂಟು?

ಇಲ್ಲದಕು ಇದ್ದುದಕು ನಡುವೊಂದು ಸೂತ್ರ
ಅದರ ಮೇಲೇನಿತ್ತು ಇತ್ತದರ ಕೆಳಗೇನು?
ಆ ಬೀಜದ ಭರದ ಮಹಿಮೆಯ ತರವೇನು?
ಏನದರ ಶಕ್ತಿ? ಏನದರ ಹುಮ್ಮಸ್ಸು?

ಯಾರದನು ಅರಿತವರು? ಯಾರದನು ಹೇಳುವರು?
ಜನಿಸಿದ್ದು ಎಂದು? ಸೃಷ್ಟಿಕರ್ತನು ಯಾರು?
ಕಾವ ದೇವರು ಕೂಡ ಬಳಿಕ ಜನಿಸಿರಲು
ನಡೆದುದೇನೆಂಬುದನು ಪೇಳುವವರಾರು?

ಜಗವನ್ನು ಇದನು ಹುಟ್ಟಿಸಿದರಾರು ?
ಹುಟ್ಟಿಸಿದನೊ? ಇಲ್ಲವೋ? ತಿಳಿದವರಾರು?
ನೀಲಗಗನದಿ ಮೇಲೆ ನಿಂತು ನೋಡುವನವನು
ಹೇಳಬಲ್ಲನೆ ಇದನು? ಅರಿತಿಹನೆ ಅವನು?

ಮೂಲ: ಋಗ್ವೇದದ ಹತ್ತನೇ ಮಂಡಲದಲ್ಲಿರುವ ನಾಸದೀಯ ಸೂಕ್ತ
(Hymn of Creation)
***

ವಿಶಾಲ ರಂಗಸ್ವಾಮಿ
ಕ್ಯಾಲಿಫೋರ್ನಿಯ

## ಮಲ್ಲಿಗೆ

ಅಚ್ಚಮಲ್ಲಿಗೆ ಹೂವೇ
ಹಚ್ಚಹಸಿರೆಲೆ ನಡುವೆ
ಬೆಚ್ಚಗೆ ಕುಳಿತು ಬಿರಿದರಳುತಿಹ
ನಿನ್ನ ಕಂಡು
ಮನ ಹುಚ್ಚೆದ್ದಿಹುದಲ್ಲ!

ವಸಂತ ಚೈತ್ರನೊಡನೆ ನೀ ಬರುವೆ
ಮನಕೆ ಹರ್ಷ ತರುವೆ
ಕೋಗಿಲೆಯ ಕರೆವೆ
ಕಂಪನೆಲ್ಲೆಡೆ ಸುರಿವೆ

ಮಲ್ಲಿಗೆ, ನೀನೆಲ್ಲಿರೆ
ನಿನ್ನ ಅಂದ ನೋಡಲು ಚಂದ?
ಪ್ರಕೃತಿಯ ಮಡಿಲಲ್ಲೋ ?
ಮುಗುದೆಯ ಮುಡಿಯಲ್ಲೋ ?
ಭಗವಂತನ ಪಾದಾರವಿಂದದಲ್ಲೋ ?

ಓ ಮಲ್ಲಿಗೆ, ನಿನ್ನ ಸೊಬಗ ನೀ ಬಲ್ಲೆಯಾ ?
ಮುಗುದೆ, ನೀನೊಂದೂ ಅರಿಯೆ!
ದೃಷ್ಟಿ ತಾಗೀತು ನಿನಗೆ!
ಸಿರಿದೇವಿ ಸಂಪದವು ನೀನೆನಿಸಿದೆ
ಸೃಷ್ಟಿಸಿದ ಪರಮಾತ್ಮಗೆ
ಅತಿ ಶ್ರೇಷ್ಠ ಹೂವಾದೆ
ನಿನ್ನ ಮುಡಿದು ನಾ ಧನ್ಯಳಾದೆ!
***

ಜಾರ್ಜ್ ಬರ್ನಾರ್ಡ್ ಶಾ ಮತ್ತು ಪ್ರಧಾನಿ ಚರ್ಚಿಲ್ಲರ ನಡುವೆ ಅಂತಹ ಸ್ನೇಹಸಂಬಂಧವೇನೂ ಇರಲಿಲ್ಲವಂತೆ. ತಮ್ಮ ಪಿಗ್ಮೇಲಿಯನ್ ನಾಟಕದ ಚೊಚ್ಚಲ ಪ್ರದರ್ಶನಕ್ಕೆ ಬರಲು ಶಾ ಅವರು ಚರ್ಚಿಲ್ಲರಿಗೆ ಎರಡು ಟಿಕೆಟ್ಟುಗಳನ್ನು ಕಳಿಸುತ್ತಾ ಜೊತೆಗೆ, “ I have included two tickets so that you may bring a friend, if you have any.” ಎಂದು ಬರೆದಿದ್ದರಂತೆ. ಅದಕ್ಕೆ ಚರ್ಚಿಲ್ಲರ ಉತ್ತರ: “I regret to say that I am unable to attend that night; I would like tickets to the second performance, if there is one.”
***

ಕ

ಥೆ

ರೋಗಿಯ ವಿವರಗಳನ್ನು ಓದುತ್ತಿದ್ದಂತೆ ಮಾಲಿನಿ ಅವಾಕ್ಕಾದಳು. . .

ಮಂಜುಳ ವಿಶ್ವನಾಥ್
ಕ್ಯಾಲಿಫೋರ್ನಿಯ



# ಮರಳಿದ ವಸಂತ

ಬೆಳಗ್ಗೆ ಆರು ಗಂಟೆಗೆ ಎದ್ದು ಕೆಲಸಕ್ಕೆ ಹೊರಡುವ ಮುನ್ನ ಎಂದಿನಂತೆ ಡಾ. ಮಾಲಿನಿ ಪೇಪರಿನ ಮೇಲೆ ಕಣ್ಣಾಡಿಸುತ್ತಿದ್ದಳು. ಒಮ್ಮೆಲೆ ಒಬಿಚುಯರಿ ಕಾಲಮ್‌ನಲ್ಲಿ ಚಿರಪರಿಚಿತ ಫೋಟೋ ಮತ್ತು ಹೆಸರನ್ನು ಕಂಡು ಅವಾಕ್ಕಾದಳು. "ಶ್ರೀಮತಿ ಕಮಲಮ್ಮನವರ ಹಠಾತ್ ನಿಧನ, ದುಃಖತಪ್ತ ಮಗ ವಿಕ್ರಮ್."

ಇದೇನಿದು? ತನ್ನ ಸ್ವಂತ ಅತ್ತೆಯ ಸಾವನ್ನು ಪೇಪರಿನಲ್ಲಿ ನೋಡಿ ತಿಳಿಯಬೇಕಾಯಿತೇ ಎನ್ನಿಸಿ, ಏನೇ ಆದರೂ ಈ ಸಮಯದಲ್ಲಿ ಹೋಗಿಯೇ ತೀರಬೇಕೆಂದು ತೀರ್ಮಾನಿಸಿದಳು ಡಾ. ಮಾಲಿನಿ. ತಕ್ಷಣವೇ ಆಸ್ಪತ್ರೆಗೆ ರಜೆ ಬರೆದು ಬೆಂಗಳೂರಿಗೆ ಬಸ್ ಹತ್ತಿದಳು. ಬಸ್ಸು ಸಾಗಿದಂತೆ ಮಾಲಿನಿಗೆ ತನ್ನ ಗತಜೀವನದ ನೆನಪಾಯಿತು..

*****

ಸುಮಾರು ೨೬–೨೭ ವರ್ಷಗಳ ಹಿಂದೆ ತಾನು ಹುಬ್ಬಳ್ಳಿಯಲ್ಲಿ ಮೆಡಿಕಲ್ ಕಾಲೇಜ್‌ನಲ್ಲಿ ಓದುತ್ತಿದ್ದ ಸಮಯವದು. ತುಂಬಾ ಬುದ್ಧಿವಂತ ವಿದ್ಯಾರ್ಥಿನಿಯಾದುದರಿಂದ ಸ್ಕಾಲರ್ಶಿಪ್ ಹಣ ಬರುತ್ತಿತ್ತು. ಆ ಚೆಕ್ಕನ್ನು ಮತ್ತು ತನ್ನ ತಂದೆ ತನಗೆ ಕಳಿಸುತ್ತಿದ್ದ ಡ್ರಾಫ್ಟನ್ನು ಕ್ಯಾಷ್ ಮಾಡಿಸಲು ಒಂದು ರಾಷ್ಟ್ರೀಕೃತ ಬ್ಯಾಂಕಿನ ಶಾಖೆಯೊಂದಕ್ಕೆ ಹೋಗುತ್ತಿದ್ದಳು. ಅಲ್ಲಿ ಅಧಿಕಾರಿಯಾಗಿ ಕೆಲಸಮಾಡುತ್ತಿದ್ದ ವಿಕ್ರಮನ ಪರಿಚಯವಾಯಿತು. ನಗೆಮೊಗದ ಮೃದುಸ್ವಭಾವದ ಸ್ಫುರದ್ರೂಪಿ ಯುವಕ ವಿಕ್ರಮನ ಪರಿಚಯ ದಿನೇ ದಿನೇ ಹೆಚ್ಚಿ ಪ್ರೀತಿಯಾಗಿ ಮಾರ್ಪಾಡಾಯಿತು. ಇಬ್ಬರೂ ಒಂದೇ ಜನವಾದ್ದರಿಂದ ಹೆಚ್ಚು ತಕರಾರುಗಳಿಲ್ಲದೇ ಎರಡೂ ಕಡೆಯ ಹಿರಿಯರ ಒಪ್ಪಿಗೆಯೊಂದಿಗೆ ಇಬ್ಬರ ಮದುವೆ ನಡೆದುಹೋಯಿತು.

ನಂತರದ ದಿನಗಳಲ್ಲಿ ಇಬ್ಬರಿಗೂ ಕೆಲಸದ ತರಾತುರಿ. ಮನೆಯಲ್ಲಿ ಎಲ್ಲವನ್ನೂ ಸಮರ್ಪಕವಾಗಿ ನಿರ್ವಹಿಸಲು ಕಮಲಮ್ಮನವರು ಇದ್ದುದರಿಂದ ದಿನಗಳು ಚೆನ್ನಾಗೇ ಕಳೆದವು. ಅತ್ತೆಯ ಆರೈಕೆಯಲ್ಲಿ ಮಾಲಿನಿಯ ಜೀವನ ಸಂತೋಷದಿಂದ ಸಾಗಿತ್ತು.

ಎರಡು ವರ್ಷಗಳ ನಂತರ ಮಾಲಿನಿ ಹೆಣ್ಣು ಮಗುವಿನ ತಾಯಿಯಾದಾಗ ಮನೆಯಲ್ಲಿ ಹರ್ಷದ ಹೊನಲು ಉಕ್ಕಿತ್ತು. ಮಗು ಪೂರ್ವಿ ತಂದೆ ತಾಯಿಯ ಮುದ್ದಿನ ಕುವರಿಯಾಗಿ, ಅಜ್ಜಿಯ ಕಣ್ಮಣಿಯಾಗಿ ಸೊಂಪಾಗಿ ಬೆಳೆಯತೊಡಗಿದಳು.

ಹೀಗೆ ಕಾಲಕಳೆದು ಪೂರ್ವಿ ಐದು ವರ್ಷದವಳಾದಾಗ ಅವಳ ಶಾಲೆ, ಪಾಠ ಇತರ ಕೆಲಸಗಳನ್ನು ನೋಡಿಕೊಳ್ಳುವುದು ಮಾಲಿನಿ ಮತ್ತು ವಿಕ್ರಮರಿಗೆ ಸ್ವಲ್ಪ ಕಷ್ಟವೆನಿಸಿತು. ಈ ವೇಳೆಗೆ ಕಮಲಮ್ಮನವರಿಗೂ ಸ್ವಲ್ಪ ವಯಸ್ಸಾಗಿ ಮೊದಲಿನ ಶಕ್ತಿ ಸ್ವಲ್ಪ ಕುಂದಿತ್ತು. ಈ ಸಮಯದಲ್ಲಿ ಡಾ. ಮಾಲಿನಿ ತನ್ನ ಮಗುವನ್ನು ನೋಡಿಕೊಳ್ಳಲು ಎಲ್ಲ ವಿಧದಲ್ಲೂ ಸೂಕ್ತವಾದ ಒಬ್ಬ ಹೆಂಗಸನ್ನು ನೇಮಿಸಿಕೊಳ್ಳಲು ಯೋಚಿಸಿದಳು. ಆಕೆ ಮನೆಯಲ್ಲೇ ಇದ್ದು, ಕಮಲಮ್ಮನವರು ಮೇಲುಸ್ತುವಾರಿ ನೋಡಿಕೊಳ್ಳುವುದೆಂದು ತೀರ್ಮಾನವಾಯಿತು. ಆದರೆ ಸ್ವಭಾವತಃ ಮಡಿವಂತರಾದ ಕಮಲಮ್ಮ, ಈ ಏರ್ಪಾಡಿಗೆ ಸಮ್ಮತಿಸಲಿಲ್ಲ. ತಾಯಿಯ ಮಡಿವಂತಿಕೆಯನ್ನೇ ರೂಢಿಸಿಕೊಂಡ ವಿಕ್ರಮ್ ಕೂಡಾ ತಾಯಿಯ ತಾಳಕ್ಕೆ ಕುಣಿದನೇ ಹೊರತು ಮಾಲಿನಿಯ ಆತಂಕವನ್ನೂ, ಉದ್ದೇಶವನ್ನೂ ಅರ್ಥಮಾಡಿಕೊಳ್ಳಲೇ ಇಲ್ಲ. ಇದರಿಂದ ಮಾಲಿನಿ ಮಾನಸಿಕವಾಗಿ ನಲುಗಿದಳು. ಮುಂದೆ ನಡೆದ ಸಣ್ಣ ಪುಟ್ಟ ವಿರಸಗಳೂ ಕೂಡ ದೊಡ್ಡದಾಗಿ ಪರಿಣಮಿಸಿ, ಒಂದು ದಿನ ವಿಕ್ರಮನು ನೀನೇ ನಿನ್ನ ಕ್ಲಿನಿಕ್ ಬಿಟ್ಟು ಮನೆಯನ್ನು ನೋಡಿಕೋ, ಇಲ್ಲದಿದ್ದರೆ ನಿನ್ನ ದಾರಿ ನಿನಗೆ ಎಂದು ಕೋಪದಲ್ಲಿ ನುಡಿದನು. ಇದರಿಂದ ಮಾಲಿನಿ ಮಾನಸಿಕ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಳು. ವಿಕ್ರಮನು ಪದೇ ಪದೇ ಕೆಲಸ ಬಿಡುವಂತೆ ಒತ್ತಾಯಿಸುತ್ತಿದ್ದನು. ಒಮ್ಮೆ ಮಾಲಿನಿ ಕೆಲಸ ಬಿಡುವುದು ಒಬ್ಬ ವೈದ್ಯಳಾದ ಅವಳಿಗೆ ಅಸಾಧ್ಯವೆಂದು ಖಡಾಖಂಡಿತವಾಗಿ ಹೇಳಿದಳು. ಆಗ ವಿಕ್ರಮ್, "ನೀನೆಲ್ಲಿ ಆಸ್ಪತ್ರೆಯನ್ನು ಬಿಡುತ್ತೀಯ? ಅಲ್ಲಿ ಯಾರ ಜೊತೆ ಯಾರ ಸಂಬಂಧ ಇದೆಯೋ ನಿನಗೆ? ಆ ಸುಖವನ್ನು ಕಳೆದುಕೊಳ್ಳಲು ನೀನು ತಯಾರಿಲ್ಲ ಅಲ್ಲವೇ?" ಎಂದುಬಿಟ್ಟನು. ಮೃದುಸ್ವಭಾವದವಳೂ ಮತ್ತು ನೈತಿಕತೆಯನ್ನು ಮೈಗೂಡಿಸಿಕೊಂಡವಳೂ ಆದ ಮಾಲತಿಗೆ ಈ ಮಾತುಗಳು ತುಂಬಾ ನೋವುಂಟುಮಾಡಿದವು. ತನ್ನ ಗಂಡನ ಭಾವನೆಯಿಂದ ಅವಳಿಗೆ ಅಸಹ್ಯವುಂಟಾಯಿತು. ಇದರ ಪರಿಣಾಮ ಅವಳು ಮುಂದೊಂದು ದಿನ ಮಗುವಿನೊಡನೆ, ಮನೆ ಬಿಟ್ಟು ದೂರದ ಹುಬ್ಬಳ್ಳಿಗೆ ಹೊರಟುಹೋದಳು.

ಇದರಿಂದ ಕಮಲಮ್ಮ ಹಾಗೂ ವಿಕ್ರಮ್ ಕೂಡಾ ತುಂಬಾ ನೊಂದರೂ, ಸ್ವಾಭಿಮಾನ ಅಡ್ಡ ಬಂದಿದ್ದರಿಂದ ಯಾರೊಬ್ಬರೂ ಸಂಧಿಗೆ ಒಪ್ಪದೆ, ಬೇರೆ ಬೇರೆಯಾಗಿಯೇ ಉಳಿದರು. ಕಾನೂನು ರೀತ್ಯಾ ವಿಚ್ಛೇದನ ಪಡೆಯದಿದ್ದರೂ, ಇಬ್ಬರೂ ಬೇರೆ ಬೇರೆಯಾಗಿಯೇ ತಮ್ಮದೇ ಆದ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದರು. ಡಾ. ಮಾಲಿನಿ ಗೈನಕಾಲಜಿಯಲ್ಲಿ ವಿಶೇಷ

ಪರಿಣತಿ ಪಡೆದು ಉತ್ತಮ ಸರ್ಜನ್ ಎಂದು ಹೆಸರು ಪಡೆದಳು. ಒಬ್ಬ ಸೂಕ್ತ ಕೇರ್‌ಟೇಕರ್ ಅನ್ನು ಇಟ್ಟುಕೊಂಡು ಮಗಳ ಜೊತೆ ಹೊಸ ಜೀವನ ಪ್ರಾರಂಭಿಸಿದರು. ಇತ್ತ ವಿಕ್ರಮ್ ತಾಯಿಯೊಡನೆ ತನಗೆ ವರ್ಗವಾದ ಕಡೆಗೆಲ್ಲ ಹೋಗುತ್ತ ತನ್ನ ವೃತ್ತಿಜೀವನದಲ್ಲಿ ಒಳ್ಳೇ ಹೆಸರು ಗಳಿಸಿದನು.

ಮಗಳು ತಂದೆ ತಾಯಿಯರಂತೆ ತುಂಬಾ ಬುದ್ಧಿವಂತೆಯಾಗಿ, ಓದಿನಲ್ಲೂ ಪಠ್ಯೇತರ ಚಟುವಟಿಕೆಗಳಲ್ಲೂ ಯಾವಾಗಲೂ ಮುಂಚೂಣಿಯಲ್ಲಿರುತ್ತಿದ್ದಳು. ಮಗಳು ಪಿ.ಯು.ಸಿ.ಯಲ್ಲಿ ಹತ್ತನೇ ರ್‍ಯಾಂಕ್‌ಗಳಿಸಿದ ದಿನ ಡಾ. ಮಾಲಿನಿಗೆ ಬಹಳ ಸಂತೋಷವಾದರೂ, ಒಂದು ಮೂಲೆಯಲ್ಲಿ ವಿಕ್ರಮನ ನೆನಪಾಗಿ ಕಸಿವಿಸಿಯಾಗದೇ ಇರಲಿಲ್ಲ. ಮಗಳು ಸಿ.ಇ.ಟಿ.ಯಲ್ಲೂ ಕೂಡ ಒಳ್ಳೇ ಸ್ಥಾನಗಳಿಸಿ, ತನ್ನಂತೆಯೇ ಡಾಕ್ಟರ್ ಆಗಲಿ ಎಂಬ ಆಸೆ ಸಹಜವಾಗೇ ಮಾಲಿನಿಗೆ ಇತ್ತು. ಆದರೆ, ಮಗಳು ಮಾತ್ರ ತನಗೆ ವೈದ್ಯಕೀಯ ವೃತ್ತಿ ಬೇಡವೆಂದು ಇಂಜಿನಿಯರಿಂಗ್ ಕಾಲೇಜನ್ನು ಸೇರಿದಳು. ನಾಲ್ಕು ವರ್ಷಗಳು ಬೇಗನೆ ಕಳೆದು, ಮಗಳು ನಾಲ್ಕನೇ ರ್‍ಯಾಂಕ್ ಪಡೆದು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವಿ ಗಳಿಸಿದಾಗ ಬಹಳ ಸಂತೋಷಪಟ್ಟಳು. ಒಂದು ರೀತಿಯಲ್ಲಿ ತನ್ನ ಬದುಕು ಸಾರ್ಥಕವಾಯಿತೆನ್ನಿಸಿತು ಅವಳಿಗೆ.

ಮುಂದಿನ ವರ್ಷದಲ್ಲಿ ಅವಳಿಗೆ ಅಮೇರಿಕೆಯ ನ್ಯೂಯಾರ್ಕ್‌ನಲ್ಲಿ ಮುಂದೆ ಓದಲು ಅವಕಾಶ ದೊರೆತು, ಅವಳು ಅಲ್ಲಿಗೆ ಹೊರಟು ನಿಂತಳು. ಸಂತೋಷದಿಂದ ಕಳಿಸಿಕೊಡಲು ಎಷ್ಟೇ ಮನಸ್ಸು ಮಾಡಿಕೊಂಡಿದ್ದರೂ, ಕಣ್ಣಂಚಿನಲ್ಲಿ ನೀರು ಜಿನುಗಿಸಿಯೇ ಮಗಳನ್ನು ಕಳುಹಿಸಿಕೊಟ್ಟಿದ್ದಾಯಿತು.

ನಂತರದ ಒಂಟಿ ಬದುಕು ಬಹಳ ದುರ್ಭರವೆನಿಸಿತು. ಮನೆಯಲ್ಲಿದ್ದ ಕೆಲಸದಾಕೆಗೆ ಆರೋಗ್ಯ ಸರಿಯಿಲ್ಲದ ಕಾರಣ ಕೆಲಸ ಬಿಟ್ಟುಹೋಗಿ, ಡಾ. ಮಾಲಿನಿ ಒಂಟಿಯಾಗಿಯೇ ಕಾಲ ಕಳೆಯತೊಡಗಿದಳು. ಒಂದೇ ಆಶಾಕಿರಣವೆಂದರೆ ಆಗಾಗ್ಗೆ ಬರುವ ಪೂರ್ವಿಯ ಫೋನ್ ಕರೆಗಳು. ಹೇಗೋ ಅಂತೂ ಆಸ್ಪತ್ರೆಯಲ್ಲಿ ರೋಗಿಗಳ ಸೇವೆ, ಮನೆಯ ಕೆಲಸ ಇತ್ಯಾದಿಗಳಲ್ಲಿ ಕಾಲ ಕಳೆಯುತ್ತಿತ್ತು. ತಂದೆಯ ಬಗ್ಗೆ ಅನೇಕ ಸಾರಿ ವಿಚಾರಿಸಿ, ಏನೂ ಉತ್ತರ ಸಿಗದೆ ಬೇಸತ್ತಿದ್ದ ಮಗಳು ಆ ವಿಚಾರವಾಗಿ ತಾಯಿಯನ್ನು ಮತ್ತೆ ಮತ್ತೆ ಕೇಳಿ ಅವಳನ್ನು ಸಂದಿಗ್ಧಕ್ಕೆ ಸಿಕ್ಕಿಸಲು ಇಷ್ಟವಿಲ್ಲದೆ ಕೇಳುವುದನ್ನೇ ಬಿಟ್ಟುಬಿಟ್ಟಿದ್ದಳು.

ಹೇಗೋ ಎರಡು ವರ್ಷಗಳು ಬೇಗನೆ ಕಳೆದವು. ಮಗಳೂ ತನ್ನ ಓದು ಮುಗಿಸಿ ಒಳ್ಳೆಯ ಕಡೆ ಕೆಲಸವೂ ಸಿಕ್ಕಿತು. ಈ ಮಧ್ಯೆ ತನ್ನ ಸಹೋದ್ಯೋಗಿ, ಕರ್ನಾಟಕದವನೇ ಆದ ರಾಹುಲನನ್ನು ಮೆಚ್ಚಿ, ಊರಿಗೆ ಬಂದು ಸರಳವಾಗಿ ದೇವಸ್ಥಾನದಲ್ಲಿ ಮದುವೆಯಾದಳು. ಮದುಮಕ್ಕಳು ತಕ್ಷಣವೇ ಅಮೇರಿಕೆಗೆ ಮರಳಿದ್ದರು. ಮಗಳ ಜೀವನವೂ ಒಂದು ರೀತಿ ಸೆಟಲ್ ಆಗಿ, ತಾಯಿಯನ್ನು ತನ್ನ ಜೊತೆ ಬಂದಿರಲು ದಿನವೂ ಪೀಡಿಸುತ್ತಿದ್ದಳು. ಮಾಲಿನಿ ಇನ್ನೂ ಮನಸ್ಸು ಮಾಡಿರಲಿಲ್ಲ. ಆದರೆ ಕಾಲ ಅವಕಾಶವನ್ನು ತಾನೇ ಒದಗಿಸಿತು. ಮಗಳು ತಾಯಿಯಾಗುವಾಗ ಯಾವ ತಾಯಿ ತಾನೇ ಮಗಳ ಆರೈಕೆಗೆ ಹೋಗಲು ನಿರಾಕರಿಸಿಯಾಳು? ಅಂತಹ ಸಂದರ್ಭದಲ್ಲೇ ಮಾಲಿನಿ ಅಮೇರಿಕೆಗೆ ಹೋಗಿದ್ದು. ಅಲ್ಲಿನ ಜೀವನದ ರೀತಿನೀತಿಗಳು, ಅನುಕೂಲತೆಗಳು ಅವಳಿಗೆ ತುಂಬಾ ಮೆಚ್ಚುಗೆಯಾದವು. ಪೂರ್ವಿಗೆ ಸುಖಪ್ರಸವವಾಗಿ ಗಂಡುಮಗು ಹುಟ್ಟಿತು. ಬಹಳ ಮುದ್ದಾಗಿದ ಮಗುವಿಗೆ ವಿವೇಕ್ ಎಂದು ನಾಮಕರಣ ಮಾಡಿದರು. ಮಗುವಿಗೆ ಆರು ತಿಂಗಳು ತುಂಬಿದ ನಂತರ ಮಾಲಿನಿ ಭಾರತಕ್ಕೆ ಮರಳಿ, ತನ್ನ ಕೆಲಸದಲ್ಲಿ ಮತ್ತೆ ತೊಡಗಿದಳು.

ಹೀಗಿರುವಾಗ ಒಂದು ದಿನ ಮಾಲಿನಿಯ ಜೂನಿಯರ್ ಡಾಕ್ಟರ್ ಒಂದು ಕೇಸನ್ನು ಮಾಲಿನಿಯ ವಿಶೇಷ ಪರಾಂಬರಿಕೆಗೆ ತಂದುಕೊಟ್ಟಳು. ರೋಗಿಗೆ ಗರ್ಭಕೋಶದಲ್ಲಿ ಗೆಡ್ಡೆ ಇದ್ದು ಗರ್ಭಕೋಶವನ್ನೇ ಸರ್ಜರಿ ಮಾಡಿ ತೆಗೆಯುವ ಸ್ಥಿತಿ ತಲುಪಿದ್ದರು.

ರೋಗಿಯ ವಿವರಗಳನ್ನು ಓದುತ್ತಿದ್ದಂತೆ ಮಾಲಿನಿ ಅವಾಕ್ಕಾದಳು. ಆ ರೋಗಿ ಬೇರೆ ಯಾರೂ ಆಗಿರದೇ, ತನ್ನ ಸ್ವಂತ ಅತ್ತೆ ಕಮಲಮ್ಮನವರಾಗಿದ್ದರು. ಒಂದು ಕ್ಷಣ ಮಾಲಿನಿಗೆ ಏನೂ ಮಾಡಲೂ ತೋಚದೇ ಕಲ್ಲಿನಂತೆ ಕುಳಿತುಬಿಟ್ಟಳು. ಐದು ನಿಮಿಷದ ಬಳಿಕ ಸಾವರಿಸಿಕೊಂಡು ಅವರನ್ನು ತನ್ನಲ್ಲಿಗೆ ಕಳುಹಿಸಲು ಹೇಳಿದಳು. ಹಳೆಯ ಘಟನೆಗಳೆಲ್ಲಾ ಒಮ್ಮೆ ಮನಃಪಟಲದಲ್ಲಿ ಸುಳಿದುಹೋದವು.

ಐದು ನಿಮಿಷದಲ್ಲಿ ವಿಕ್ರಮ್ ತಾಯಿಯೊಡನೆ ಒಳಗೆ ಬಂದನು. ಮಾಲಿನಿಯನ್ನು ವೈದ್ಯಳ ಸ್ಥಾನದಲ್ಲಿ ನೋಡಿ ಅವನೂ ಗಲಿಬಿಲಿಗೊಂಡನು. "ಮಾಲೀ.." ಎಂದು ಏನೋ ಮಾತಾಡಲು ಬಾಯಿ ತೆರೆದ ವಿಕ್ರಮನನ್ನು ಮಾಲಿನಿ ಸನ್ನೆ ಮಾಡಿ ಸುಮ್ಮನಾಗಿಸಿದಳು. ಕಮಲಮ್ಮನವರೂ ನೆಟ್ಟ ಕಣ್ಣು ಬಿಟ್ಟ ಬಾಯಿಯಿಂದ ಸೊಸೆಯನ್ನೇ ನೋಡುತ್ತಿದ್ದರು. ಹೆಚ್ಚುಮಾತಿಗೆ ಅವಕಾಶ ಕೊಡದೇ ಮಾಲಿನಿ ಖಾಯಿಲೆಯ ಗಂಭೀರತೆಯನ್ನು ತಿಳಿಸಿ ಹೇಳಿ, ಗರ್ಭಕೋಶವನ್ನು ಸರ್ಜರಿ ಮೂಲಕ ತೆಗೆಯುವುದೊಂದೇ ಸರಿಯಾದ ಚಿಕಿತ್ಸೆ ಎಂದು ಹೇಳಿದಳು. ಗಾಬರಿಗೊಂಡ ತಾಯಿ-ಮಗನನ್ನು ತಕ್ಕ ರೀತಿಯಲ್ಲಿ ಸಮಾಧಾನಪಡಿಸಿ ಇದರಿಂದ ತೊಂದರೆ ಏನೂ ಇರುವುದಿಲ್ಲ, ಮುಂದಿನ ಬದುಕನ್ನು ಆರಾಮವಾಗಿ ಸಾಗಿಸಬಹುದು ಎಂದು ತಿಳಿಹೇಳಿದರು ಡಾ. ಮಾಲಿನಿ.

ಸರ್ಜರಿಯ ದಿನವನ್ನು ಗೊತ್ತುಮಾಡಲಾಯಿತು. ನುರಿತ ಕೈಯುಳ್ಳ ಮಾಲಿನಿ ತೀರ ಸುಲಭವಾಗೆ ಅದನ್ನು ಮಾಡಿ ಮುಗಿಸಿದಳು. ವಾರ್ಡ್‌ನಲ್ಲಿ ಚೇತರಿಸಿಕೊಳ್ಳುತ್ತಿದ್ದ ಕಮಲಮ್ಮನವರು ಆರೋಗ್ಯವಾಗಿ ಇದ್ದುದನ್ನು ಕಂಡು ವಿಕ್ರಮನೂ ಸಮಾಧಾನಗೊಂಡನು. ವಾರ ಕಳೆದ ನಂತರ, ಕಮಲಮ್ಮನವರನ್ನು ಮರುದಿನ ಮನೆಗೆ ಕಳುಹಿಸುವುದಾಗಿ ಡಾ. ಮಾಲಿನಿ ಹೇಳಿದಳು.

ಆ ದಿನ ವಿಕ್ರಮನು ತಾಯಿಯನ್ನು ಡಿಸ್ಚಾರ್ಜ್ ಮಾಡಿಸಿಕೊಂಡು,

ಮಾಲಿನಿಯೊಡನೆ ತುಂಬಾ ಮಾತಾಡಬೇಕೆಂದು ತೀರ್ಮಾನಿಸಿಕೊಂಡು ತುಂಬಾ ಉತ್ಸಾಹದಿಂದಲೇ ಆಸ್ಪತ್ರೆಗೆ ಬಂದನು. ಕೌಂಟರ್‌ನಲ್ಲಿ ಬಿಲ್ಲನ್ನು ಪಾವತಿ ಮಾಡಿ ಡಾಕ್ಟರನ್ನು ಭೇಟಿ ಮಾಡಲು ಅವರ ಕೋಣೆಗೆ ಹೋದ ವಿಕ್ರಮನಿಗೆ ನಿರಾಸೆ ಕಾದಿತ್ತು. ಮಾಲಿನಿ ಅಲ್ಲಿರಲಿಲ್ಲ. ವಿಚಾರಿಸಲಾಗಿ, ಡಾ. ಮಾಲಿನಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೊರಟು ಹೋದದ್ದನ್ನು ಆಸ್ಪತ್ರೆಯ ಸಿಬ್ಬಂದಿ ತಿಳಿಸಿದರು. ಅವರು ಎಲ್ಲಿ ಹೋದರೆಂದು ಅಲ್ಲಿ ಯಾರಿಗೂ ತಿಳಿದಿರಲಿಲ್ಲ. ಡಿಸ್ಚಾರ್ಜ್ ವಿವರಗಳನ್ನೆಲ್ಲ ಬರೆದಿಟ್ಟು ಔಷಧಿಗಳ ಬಗ್ಗೆ ಎಲ್ಲ ವಿವರಗಳನ್ನೂ ಕೊಟ್ಟು ಡಾ. ಮಾಲಿನಿ ಹೊರಟು ಹೋಗಿದ್ದರು.

*****

ಈ ಯೋಚನೆಗಳಿಂದ ತಲೆಗೊಡವಿ ಎಚ್ಚೆತ್ತಳು ಡಾ. ಮಾಲಿನಿ. ಬಸ್ ಆಗಲೇ ನೆಲಮಂಗಲ ದಾಟಿ ಬೆಂಗಳೂರಿಗೆ ಹೊರಟಿತ್ತು. ಇನ್ನೇನು ನಲವತ್ತೈದು ನಿಮಿಷಗಳಲ್ಲಿ ಬೆಂಗಳೂರು ತಲುಪುವುದರಲ್ಲಿತ್ತು. ಈಗ ಮೊದಲ ಬಾರಿಗೆ, ಡಾ. ಮಾಲಿನಿಗೆ ತಾನು ಹುಬ್ಬಳ್ಳಿಯನ್ನು ಬಿಟ್ಟು ಬೆಳಗಾವಿಗೆ ಹೊರಟು ಹೋಗಬಾರದಿತ್ತು ಎಂದೆನ್ನಿಸಿತು. ತನ್ನ ಪಲಾಯನ ಸೂತ್ರಕ್ಕೆ ತನಗೇ ಬೇಜಾರಾಯಿತು. ಆದರೆ ಏನು ಮಾಡುವುದು? ಕಾಲ ಮಿಂಚಿತ್ತು.

ಬಸ್ ಬೆಂಗಳೂರು ತಲುಪಿತು. ವಿಳಾಸ ಇದ್ದುದರಿಂದ ಮಾಲಿನಿ ಆಟೋದಲ್ಲಿ ಬಂದು ಮನೆಯ ಮುಂದೆ ಬಂದು ನಿಂತು ಮನೆಯನ್ನೊಮ್ಮೆ ನೋಡಿದಳು. ನಗರದ ಮುಖ್ಯ ವಿಸ್ತರಣದಲ್ಲಿ ದೊಡ್ಡ ಬಂಗಲೆ ಲಾವಣ್ಯ, ಶೀವಿಯಿಂದ ನಿಂತಿತ್ತು. ಯಾರಾದರೂ, ಮನೆಯ ಒಳಗಿರುವ ವಿನ್ಯಾಸವನ್ನು ಹೊರಗಿನಿಂದಲೇ ಊಹಿಸಬಹುದಿತ್ತು. ಮನೆಯ ನೋಟವೇ ಅಷ್ಟು ಸುಂದರವಾಗಿತ್ತು. ಸರ್ವಾಲಂಕಾರಭೂಷಿತೆಯಾಗಿ ಬಾಜಾಬಜಂತ್ರಿಗಳ ನಡುವೆ ಶೀವಿಯೊಂದಿಗೆ ಪಡಿಯನ್ನು ಬಲಗಾಲಲ್ಲಿ ಒದ್ದು ವಿಕ್ರಮನೊಡನೆ ಮನೆಯನ್ನು ಪ್ರವೇಶಿಸಬೇಕಾಗಿದ್ದ ತಾನು ಈ ರೀತಿ ಮನೆಯೊಳಗೆ ಹೋಗಬೇಕಾಗಿ ಬಂದುದಕ್ಕೆ ತುಂಬಾ ಪಶ್ಚಾತ್ತಾಪವಾಗಿ ಅಪ್ರಯತ್ನವಾಗಿ ಕಂಬನಿ ಧಾರಾಕಾರವಾಗಿ ಇಳಿಯಿತು.

ಮನೆಯ ಮುಂದೆ ಮನೆಯೊಡೆಯರ ಹೆಸರಿನ ಫಲಕವೇನೂ ಇರಲಿಲ್ಲ. ದುಃಖದಿಂದಲೇ ಮಾಲಿನಿ ಮನೆಯೊಳಗೆ ಹೊಕ್ಕಳು. ಕಮಲಮ್ಮನವರ ದಹನಕ್ರಿಯೆಯ ವಿಧಿಗಳೆಲ್ಲ ಮುಗಿದುಹೋಗಿದ್ದರೂ, ಬಂದ ನೆಂಟರೆಲ್ಲ ಇನ್ನೂ ಇದ್ದರು. ಎಲ್ಲರನ್ನೂ ಒಮ್ಮೆ ಮಾತಾಡಿಸಿದ ಮಾಲಿನಿ, ವಿಕ್ರಮನನ್ನು ನೋಡಿದಾಗ ಗಳಗಳನೆ ಅತ್ತುಬಿಟ್ಟಳು. ಅವಳಿಗೆ ತನ್ನ ದು:ಖವನ್ನು ತಡೆದುಕೊಳ್ಳಲು ಸಾಧ್ಯವಾಗಲೇ ಇಲ್ಲ.

ಅಂತೂ ಎಲ್ಲ ವಿಧಿಗಳು ಮುಗಿದು, ಹದಿಮೂರು ದಿನದ ಶುಭಕಾರ್ಯ ಆಗುವವರೆಗೆ ಮಾಲಿನಿ ಬೆಂಗಳೂರಲ್ಲೇ ಉಳಿದಳು. ಎಲ್ಲ ನೆಂಟರೂ ಹೊರಟು, ಮನೆಯಲ್ಲಿ ಮಾಲಿನಿ ಮತ್ತು ವಿಕ್ರಮ್ ಮಾತ್ರ ಉಳಿದುಕೊಂಡರು. ಒಂದು ರೀತಿಯ ವಿಚಿತ್ರ ಮೌನ ಮನೆಯಲ್ಲಿ ತಾಂಡವವಾಡುತ್ತಿತ್ತು. ಮಾರನೆಯ ದಿನ ಮಾಲಿನಿಯೂ ಹೊರಟು ನಿಂತಾಗ ವಿಕ್ರಮನು ಕಣ್ಣಿನಲ್ಲಿ ನೀರು ತಂದುಕೊಂಡು ಹೇಳಿದ. "ಮಾಲೀ, ಹಿಂದೆ ನಡೆದದ್ದು ಇಬ್ಬರೂ ಮರೆತುಬಿಡೋಣ. ನೀನು ನಿನ್ನ ಬೆಳಗಾವಿ ಜೀವನಕ್ಕೆ ವಿದಾಯ ಹೇಳಿಬಂದು ಇಲ್ಲೇ ನನ್ನ ಸಂಗಾತಿಯಾಗಿ ಇರಲಾರೆಯಾ?" ಎಂದು ಕೇಳಿದನು. ಒಮ್ಮೆಲೇ ಬಂದ ಈ ಪ್ರಶ್ನೆಗೆ ಮಾಲಿನಿಯ ಬಳಿ ನೇರ ಉತ್ತರವಿರಲಿಲ್ಲ. ಅವಳು "ನೀವು ಹೀಗೆ ಕೇಳಿದರೆ, ನಾನು ಏನು ಹೇಳಲಿ? ಯಾವುದನ್ನೂ ತೀರ್ಮಾನಿಸಲು ನನಗೆ ಸ್ವಲ್ಪ ಸಮಯ ಬೇಕು." ಎಂದಳು. ಆಗ ವಿಕ್ರಮನು "ನಿನಗೆ ಬೇಕಾದಷ್ಟು ಕಾಲ ತೆಗೆದುಕೋ. ಆದರೆ, ಉತ್ತರ ಮಾತ್ರ ಸಕಾರಾತ್ಮಕವಾಗಿರಲಿ. ನಡೆದುಹೋದ ಪ್ರಮಾದಕ್ಕೆ ಕ್ಷಮೆ ಇರಲಿ" ಎಂದು ಬೇಡುವ ದನಿಯಲ್ಲಿ ಹೇಳಿದನು. ಮಾಲಿನಿ ಯೋಚಿಸಿ ಯೋಚಿಸಿ ಹಣ್ಣಾದಳು. ಕೊನೆಗೆ ಅವಳಿಗೂ, better late than never ಎನ್ನಿಸಿ, ವಿಕ್ರಮನೊಂದಿಗೆ ಮತ್ತೆ ಬದುಕುವ ಆಲೋಚನೆ ಬಂದಿತು. ಮಾರನೆ ದಿನ ಅವನೂ ಇವಳ ತೀರ್ಮಾನದ ಬಗ್ಗೆ ಕೇಳಿದಾಗ, ಇವಳು ಸರಿಯೆಂದು ತಲೆಯಾಡಿಸಿದಳು. ವಿಕ್ರಮನು ಇದರಿಂದ ಸಮಾಧಾನದ ನಿಟ್ಟುಸಿರಿಟ್ಟನು.

ಎರಡು ದಿನ ಬಿಟ್ಟು ಇಬ್ಬರೂ ಒಟ್ಟಿಗೇ ಬೆಳಗಾವಿಗೆ ಹೋಗಿ ಅಲ್ಲಿನ ವ್ಯವಹಾರವೆಲ್ಲ ಮುಗಿಸಿ, ಬೆಂಗಳೂರಿನ ಮನೆಗೆ ಮರಳಿದರು ವಿಕ್ರಮ್ ಮತ್ತು ಡಾ.ಮಾಲಿನಿ.

ಮರು ದಿನದಿಂದ ಎಂದಿನಂತೆ ದಿನಚರಿ ಆರಂಭವಾಯಿತು. ಮಾಲಿನಿ ತತ್ಕಾಲಕ್ಕೆ ತನ್ನ ಡಾಕ್ಟರಿಕೆಯನ್ನು ಮರೆತು, ಪೂರ್ತಿ ಗೃಹಿಣಿಯಾಗಿ, ತನ್ನ ಮನೆಯ ಕೆಲಸಗಳನ್ನು ನಿರ್ವಹಿಸತೊಡಗಿದಳು. ಒಂದು ವಾರದಲ್ಲಿ ಮನೆಯು ನವವಧುವಿನಂತೆ ಸಿಂಗಾರಗೊಂಡಿತು. ಇದನ್ನು ನೋಡಿ ತುಂಬಾ ಸಂತೋಷಪಟ್ಟವನು ವಿಕ್ರಮ್. ಆತನೀಗ ಬಹಳ ತೃಪ್ತನಂತೆ ತೋರುತ್ತಿದ್ದ.

ಮಾಲಿನಿ ಅಮೆರಿಕೆಯಲ್ಲಿದ್ದ ಮಗಳು ಪೂರ್ವಿಗೆ ತನ್ನ ಜೀವನದಲ್ಲಾದ ಬದಲಾವಣೆಗಳನ್ನು ವಿವರವಾಗಿ ತಿಳಿಸಿದಳು. ಒಂದು ದಿನವೂ ತನ್ನ ತಂದೆಯ ಬಗ್ಗೆ ಏನೂ ಮಾತನಾಡದ ತಾಯಿ, ತಾನಾಗಿಯೇ ಎಲ್ಲವನ್ನೂ ತಿಳಿಸಿ ತಾನು ಅವನ ಜೊತೆಯಲ್ಲೇ ಇರುವ ವಿಷಯ ತಿಳಿಸಿದ ತಾಯ ಫೋನ್ ಕರೆ ಮಗಳಿಗೆ ಬಹಳ ಸಮಾಧಾನವನ್ನು ತಂದಿತು. ಅವಳೂ ತನ್ನ ತಂದೆಯೊಡನೆ ಮಾತಾಡಬೇಕೆಂಬ ತನ್ನ ಬಯಕೆಯನ್ನು ಮುಂದಿಟ್ಟಳು. ನಂತರದ ದಿನಗಳಲ್ಲಿ ವಿಕ್ರಮ್ ಮತ್ತು ಪೂರ್ವಿ ಮಾತಾಡುತ್ತ, ಪರಸ್ಪರ ನೋಡದೇ ಆತ್ಮೀಯರಾದರು. ವಿಕ್ರಮನಿಗೆ ಮಗಳ ಬಗ್ಗೆ ಬಹಳ ಪ್ರೀತಿ ಬೆಳೆಯಿತು. ಹೀಗಿರುವಲ್ಲಿ ಪೂರ್ವಿ ತನ್ನ ಮನೆಗೆ ಬರಬೇಕೆಂದು ತನ್ನ ತಾಯಿ–ತಂದೆಯರನ್ನು ಆಗ್ರಹಪೂರ್ವಕವಾಗಿ ಒತ್ತಾಯಿಸಿದಳು. ಪರಿಣಾಮ ಮಾಲಿನಿ ಮತ್ತು ವಿಕ್ರಮರು ಎಲ್ಲ formalities ಮುಗಿಸಿಕೊಂಡು ಅಮೆರಿಕೆಗೆ ಹೊರಟು ನಿಂತರು. ವಿಕ್ರಮನ ಮನಸ್ಸಿನಲ್ಲಿ ಮಗಳು, ಅಳಿಯ ಮತ್ತು ಮುದ್ದಿನ

ಮೊಮ್ಮೊಗುವನ್ನು ನೋಡಲು ಕಾತರ ಗರಿಗೆದರಿತ್ತು. ಅವರಿಗಾಗಿ ಎಷ್ಟೆಷ್ಟು ರೀತಿಯ ಪದಾರ್ಥಗಳನ್ನು ಕೊಂಡರೂ ವಿಕ್ರಮನಿಗೆ ಸಮಾಧಾನವೇ ಇಲ್ಲ. ಕೊನೆಗೊಮ್ಮೆ ಮಾಲಿನಿಯೇ ಈ ಕೊಳ್ಳುವಿಕೆಗೆ ಕೊನೆಹಾಡಬೇಕಾಯಿತು.

ಪ್ರಯಾಣ ಮುಗಿದು ನ್ಯೂಯಾರ್ಕ್‌ನಲ್ಲಿ ಇಳಿದು, ಹೊರಬಂದಾಗ ಪೂರ್ವಿ, ರಾಹುಲ್ ಮತ್ತು ವಿವೇಕರನ್ನು ಕಂಡು ಮಾಲಿನಿಯ ಮುಖ ಅರಳಿತು. ವಿವೇಕನಂತೂ ಬಹಳ ಮುದ್ದಾಗಿ ಕಾಣುತ್ತಿದ್ದ. ತಕ್ಷಣ ಅವನನ್ನು ಎತ್ತಿಕೊಂಡ  ಮಾಲಿನಿ ಮಗಳು ಅಳಿಯಂದಿರನ್ನು ಗಂಡನಿಗೆ ಪರಿಚಯಿಸಿದಳು. ಹೊಸದಾಗಿ ಸಂಧಿಸಿದರೂ ಅವರಿಬ್ಬರೂ ವಿಕ್ರಮನಿಗೆ ಬಹಳ ಆತ್ಮೀಯರೆನಿಸಿದರು. ಇದಲ್ಲವೇ ಕರುಳು ಸಂಬಂಧ?

ನಂತರ ಆರು ತಿಂಗಳು ಮಗಳ ಸಂಸಾರದೊಡನೆ ಆನಂದವಾಗಿ ಕಳೆದರು. ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಬಂದರು. ಅದರಲ್ಲಿ ಮುಖ್ಯವಾಗಿ ವಿಕ್ರಮನ ಗಮನ ಸೆಳೆದದ್ದು ನಯಾಗರ ಜಲಪಾತ ಮತ್ತು Statue of Liberty.  ಎಲ್ಲೆಡೆ ತೆಗೆದ ಚಿತ್ರಗಳನ್ನು ಪ್ರಿಂಟ್ ಮಾಡಿಸಿಟ್ಟುಕೊಂಡಳು ಮಾಲಿನಿ. ಆರು ತಿಂಗಳು ಕಳೆದದ್ದೇ ತಿಳಿಯದೇ ಹೋಯಿತು. ಹೊರಡುವ ಸಮಯ ಬಂದೇ ಬಿಟ್ಟಿತು. ಭಾರವಾದ ಹೃದಯದಿಂದಲೇ ಮಗಳ ಸಂಸಾರವನ್ನು ಬೀಳ್ಕೊಟ್ಟು ಬೆಂಗಳೂರಿಗೆ ಹೊರಟು ನಿಂತರು ಮಾಲಿನಿ ಮತ್ತು ವಿಕ್ರಮ್.

ಪ್ರಯಾಣದ ಕೊನೆಯ ಹಂತದಲ್ಲಿ, ಬೆಂಗಳೂರು ನಿಲ್ದಾಣದಲ್ಲಿ ಇನ್ನೇನು ಇಳಿಯುವೆವೆಂದು ಗಗನ ಸಖಿ ಘೋಷಿಸಿದಾಗ, ಮಾಲಿನಿ ಮತ್ತು ವಿಕ್ರಮ್ ಇಳಿಯುವ ಸಿದ್ಧತೆ ಮಾಡಿದರು. ಮಾಲಿನಿಯ ಮೊಗದಲ್ಲಿ ಸಮಾಧಾನ ಕಂಡರೆ, ವಿಕ್ರಮನ ಮುಖದಲ್ಲಿ ಏನನ್ನೋ ಸಾಧಿಸಿದ ಧನ್ಯತಾ ಭಾವವಿತ್ತು. ಟ್ಯಾಕ್ಸಿಯೊಂದನ್ನು ಹಿಡಿದು ಮನೆಯ ಮುಂದೆ ಇಳಿದು ಇಬ್ಬರೂ ಕೈ ಕೈ ಹಿಡಿದು ಸಂತೃಪ್ತಿಯಿಂದ ಮನೆಯನ್ನು ಪ್ರವೇಶಿಸಿದರು. ಮುಂದಿನ ಸುಂದರ ಜೀವನದ ಕನಸನ್ನು ನನಸಾಗಿಸುವ ಭಾವ ಇಬ್ಬರ ಮನದಲ್ಲೂ ಮನೆ ಮಾಡಿತ್ತು.

***

. . . ವ್ಯಥೆ (ಪುಟ 114ರಿಂದ)

ಉಡುಗೊರೆ ಬೇರೆ ತಂದಿದ್ದೀಯ." ಎಂದು ಪೆಟ್ಟಿಗೆ ತೆರೆದಳು. ಆಭರಣಗಳು! "ಇದೇನು ನಮ್ಮ ಮದುವೆಗೆಂದು ತಂದೆಯಾ, ಎಷ್ಟು ಚೆನ್ನಾಗಿವೆ!"


ಅವಳ ಪ್ರಶ್ನೆಯೆನೋ ಸರಳವಾಗಿತ್ತು. ಆದರೆ ಅವನ ಉತ್ತರ ಮುಗಿದಾಗ ಇಬ್ಬರ ಮನಸ್ಸುಗಳೂ ಭಾರವಾಗಿದ್ದವು.

(ಈ ಕತೆ ನಿಜಸ್ಥಿತಿಯನ್ನು ಆಧಾರಿಸಿದ್ದರೂ ಇಲ್ಲಿನ ಎಲ್ಲ ಪಾತ್ರಗಳೂ ಹಾಗೂ ಸನ್ನಿವೇಶಗಳು ಕಾಲ್ಪನಿಕವಾಗಿವೆ.)

***

**KINI DENTAL CARE**
**Dr. Lata Kini, DDS**
**Dr. Ramanand Kini, DDS**

- Complete dental care for the whole family
- Quality dental care at affordable prices – up to 50% off, call for details
- Emergency dental care
- Saturday and evening appointments
- Most insurance plans accepted
- No insurance? We have a plan for you
- State of the art office and sterilization technique
- Digital X-rays (90% less radiation exposure)
- One hour in office teeth whitening
- T.V. in every room – relaxed atmosphere



**100, O'Connor Drive, Suite 23**
**San Jose, CA – 95128**
**(408) 998-8383**

ಕ

ಥೆ

ವರುಷ ಉರುಳಿ ಬಂದಿದೆ ಯುಗಾದಿ
ತಂದಿದೆ ಬೇವು ಬೆಲ್ಲದ ಕಹಿ ಸಿಹಿ

ಸುಭದ್ರಾ ಸುಬ್ಬರಾವ್
ಕ್ಯಾಲಿಫೋರ್ನಿಯ

# ಬೇವು ಬೆಲ್ಲ

'ಯುಗ ಯುಗಾದಿ ಕಳೆದರು ಯುಗಾದಿ ಮರಳಿ ಬರುತಿದೆ' ಎಂಬ ದ. ರಾ. ಬೇಂದ್ರೆಯವರ ಗೀತೆ ಆಕಾಶವಾಣಿಯಲ್ಲಿ ಕೇಳಿ ಬರುತ್ತಿದೆ. ಇಂದಿನ ಸಂತೋಷದ ಯುಗಾದಿ ದಿನದಲ್ಲಿ ಆ ಹಾಡಿನ ಮಹತ್ವ ಅದೆಷ್ಟು ಅರ್ಥಪೂರ್ಣ. ಹೊಸ ವರುಷ ಹೊಸ ವರುಷ ಹೊಸತು ತರುತಿದೆ. 'ಚೈತ್ರ ವಸಂತದ ಪ್ರಕೃತಿಯ ಹಸಿರು ಸೊಬಗು ಅದೆಷ್ಟು ಸುಂದರ'. ಯುಗಾದಿ ಜೀವನದಲ್ಲಿ ಹಾಸುಹೊಕ್ಕಾಗಿ ಪ್ರತಿವರ್ಷ ನೆನಪಿಸಿ ಮುದನೀಡುವ ಸಂತಸದ ದಿನ. ಆಗತಾನೇ ಮುಂಬೈನಿಂದ ಮಗ ಮತ್ತು ಗಂಡನೊಡನೆ ಬಂದಿಳಿದ ರಾಧಮ್ಮನಿಗೆ ಸೋದರಳಿಯನ ಮನೆಗೆ ಕಾಲಿಡುತ್ತಿದ್ದಂತೆ ಹಾಡಿನ ಸ್ವಾಗತ. ರಂಜನಿ, ರಾಜೀವ್ ಅತ್ತೆ ಮಾವನನ್ನು ಆದರಿಸಿ, "ಬಾರೋ ಸುಹಾಸ್ ನಿನ್ನನ್ನು ನೋಡಿ ಬಹಳ ವರ್ಷಗಳಾಗಿತ್ತು" ಎಂದು ಆತ್ಮೀಯತೆಯಿಂದ ಸ್ವಾಗತಿಸಿದರು. "ಹಬ್ಬದ ಸಂತೋಷ ಈಗ ಆಗ್ತಾಯಿದೆ. ಅಪ್ಪ ಕೂಡ ಹಳ್ಳಿಗೆ ನಿಮ್ಮಗಳನ್ನು ಕರೆದುಕೊಂಡು ಬರಲು ಹೇಳಿದ್ದಾರೆ. ನಿಮ್ಮ ಕಾರ್ಯಕ್ರಮಗಳ ಪಟ್ಟಿ ತಿಳಿಸಿ ಎಲ್ಲಾ ಏರ್ಪಾಡು ಮಾಡ್ತೀನಿ." ಅಂದ ರಾಜೀವನ ಮಾತಿಗೆ ರಾಧಮ್ಮ "ನೋಡು ಹದಿನೈದು ದಿನ ಇಲ್ಲಿರುತ್ತೇವೆ, ಓದು ಮುಗಿದು ಕೆಲಸಕ್ಕೆ ಸೇರಿ ನಾಲ್ಕು ವರ್ಷದ ಮೇಲೆ ಬಂದಿರೋದು, ನೀನೂ ರಜ ಹಾಕು, ಒಟ್ಟಿಗೆ ಸುತ್ತಿ ಬರೋಣ." ಅಂದಳು. ಅತ್ತೆಯ ಮಾತಿಗೆ "ಏನತ್ತೆ, ಬರಿ ಇಲ್ಲೇ ಇರೋದ? ನಾನು ನಿಮ್ಮೊಡನೆ ಆಸ್ಟ್ರೇಲಿಯಾಕ್ಕೂ ಬರಲು ತಯಾರಾಗ್ತಾ ಇದ್ದೀನಿ." ಎಂದು ಹಾಸ್ಯ ಮಾಡಿದ ರಾಜೀವ್‌ನ ಮಾತಿಗೆ "ಆ ಕಾಲ ಬೇಗ ಬರಲಿ ಕಣೋ." ಎಂದರು. ಸುಹಾಸನಿಗೆ ಬೆಂಗಳೂರಿನ ಹುಡುಗಿ ನೋಡಿ ಮದುವೆ ಮಾಡಲು ಬಂದಿರುವ ವಿಷಯ ತಿಳಿಸಿದರು.

ತಿಳಿ ನೀಲಿ ಬಣ್ಣದ ರೇಷ್ಮೆ ಸೀರೆ ಉಟ್ಟು ತಲೆ ತುಂಬ ಹೂವು ಮುಡಿದು ಹಣ್ಣಿನ ಬುಟ್ಟಿ ಹಿಡಿದು ನಗುತ್ತಾ ಒಳಬಂದ ಹುಡುಗಿಯನ್ನು ನೋಡಿ, "ರಂಜು ನೋಡು ಯಾರೋ ಬಂದಿದಾರೆ ಬಾ." ಅಂದಾಗ "ರಾಧತ್ತೆ ಅವಳು ನಮ್ಮ ಅಕ್ಕ ಗೌರಿ ಮಗಳು ದೀಪ್ತಿ. ಕಲ್ಕತಾದಿಂದ ಬಂದಿದ್ದಾಳೆ. ಯುಗಾದಿ ಅಂತ ದೇವಸ್ಥಾನಕ್ಕೆ ಹೋಗಿದ್ದಳು. ನನಗೆ ಎಂಟು ದಿನದ ಹಿಂದೆ ಕಣ್ಣು ಆಪರೇಷನ್ ಆಯ್ತು. ದೀಪುಗೆ ಸೋಮವಾರ ಇಂಟರ್‌ವ್ಯೂ ಇದೆ. ಅವಳು ಬಂದಿರೋದು ಅವಳದ್ದೇ ಎಲ್ಲಾ ಕೆಲಸ. ದೀಪು, ಇವರು ರಾಜೀವ್ ಅತ್ತೆ ಮಾವ ಕಣೆ. ಈಗ ತಾನೇ ಬಂದರು. ಕಾಫಿ ಕೊಟ್ಟು ಊಟಕ್ಕೆ ರೆಡಿ ಮಾಡು." ಅಂತ ಹೇಳಿ "ಅತ್ತೆ ಈಗ ನಿಮ್ಮ ಕೈ ಕಾಲು ನೋವು ಕಡಿಮ ಆಗಿದೆಯಾ? ಆರ್‌ಥ್ರೈಟಿಸ್ನಿಂದ ಬಳಲುತ್ತಿರುವ ನಿಮಗೆ ಕೆಲಸ ಮಾಡಲು ಕಷ್ಟ ಆಗ್ತಿದೆಯಾ?" ಎಂಬ ಪ್ರಶ್ನೆಗೆ ಉತ್ತರಿಸದೆ ರಾಧಮ್ಮ ಯೋಚನೆಯಲ್ಲಿ ಮುಳಗಿದ್ದರು. ಮೂರು ಜನ ಮಕ್ಕಳು ಎಲ್ಲರೂ ಚೆನ್ನಾಗಿ ಓದಿ ಮುಂದೆ ಬಂದು ಸಂತೋಷ ಕೊಟ್ಟರೂ ಮೊದಲ ಮಗ ಜರ್ಮನ್ ಹುಡುಗಿ ಮದುವೆ ಮಾಡಿಕೊಂಡು ತಿಳಿಸಿದರೆ, ಮಗಳು ಕ್ರಿಶ್ಚಿಯನ್ ಹುಡುಗನೂಡನೆ ರಿಜಿಸ್ಟರ್ ಮದುವೆ ಮಾಡಿಕೊಂಡಿದ್ದು ಎಷ್ಟು ಅಘಾತವಾಗಿತ್ತು. ಸುಹಾಸನಿಗೆ ಕನ್ನಡದ ಹುಡುಗಿಯನ್ನೇ ನೋಡಿ ಮದುವೆ ಮಾಡಬೇಕೆಂಬ ತಮ್ಮ ಆಸೆಗೆ ಸುಹಾಸ್ ಒಪ್ಪಿ ಹುಡುಗಿಯನ್ನು ನೋಡಲು ಬಂದಾಗಿದೆ.

"ಚಿಕ್ಕಮ್ಮ ಎಲ್ಲರನ್ನೂ ಊಟಕ್ಕೆ ಕರೆದುಕೊಂಡು ಬನ್ನಿ" ಎಂಬ ದೀಪ್ತಿಯ ಧ್ವನಿಗೆ ರಾಧಮ್ಮ ತಮ್ಮ ಯೋಚನಾಲಹರಿಯಿಂದ ಹೊರಬಂದರು. ಸಿಹಿ ಊಟ ಮಾಡಿ "ಎಷ್ಟು ರುಚಿಯಾಗಿ ಅಡಿಗೆ ಮಾಡಿದ್ದಿ ದೀಪ್ತಿ. ಹೇಗೆ ಎಲ್ಲಾ ಕಲಿತೆ?" ಎಂದು ಹೊಗಳಿದಾಗ ರಂಜು "ಅತ್ತೆ, ದೀಪು ಕಲ್ಕತ್ತಾದಲ್ಲೇ ಬೆಳೆದಿದ್ದರೂ ಅಕ್ಕ ಭಾವ ಸಂಪ್ರದಾಯದಲ್ಲೇ ಬೆಳೆಸಿದ್ದಾರೆ. ಅಕ್ಕಾನೇ ಸಂಗೀತ ಹೇಳಿ ಕೊಟ್ಟಿದ್ದಾರೆ. ಕಥಕ್ ಡಾನ್ಸ್ ಪ್ರೋಗ್ರಾಮ್ಗೆ ಕಲ್ಕತ್ತಾಗೆ ನಾವು ಹೋಗಿದ್ವಿ. ಅತ್ತೆ ನಿಮ್ಮ ಮಕ್ಕಳು, ಮೊಮ್ಮಕ್ಕಳು ಹೇಗಿದ್ದಾರೆ? ಲಂಡನ್ನಿಗೆ ಹೋಗಿದ್ರಾ?" ಅಂದಾಗ ರಾಧಮ್ಮ ಬೇಸರದಿಂದ, "ಮೊಮ್ಮಕ್ಕಳಿಗೆ ನಾನು ಅಚ್ಚರಿ ವಸ್ತು. ಅವರ ಜರ್ಮನ್ ಭಾಷೆ ನನಗೆ ಬರೋಲ್ಲ. ಮೂಕಾಭಿನಯದ ಪರದಾಟ. ಸೊಸೆ ಒಳ್ಳೆಯವಳಾದರೂ ನಮ್ಮ ನಡೆನುಡಿ ಏನೂ ಗೊತ್ತಿಲ್ಲ. ಅಪರಿಚಿತರಂತೆ ಬಾಳೋದು ಬಹಳ ಕಷ್ಟ. ಮಗಳೊಡನೆ ದೂರವಾಣಿಯಲ್ಲಿ ಮಾತಾಡೋದು. ಅದಕ್ಕೆ ಈಗಲಾದರೊ ಸುಹಾಸನಿಗೆ ಒಪ್ಪಿಸಿ ನನಗೆ ಒಪ್ಪುವಂತಹ ಸೊಸೆನ ತರಬೇಕೆಂದಿದ್ದೆನೆ. ಸ್ನೇಹಿತರ ಮೂಲಕ ಹುಡುಗಿಯರನ್ನು ನೋಡುವ ಕಾರ್ಯಕ್ರಮ ಇದೆ. ನೀನು, ರಾಜೀವ್ ನಮ್ಮೊಡನೆ ಬರಬೇಕು." ಅಂದಾಗ ಅತ್ತೆಯ ಮಾತಿಗೆ ಒಪ್ಪಿ, "ಮಲಗಿಕೊಳ್ಳಿ ಬಹಳ ಸಮಯವಾಯಿತು." ಎಂದು ಉಪಚರಿಸಿದಳು ರಂಜನಿ.

ಬೆಳಗ್ಗೆ ಎಚ್ಚರಗೊಂಡ ರಾಧಮ್ಮನಿಗೆ "ಸುಮಂಗಲಿ, ಸುಖಕರಿ, ಸುವೇಷಾಢ್ಯಾ, ಸುವಾಸಿನಿ" ಹೀಗೆ ಲಲಿತಾ ಸಹಸ್ರನಾಮ ಸುಶ್ರಾವ್ಯವಾಗಿ ಕೇಳ್ತಾ ಇದೆ. ಕಾಫಿಯೊಂದಿಗೆ ರಂಜನಿ ಬಂದಾಗ ಇದು ದೀಪ್ತಿಯ ಧ್ವನಿ ಎಂದು ಗುರುತಿಸಿ ಅಚ್ಚರಿಪಟ್ಟರು.

ದೇವರ ಪೂಜಾಗೃಹದಲ್ಲಿ ರಂಗೋಲಿ, ಮಲ್ಲಿಗೆ ಹೂವಿನ ಅಲಂಕಾರ, ಊದುಬತ್ತಿಯ ಸುವಾಸನೆ. ದೀಪ ಬೆಳಗಿಸಿ ಪೂಜೆ ಮುಗಿಸಿ ಭಕ್ತಿಭಾವದಿಂದ ದೇವರಿಗೆ ನಮಸ್ಕರಿಸುತ್ತಿದ್ದ ದೀಪ್ತಿಯನ್ನು ನೋಡಿ ಆಶ್ಚರ್ಯವಾಗಿ ಹುಡುಗಿಯ ಚುರುಕುತನ ಜಾಣ್ಮೆಗೆ ತಲೆದೂಗಿ ಖುಷಿಪಟ್ಟರು. ಪೂರಿ ಸಾಗು ಸಿಹಿ ಸಜ್ಜಿಗೆ ತಿಂದು ರಂಜು ಮತ್ತು ರಾಜೀವ್ ಜೊತೆ ಹೊರಟ ರಾಧಮ್ಮನಿಗೆ ದೀಪೂನ ಕರೆಯಲು ಸಂಕೋಚವಾಗಿತ್ತು.

ಹೋದ ವರ್ಷ ಅಪ್ಪ ಬೇವು ಬೆಲ್ಲ ಕೊಟ್ಟು "ಹೊಸ ವರ್ಷದ ಶುಭದಿನ ಸಂತೋಷವಾಗಿರಲಿ" ಎಂದಿದ್ದರು. "ಬೇವು ಬೆಲ್ಲ ನಮ್ಮ ಬದುಕಿನ ಸಿಹಿ-ಕಹಿಗಳ ಪ್ರತೀಕ. ನೋವು-ನಲಿವುಗಳನ್ನು ಸಮಚಿತ್ತದಿಂದ ಸ್ವೀಕರಿಸಬೇಕೆಂಬ ಭಾವ ಇದರಲ್ಲಿದೆ." ಎಂದು ಹೇಳಿ ಬೇವು ಬೆಲ್ಲ ತಿಂದಿದ್ವಿ. ಆದರೆ ನಮ್ಮ ಮನೇಲಿ ಕಹಿಬೇವು ಜಾಸ್ತಿ ಆಯ್ತು. ಯುಗಾದಿ ಆದ ಕೆಲವು ದಿನದಲ್ಲೇ ಆಕಸ್ಮಿಕವಾಗಿ ಫ್ಯಾಕ್ಟರಿಯ ಬೆಂಕಿ ಅನಾಹುತದಲ್ಲಿ ಸ್ಥಳದಲ್ಲೇ ಮೃತಪಟ್ಟವರಲ್ಲಿ ಅಪ್ಪನೂ ಒಬ್ಬರಾಗಿದ್ದರು. ದೀಪ್ತಿ ಅಪ್ಪನ ನೆನಪಿನ ನೋವಿನಲ್ಲಿ ಕೊನೆ ಸೆಮಿಸ್ಟರ್ ಬರೆದು ಬಂದು, ಮುಂದೆ ಓದಲೇಬಾರದೆಂಬ ನಿರ್ಧಾರಕ್ಕೆ ಬಂದಿದ್ದಳು. ಅಪ್ಪನ ಕನಸಿನ ಗೋಪುರದಂತೆ ಎರಡನೇ ರ್‍ಯಾಂಕಿನಲ್ಲಿ ಉತ್ತೀರ್ಣಳಾಗಿದ್ರೂ ಸಂತೋಷವಾಗಿರಲಿಲ್ಲ. ತನ್ನ ವಿದ್ಯಾಭ್ಯಾಸಕ್ಕೆ ಮಾರ್ಗದರ್ಶಿಯಾಗಿ ಗುರುವಾಗಿದ್ದ ತಂದೆ ಅಗಲಿದ್ದು ತುಂಬಲಾರದ ನಷ್ಟ. ಜೀವನಪಥ ಎಷ್ಟು ವಿಚಿತ್ರ, ಎಲ್ಲಾ ಸುಖ ತಮ್ಮದು ಅಂತ ಧಾವಿಸುವಾಗ ವಿಧಿಯ ಮುಂದೆ ಮನುಷ್ಯನ ಆಟ ಏನೂ ಸಾಗದು. ಬದುಕು ಜಟಕಾಬಂಡಿ. ವಿಧಿಲೀಲೆಯ ಕೈಗೊಂಬೆಗಳು ನಾವು. ತನ್ನ ಕೆಲಸದ ಸಂದರ್ಶನಕ್ಕೆ ಇಲ್ಲಿಗೆ ಬಂದಿರುವ ದೀಪ್ತಿಗೆ ಚಿಕ್ಕಮ್ಮನ ತೃಪ್ತಿಗೆ ಹಬ್ಬದಲ್ಲಿ ಪಾಲ್ಗೊಳ್ಳಬೇಕಾಗಿದೆ. ಅಮ್ಮನಿಗೆ ಎಷ್ಟು ಬೇಜಾರಾಗಿದೆಯೋ ಅವರನ್ನು ಕರೆದುಕೊಂಡು ಬರಲು ಇಷ್ಟಪಟ್ಟಾಗ ತಾನು ಬರೋದೆ ಇಲ್ಲವೆಂಬ ಅವರ ಮಾತಿಗೆ ಮಣಿಯಲೇ ಬೇಕಾಯಿತು.


ಸುಹಾಸನೊಡನೆ ದೀಪು ತನ್ನ ಇಂಟರ್‌ವ್ಯೂ ಬಗ್ಗೆ ಸಲೀಸಾಗಿ ಮಾತಾಡಿಕೊಂಡಿದ್ದಾಳೆ. ಅವಳ ಮಾತುಗಾರಿಕೆ ಜಾಣ್ಮೆಗೆ ಸುಹಾಸ್ ಆಕರ್ಷಿತನಾಗಿರುವ ಬಗ್ಗೆ ದೀಪುಗೆ ಅರಿವೇ ಇಲ್ಲ. ಸಂದರ್ಶನದ ಯೋಚನೆಯಲ್ಲಿ ಮುಳುಗಿರುವ ಅವಳು ಸುಹಾಸನ ಅನುಭವವನ್ನು ಉತ್ಸಾಹದಿಂದ ಕೇಳಿಸಿಕೊಳ್ಳುತ್ತಿದ್ದಾಳೆ. ಚಿಕ್ಕಮ್ಮನ ಆದೇಶದಂತೆ ಸುಹಾಸ್ ಜೊತೆಯೇ ಸಂದರ್ಶನಕ್ಕೆ ಹೋಗಿ ವಾಪಸ್ಸು ಬಂದ ದೀಪ್ತಿಗೆ ಕೆಲಸ ಸಿಗುವುದೆಂದು ಸಂತೋಷವಾಗ್ತಾಯಿದೆ. ಸುಹಾಸ್ ಮತ್ತು ದೀಪುವನ್ನು ಒಟ್ಟಿಗೆ ನೋಡ್ತಾ ಇದ್ದ ರಾಧಮ್ಮ ರಘುನಾಥರವರು ದೀಪುವನ್ನು ಸೊಸೆಯಾಗಿ ಸ್ವೀಕರಿಸಲು ಇಷ್ಟಪಟ್ಟಿರುವುದಾಗಿ ತಿಳಿದ ರಂಜು ರಾಜೀವ್‌ಗೆ ಬಹಳ ಸಂತೋಷವಾಗಿದೆ. ಸುಹಾಸ್ ದೀಪ್ತಿ ಒಟ್ಟಿಗೆ ಒಳಗೆ ಬಂದಾಗ ದಂಪತಿಗಳ ಕಣ್ಣು ಮಗನ ಮೇಲೆ ನೆಟ್ಟಿದೆ. ಅವರಿಬ್ಬರ ಜೋಡಿ ನೋಡಿ, "ದೀಪು ನಿನ್ನನ್ನು ನೋಡಿದ್ರೆ ನಮ್ಮ ಸೊಸೆ ಅನ್ನಿಸುತ್ತಿದೆ." ಎಂದಾಗ ನಾಚಿನೀರಾದ ದೀಪು ಒಳಗೆ ಓಡಿದಳು. ದೀಪುವನ್ನು ಈ ಬಗ್ಗೆ ಕೇಳಿದ ರಂಜುಗೆ ನಗುವೇ ಉತ್ತರ. ರಾಧಮ್ಮನ ಆಸೆಯಂತೆ ಅಕ್ಕನಿಗೆ ಫೋನ್ ಮಾಡಿದ ರಂಜುವಿಗೆ, ಕಹಿಯಾದ ಬಾಳಿನಲ್ಲಿ ಬೆಲ್ಲದ ಸಿಹಿ ಸುದ್ದಿ ಕೇಳಿ ಗೌರಿ ತಾನು ಎರಡು ದಿನದಲ್ಲಿ ಬರುವುದಾಗಿ ತಿಳಿಸಿದ ಮಾತು ದೀಪೂ ಕಿವಿಗೂ ಬಿದ್ದು ಅವಳು ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬಂದು ಹೊಸತು ತರುತಿದೆ. ತನ್ನ ಎರಡು ಸಂದರ್ಶನಗಳೂ ಗೊತ್ತಿಲ್ಲದಂತೆ ಸಿಹಿ ಸುದ್ದಿಯಾದ ಸಂಭ್ರಮ ಸಂತೋಷದಲ್ಲಿ ಸಾರ್ಥಕತೆಯ ಭಾವ ಹೊಂದಿದಳು.

ವರುಷ ಉರುಳಿ ಬಂದಿದೆ ಯುಗಾದಿ
ತಂದಿದೆ ಬೇವು ಬೆಲ್ಲದ ಕಹಿ ಸಿಹಿ
ಬೆರಸಿದೆ ಮನಮನಗಳ ಸಿಹಿ ಸವಿ
ಮೂಡಿದೆ ಹರುಷದ ಸ್ನೇಹ ಪಲ್ಲವಿ
***

ಸಂಧ್ಯಾ ರವೀಂದ್ರನಾಥ್
ಕ್ಯಾಲಿಫೋರ್ನಿಯ

## ಗಣೇಶ ವಂದನೆ





ಪ್ರಭು ಮೂರ್ತಿ

ಶಿರಬಾಗಿ ನಮಿಸುವೆವು
ಗಣಪತಿಯೆ ನಿನಗೆ
ಕರಮುಗಿದು ವಂದಿಪೆವು
ಗಜಮುಖನೆ ನಿನಗೆ

ಆನೆಯ ಮುಖದವಗೆ
ಪಾರ್ವತಿಯ ಪುತ್ರನಿಗೆ
ವಿದ್ಯೆಯನು ನೀಡೆನುತ
ಬುದ್ಧಿಯನು ಕೊಡು ಎನುತ

ಸೊಂಡಿಲ ಬೆನಕನಿಗೆ
ಸುಂಡಿಲಿಯ ಗಣಪನಿಗೆ
ಮೋದಕವ ನೀಡುವೆವು
ಶಿವಪುತ್ರ ಸುಮುಖನಿಗೆ
***

“ಎಲ್ಲಾದರು ಇರು, ಎಂತಾದರು ಇರು,

ಎಂದೆಂದಿಗು ನೀ ಕನ್ನಡವಾಗಿರು”

# ಕನ್ನಡ ಕೂಟಕ್ಕೆ ಹಾರ್ದಿಕ ಶುಭಾಶಂಯುಗಳು



## ಬಿ ವಿ ಜಗದೀಶ್

## ಅನುರಾಧ ಜಗದೀಶ್

## ಕಾರ್ತಿಕ್ ಜಗದೀಶ್

## ಅಕ್ಷಯ್ ಜಗದೀಶ್

ಲೇ
ಖ
ನ

ತೊಂಬತ್ತು ವರ್ಷದ ಹರೆಯದವರು ಯಾಕಾಗಬಾರದು?

ಅಶ್ವಿನಿ ಸುರಪುರ
ಕ್ಯಾಲಿಫೋರ್ನಿಯ



# ಮೊಳಕಾಲ ಕೆಳಗೆ ಇರುವುದು ಹೆಂಗಸರ ಬುದ್ಧಿಯೋ? ವಯಸ್ಸೋ?

"ಹೆಂಗಸರ ಬುದ್ಧಿ ಮೊಳಕಾಲ ಕೆಳಗೆ" ಎಂದಾಗ ಹೆಂಗಸಾದ ನನ್ನನ್ನು ಹಿಡಿದು ಎಲ್ಲ ಹೆಂಗಸರಿಗೆ ಕೋಪ ಬರುವುದು ಸಹಜವೇ. ಆದರೆ ಅದನ್ನೇ ಸ್ವಲ್ಪ ತಿರುವು–ಮುರುವು ಮಾಡಿ "ಹೆಂಗಸರ ವಯಸ್ಸು ಮೊಳಕಾಲ ಕೆಳಗೆ" ಅಂದುಬಿಟ್ಟರೆ? ನಮಗೆಲ್ಲ ಖುಷಿಯಾಗುವುದೇನೋ. ಹೆಣ್ಣುಮಕ್ಕಳಿಗೆ ತಮ್ಮ ವಯಸ್ಸನ್ನು ಗುಟ್ಟಾಗಿಡುವುದು ಅದ್ಯಾಕೆ ಅಷ್ಟು ಮುಖ್ಯ ಅಂತೀನಿ. ಒಮ್ಮೆ ನನ್ನ ಒಬ್ಬ ಆಪ್ತಳು ಎಂದುಕೊಂಡ ಆಫೀಸ್ ಸಹೋದ್ಯೋಗಿಗೆ ಒಂದು ದಿನ ನನ್ನ ವಯಸ್ಸನ್ನು ರಟ್ಟು ಮಾಡಿದ್ದಲ್ಲದೇ, ಅವಳ ವಯಸ್ಸನ್ನೂ ಕೇಳಿಬಿಟ್ಟೆ ನೋಡಿ. ಆಗ ಅವಳು ಆ ಹಳೇ ಗಾದೆಯನ್ನು ನೆನಪಿಸಿಯೇ ಬಿಟ್ಟಳು – "ಹೆಂಗಸರ ವಯಸ್ಸನ್ನು ಮತ್ತು ಗಂಡಸರ ಸಂಬಳವನ್ನು ಕೇಳಬಾರದು" ಅಂತ. ನಾನೂ ಬಿಡಲಿಲ್ಲ. "ಸರಿ, ಹಾಗಿದ್ದರೆ ನಿನ್ನ ಸಂಬಳ ಎಷ್ಟು ಅಂತ ಹೇಳಿಬಿಡು" ಎಂದೆ. ಅವಳೂ ಜಾಣೆ. ಆಗ ಹೇಳಿದಳು, "ಈಗ ಗಂಡು–ಹೆಣ್ಣು ಎಂದೆಲ್ಲ ಭೇದವಿಲ್ಲವಾದ್ದರಿಂದ ಸಂಬಳದ ವಿಷಯ ಹೆಣ್ಣಿಗೂ ಅನ್ವಯಿಸುತ್ತದೆ." ನಾನೂ ಹಠಬಿಡದ ತ್ರಿವಿಕ್ರಮನಂತೆ "ಬರೀ ಸಂಬಳದ ವಿಷಯದಲ್ಲಿ ಮಾತ್ರ ಹೆಣ್ಣು–ಗಂಡು ಸಮಾನರೋ? ವಯಸ್ಸು ಕೇಳುವ, ಹೇಳುವ ವಿಷಯದಲ್ಲಿ ಕೂಡ ಸಮಾನರೊ?" ಎಂದಾಗ ಆ ದಿನವೇ ನಮ್ಮ ಮಿತ್ರತ್ವದ ಕೊನೆಯಾಯಿತು ನೋಡಿ.

ಈ ಗಂಡಸರ ಸಂಬಳದ ವಿಷಯವೂ ಸ್ವಲ್ಪ ಜಟಿಲವಾದುದೇ. ಸಂಬಳ ಎಷ್ಟು ಅಂತ ಯಾಕೆ ಕೇಳಬಾರದು? ಗಿಂಬಳ ಎಷ್ಟು ಎಂದು ಕೇಳಬಹುದೆ? ಈ ಮುಟ್ಠಾಳನಿಗೆ ಇಷ್ಟು ಕಡಿಮೆ ಸಂಬಳ ಬರುತ್ತದಲ್ಲ ಎಂದು ಯಾರಿಗೂ ಗೊತ್ತಾಗಬಾರದು ಅಂತೆಯೋ? ಈ ಜಿಪುಣನಿಗೆ ಇಷ್ಟು ಹೆಚ್ಚು ಸಂಬಳ ಬಂದರೂ ಒಂದು ಪುಡಿಗಾಸನ್ನೂ ಯಾರಿಗೂ ಕೊಡಲ್ಲ ಅಂತಾರಲ್ಲ ಅಂತೆಯೋ, ಅಥವಾ Income Taxನವರ ಹೆದರಿಕೆ ಅಂತೆಯೋ? ಅದಿರಲಿ, ಈಗ ಗಂಡಿನ ಸರಿ ಸಮಾನಳಾದ ಆಧುನಿಕ ಹೆಣ್ಣಿಗೆ ಎಷ್ಟು ಕಷ್ಟ ನೋಡಿ. ವಯಸ್ಸಿನ ಜೊತೆಗೆ ಅವಳು ಸಂಬಳ, ಗಿಂಬಳಗಳನ್ನೆಲ್ಲ ಗುಟ್ಟಾಗಿ ಇಡಬೇಕು, ಪಾಪ.

ಆ ದಿನ ನಾನು ಪಾರ್ಟಿಗೆ ಹೋದಾಗ ಮಹಿಳೆಯರ ಗುಂಪಿನಲ್ಲಿ ಒಬ್ಬ ಮನ್ಮಥ ಹರಟೆ ಹೊಡೆಯುತ್ತಿದ್ದ. ಎಲ್ಲರ ವಿಷಯ ತಿಳಿದುಕೊಳ್ಳುತ್ತಿದ್ದ ಅವನು ಒಬ್ಬ ಅಲ್ಪ ಉಡುಗೆ ಧರಿಸಿದ ಆಧುನಿಕ ಚೆಲುವೆಯನ್ನು ಸ್ವಲ್ಪ ಜಾಸ್ತಿಯೇ ವಿಚಾರಿಸಿಕೊಳ್ಳುತ್ತಿದ್ದ. ಅವಳಿಗೆ ಕಾಲೇಜಿಗೆ ಹೋಗುವ ಮಗ ಎಂದು ಗೊತ್ತಾದಾಗ ಬಹಳ ಗಾಬರಿ ವ್ಯಕ್ತಪಡಿಸಿ ಹೇಳಿದ, "My God! ನಿಮಗೆ ಕಾಲೇಜು ಓದುವ ಮಗನೇ? ಆದರೆ ನೀವು ತುಂಬಾ ಚಿಕ್ಕವರಂತೆ ಕಾಣುತ್ತೀರಿ." ಆ ಮಹಿಳೆಗೆ ಅಸಾಧ್ಯ ಹೆಮ್ಮೆ. ಡೈ ಹಚ್ಚಿಕೊಂಡ ಕೂದಲುಗಳನ್ನು ಸರಿಪಡಿಸುತ್ತ ತನ್ನ ಕೊಲ್ಗೇಟ್ ನಗೆ ಬೀರಿದಳು. ಆಗ ನನಗೆ ಮುಜುಗರವಾಯಿತು. ನಮ್ಮನ್ನು ಯಾರಾದರೂ "ನೀವು ತುಂಬಾ ಚಿಕ್ಕವರಂತೆ ಕಾಣುತ್ತೀರಿ." ಎಂದರೆ ಏನರ್ಥ? "ನೀವು ತುಂಬಾ ಚಿಕ್ಕವರಂತೆ ವರ್ತಿಸುತ್ತೀರಿ." ಎಂದರ್ಥವೋ? ಅಥವಾ "ನಿಮಗೆ ವಯಸ್ಸು ಜಾಸ್ತಿ ಇದ್ದರೂ ಬಣ್ಣ ಬಳಿದುಕೊಳ್ಳುವುದು ಮತ್ತು ಚಿಕ್ಕವರೆಂಬಂತೆ ನಾಟಕವಾಡುವುದು ಚೆನ್ನಾಗಿ ಗೊತ್ತು ಅಂತೆಯೋ?" ಒಟ್ಟಿನ ಮೇಲೆ ಇದು ಹೊಗಳಿಕೆಯೆಂಬಂತೆ ನನಗೆಂದೂ ಅನ್ನಿಸಿಲ್ಲ ನೋಡಿ.

ವಯಸ್ಸಿನ ಕುರಿತು ಇರುವ ಮೋಜು ನೋಡಿ – ಒಬ್ಬ ಆರು ವರ್ಷದ ಬಾಲಕನಿಗೆ ವಯಸ್ಸು ಕೇಳಿದರೆ, ಒಂದು ವರ್ಷ ಹೆಚ್ಚು ಮಾಡಿ "ನನಗೆ ಈಗ ಏಳು ವರ್ಷ." ಅಂತ ಬೀಗುತ್ತಾನೆ. ಹದಿನಾರು ವರ್ಷದ ಹೆಂಗಳೆಯರಿಗೆ ಕೇಳಿದರೆ ಅವರು ತಮ್ಮ ವಯಸ್ಸನ್ನು ಹೇಳಿಬಿಡುತ್ತಾರೆ. ಅದರ ಮುಂದೆ ಬಂತು ನೋಡಿ ತಾಪತ್ರಯ. ಆಗಿನಿಂದಲೇ ಬುದ್ಧಿಯ ಅಧಃಪತನ, ಅಂದರೆ ಬುದ್ಧಿ ಮೊಳಕಾಲ ಕೆಳಗೆ ಜಾರಲು ಶುರು ಆಗುತ್ತದೋ ಏನೋ? ಹದಿನಾರು ವರ್ಷಕ್ಕೆ ನಮ್ಮ ಬೆಳವಣಿಗೆ ನಿಂತು ಬಿಡಬೇಕು ಎಂದು ಬಯಸುವ ಹೆಂಗಸರು, ಹದಿನಾರರ ವಯಸ್ಸು ಇರುವ ಹುಡುಗಿಯರನ್ನು ಸ್ವಲ್ಪ ಗಮನಿಸಿರಬಹುದಲ್ಲವೇ? ಅದ್ಯಾಕೆ? ತಮಗೇ ಆ ವಯಸ್ಸಿನ ಮಕ್ಕಳಿರಬಹುದಲ್ಲವೇ? ಆ teenage ಮಕ್ಕಳು ಯಾವಾಗ ಮನೆ ಬಿಟ್ಟು ಹೋಗುತ್ತವೆ ಅನ್ನುವಂತಹ ಕಾಲ ತಮಗೇ ಬಂದಿರಬೇಕಾದರೆ, ತಾವೇ ಹಾಗಾಗಬೇಕೆನ್ನುವ ಮಂಗಬುದ್ಧಿ ಯಾಕೆ ಬರುತ್ತದೊ? ಇದು ಮೊಳಕಾಲಿನ ಕೆಳಗಿನ ಬುದ್ಧಿಯೇ ಸರಿ.

ಅಲ್ಲ, ಹೆಂಗಸಿಗೆ ತಾನು ವಯಸ್ಸಾದವಳು ಅಂತ ಅನ್ನಿಸಿದರೇನೇ ತನ್ನ ವಯಸ್ಸನ್ನು ತಾನು ಮುಚ್ಚಿಕೊಳ್ಳಬೇಕು ಅಲ್ಲವೇ? ಹಾಗನ್ನಿಸದಿದ್ದರೆ? ಇತ್ತೀಚೆಗೆ ನಡೆದ ಒಂದು ಚಿಕ್ಕ ಸನ್ನಿವೇಶವು, ಈ ವಯಸ್ಸಿನ ವಿಷಯದಲ್ಲಿಯ ನನ್ನ ದೃಷ್ಟಿಕೋನವನ್ನೇ ಬದಲಾಯಿಸಿತು ನೋಡಿ. ಒಬ್ಬ ಸಂಸ್ಕೃತ ಪಂಡಿತರ ಜೊತೆಗೆ ನಾನು ಹಾಗೂ ಇನ್ನಿತರರು ಸಾಕಷ್ಟು ಬಾರಿ email ದ್ವಾರಾ ಸಂಭಾಷಣೆ ನಡಿಸಿದ್ದೆವು. ಸಂಸ್ಕೃತದಲ್ಲಿ ಅಭಿರುಚಿಯಿದ್ದ ನನಗೆ ಹಾಗೂ ನನ್ನ ಮಿತ್ರರಿಗೆ ಈ ಮಹಾನುಭಾವರು ತುಂಬಾ ಸಹಾಯ ಮಾಡಿದರು. ಮುಂದೆ ಅವರನ್ನು ಭೇಟಿಯಾಗುವ

ಪುಟ 185 . . .